Sri H. SIDDAIYA.—I want notice.

Sri M. GOVINDA REDDY.—Has it come to the notice of the Hon'ble Minister that there are difficulties for him to secure witnesses when he launches cases?

Sri H. SIDDAIYA.—There is considerable difficulty.

Sri M. GOVINDA REDDY.—Has it come to the notice of the Government that witnesses are not paid batta and therefore they refuse to come to courts?

Sri H. SIDDAIYA.—All witnesses are not refused to be paid.

Sri M. GOVINDA REDDY.—Would it not be better for the Government to devise some method of paying the witnesses at least enough to cover their travelling and food expenses when they attend courts?

Sri H. SIDDAIYA.—It is a question of money. It will be considered.

Sri M. GOVINDA REDDY.—Will the Government consider it advisable to enlist the co-operation of non-officials by appointing prohibition committees in every district?

Sri H. SIDDAIYA.—Certainly.

Mr. SPEAKER.—Question-time is over.

Fixing a date for discussion of the Points of Order raised by the Leader of the House on 28th March 1950.

*Mushir-ul-Mulk J. MAHOMED IMAM (Chitaldrug *cum* Tumkur—Muslim).—Sir, I have got a representation to make. Yesterday we had a discussion about a point of order raised by the Leader of the House regarding the rights and privileges of the House to discuss the powers exercised in the course of the administration by the Centre and by the President.

*Sri K. CHENGALARAYA REDDY (Leader of the House).—Not administrative matters; again the Hon'ble Member is making the mistake.

Janab J. MAHOMED IMAM.—The Leader of the House raised the question and in view of the importance of the matter, it is necessary to discuss the entire matter carefully and come to a decision. The Chair was pleased to say that some time would be allowed for discussion of this subject. Yesterday it was not pursued. What I am anxious is that any point of order raised must be settled as early as possible and it must be given priority, because the ruling on that point of order will be a guidance to the Members. And so, I request the Chair to fix the earliest possible date so that the matter may be discussed and a ruling given by the Chair. I suggest that this may be taken up, if the Leader of the House has not objection, on Monday next, because unless this point is settled, we cannot take up further business.

Mr. SPEAKER.—If the Government have no objection, we can devote an hour on Monday, 3rd April 1950.

Sri K. CHENGALARAYA REDDY.—April 3rd is an official day. We can take it up on the 4th, a non-official day.

Janab J. MAHOMED IMAM.—I am anxious that this must be settled at the earliest date. It is something like a privilege motion and it should have priority. After this discussion possibly we may have to table some interpellations or resolutions. This is a vital matter and a ruling on this point is holding up the work of this House. I submit that we can take up this point on Monday, 3rd April.

Sri K. CHENGALARAYA REDDY.—Monday has been allotted for official business—consideration of Bills. Government are anxious to complete their legislative business scheduled to be taken up during the Session and if a necessity arises, the session may have to be continued on the 5th of April also to complete the legislative business, if any, left over. So I would not like the time allotted for official business to be encroached upon. If the Hon'ble Member is anxious to take up the matter on that day itself, we can have a special afternoon session for an hour or an hour and a half to finish it.

Mr. SPEAKER.—Is the Hon'ble Member Janab Mahomed Imam agreeable to it?

Janab J. MAHOMED IMAM.—We are agreeable.

Mr. SPEAKER.—We shall meet on Monday, 3rd April, at four o'clock, to discuss this point.

THE BUDGET FOR 1950-51.

Second Stage—Voting on Demands for Grants.

Mr. SPEAKER (Sri V. Venkatappa).—The following are the cut motions that have been selected for discussion.

105, 106, 107, 110, 112, 113, 114, 117, 123, 125,.........................

Janab J. MAHOMED IMAM.—I request that cut motion No. 133 under Irrigation may also be included.

Mr. SPEAKER.—Alright.

133, 134, 139, 144, 147, 148. Demand No. 12, Chief Minister.

Demand No. 12.—18. Courts of Law.

Sri K. CHENGALARAYA REDDY (Chief Minister).—Sir, on the recommendation of His Highness the Maharaja, I beg to move :

" That a sum not exceeding Rs. 19,65,900 be granted to the Government to defray the charges which will come in course of payment during the year ending 31st day of March 1951, in respect of 'Courts of Law'."

Mr. SPEAKER.—Motion moved :

" That a sum not exceeding Rs. 19,65,900 be granted to the Government to defray the charges which will come in course of payment during the year ending 31st day of March 1951, in respect of 'Courts of Law'."

Cut Motion No. 105 stands in the name of Janab Abdur Rahman. He may move it.

Increasing the scale of fees given to Lawyers.

Janab SYED ABDUR RAHMAN (Chikmagalur *cum* Shimoga—Muslim).—I beg to move :

"That the demand under the head '18. Courts of Law' for Rs. 19,65 900 be reduced by Rs. 100 (to urge upon the Government the necessity for increasing the scale of fees given to lawyers on account of the present high cost of living)."

L. A.

Sir, this scale of fee was fixed by the High Court more than 50 years ago. I do not want to make an elaborate argument in respect of increasing the percentage of fee to be fixed to the lawyers. Lawyers as a noble class following a noble profession, you know what service they have been rendering to the country. It is the lawyers who play a very great part in moulding the future of the country and in shaping the destiny of the people and we find that almost all the Cabinet Members are very good lawyers and very famous lawyers.

Sri M. GOVINDA REDDY (Chitaldrug District—General).—Some of them are dismissed lawyers also. (Laughter).

Janab SYED ABDUR RAHMAN.—But some of them are considered to be very eminent lawyers of our State of whom we are very proud. The Hon'ble Leader of the House, Sri H. C. Dasappa, Sri T. Mariappa, Sri H. Siddaiya, they are all reputed lawyers.

Mr. SPEAKER.—The Chief Minister never practised. (Laughter).

Janab SYED ABDUR RAHMAN.—But he has enrolled himself. Once he said he attended the court only on one day. He is a lawyer all the same. Even among the Hon'ble Members of this House, many are lawyers. My contention is this. Lawyers are law makers, law givers, law interpreters...

SOME HON'BLE MEMBERS.—They are not law makers.

Janab SYED ABDUR RAHMAN.—And whatever that can be spoken of the lawyers, of that aspect I am concerned. This fee was fixed 50 years ago when the cost of living was very cheap. For instance, ragi was being sold at the rate of 50 seers a rupee. This scale differs from place to place. In Bangalore a client can very gladly pay 10 per cent, in Shimoga it may be just the schedule fee or even less than 5 per cent; in Sagar it may not even be 2 per cent. That is the fate of the lawyers. I am not talking of eminent lawyers who are earning very good fees. But you know, the number of lawyers is increasing and the number of cases on file is comparatively

reduced. Let them get good fees for the work so that they may do their work very earnestly and conscientiously. If a lawyer accepts a small number of cases with very good fees, he would be able to pay more attention and probably he would be able to get better justice to the clients. I hope this House will give the fullest support as not much argument is necessary. With these few words I move this cut motion.

Mr. SPEAKER.—Cut motion moved :

"That the demand under the head '18' Courts of Law' for Rs. 19,65 900 be reduced by Rs. 100."

ಶ್ರೀ ಕೆ. ಸುಬ್ಬರಾಯರು (ಬೆಂಗಳೂರು ಜಿಲ್ಲೆ).—ಒಂದೇ ಒಂದು ವಿಷಯ ಹೇಳುತ್ತೇನೆ. ಹೆಚ್ಚಾಗಿ ಹೇಳಬೇಕಾಗಿಲ್ಲ. ಇದರಲ್ಲಿ ಸರ್ಕಾರದವರಿಗೆ ಯಾವ ವಿಧವಾದ ಹಣಕಾಸಿನ ತೊಂದರೆಯೂ ಆಗುವುದಿಲ್ಲ. ಅದಕ್ಕೆ ಬದಲಾಗಿ ಪ್ರಜೆಗಳಿಗೆ ತೊಂದರೆಯನ್ನು ತಪ್ಪಿಸಿದ ಹಾಗಾಗುತ್ತದೆ ಎಂದು ಹೇಳುತ್ತೇನೆ. ಏಕೆಂದರೆ, ಸಾಧಾರಣವಾಗಿ ಜನಾಬ್ ಅಬ್ದುಲ್ ರಹಮಾನ್‌ರವರು ಹೇಳಿದ ವಿಷಯಗಳೆಲ್ಲವನ್ನೂ ಅನುಮೋದಿಸುತ್ತೇನೆ. ಈಗ ತಾವು ಯಾವುದೋ ಒಟೀರಾಯನ ಕಾಲದ ಸ್ಕೇಲನ್ನು ಇಟ್ಟಿದ್ದೀರಿ. ಈ ಕಾಲದಲ್ಲಿ ಲಾಯರುಗಳು 5 ರೂಪಾಯಿನಂತೆ ತೆಗೆದುಕೊಂಡು ಕೆಲಸಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಹೆಚ್ಚಾಗಿಯೇ ತೆಗೆದುಕೊಳ್ಳುತ್ತೇವೆ. ಕಕ್ಷಿಗಾರರೂ ಹೆಚ್ಚಾಗಿಯೇ ಕೊಡುತ್ತಾರೆ. ಆದರೆ ಕೆಲವು ಸಂದರ್ಭಗಳಲ್ಲಿ ಅದನ್ನು ಪ್ರತಿ ಕಕ್ಷಿಗಳಿಂದ ವಸೂಲು ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ. ಡಿಕ್ರಿಯಲ್ಲಿ ನಿಗದಿಯಾಗಿ 100 ಕ್ಕೆ 5 ರೂಪಾಯಿನಂತೆ ಬರೆದಿರುವುದರಿಂದ ಅವನು ಅಷ್ಟೇ ಕೊಡುತ್ತಾನೆ. ನಾವೇನೋ ಕೆಲಸ ಮುಗಿಯುವ ಹೊತ್ತಿಗೆ ಹೆಚ್ಚಾಗಿ ಫೀಜು ತೆಗೆದುಕೊಂಡೇ ಇರುತ್ತೇವೆ. ಇಷ್ಟು ಮಾತ್ರ ಹೇಳುತ್ತೇನೆ. ಕಕ್ಷಿಗಾರರು ಕೋರ್ಟಿಗೆ ಬರುತಾ ರೆ, ಏನೋ ಒಂದು ತಕರಾರು ಹಾಕುವುದರಿಂದ ಬೇಕಾದಷ್ಟು ಹಣ ಹೆಚ್ಚಿಗೆ ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಹೆಚ್ಚು ಫೀಜು ಕೊಡುತ್ತಾರೆ. ಎದುರು ಕಡೆಯವರು ಎಂದರೆ ಅವರಿಗೆ ಮೋಸ ಮಾಡಿದವರು ಅಥವಾ ತೊಂದರೆ ಮಾಡಿದವರು, ಅವರೂ ಕೂಡ ಹೆಚ್ಚು ಫೀಜು ಕೊಡಬೇಕಾಗುತ್ತದೆ. ಇಲ್ಲದೇ ಇದ್ದರೆ ಪ್ರಯೋಜನವಾಗುವುದಿಲ್ಲ. ಹಾಗಿರುವಾಗ ಇದರಲ್ಲಿ ಸರ್ಕಾರದವರಿಗೆ ನೇರವಾಗಿ ಯಾವ ವಿಧವಾದ ಹಣಕಾಸಿನ ತೊಂದರೆಯೂ ಬರುವುದಿಲ್ಲ. ಇಲ್ಲಿ ಸೂಚಿಸಿರುವಂತೆ ಸ್ಕೇಲನ್ನೂ ಹೆಚ್ಚು ಮಾಡುವುದರಿಂದ ಕೊಡುವವರಿಗೂ ಕಷ್ಟವಾಗುವುದಿಲ್ಲ. ಏಕೆಂದರೆ ಎದುರು ಕಡೆಯವರಿಂದ ಅದೂ ಬರುತ್ತದೆ. ಕೆಲವು ಸಂದರ್ಭಗಳಲ್ಲಿ ಕೆಲವರು ಸುಳ್ಳು ತಕರಾರು ಹಾಕಿರುತ್ತಾರೆ. ಅವರದು ದೋಷ ಇರುತ್ತದೆ. ಆಗ ಹೆಚ್ಚು ಫೀಜು ಕೊಡಬೇಕಾಗುತ್ತದೆ ಎಂಬ ಭೀತಿಯಿಂದ ತಕರಾರು ವಾಪಸ್ಸು ತೆಗೆದುಕೊಳ್ಳಬಹುದು. ಮತ್ತು ಆ ರೀತಿ ಸುಳ್ಳು ತಕರಾರುಗಳು ಬರುವುದೂ ಕಡಿಮೆಯಾಗುತ್ತದೆ. ಆದ ರಿಂದ ಹೀಗೆ ಹೆಚ್ಚು ಮಾಡುವುದರಿಂದ ಈಗಿನ ಕಾಲದಲ್ಲಿ ಲಾಯರುಗಳಿಗಿಂತಲೂ ಕಕ್ಷಿಗಾರರ ಹಿತವನ್ನೇ ಸಾಧಿಸಿದ ಹಾಗಾಗುತ್ತದೆ ಮತ್ತು ಪರೋಕ್ಷವಾಗಿ ಅವರಿಗೂ ಪ್ರತ್ಯಕ್ಷವಾಗಿ ನಮಗೂ ಅನುಕೂಲವಾಗುತ್ತದೆಂದು ಹೇಳಿ ಇದನ್ನು ಮಾನ್ಯ ಸದಸ್ಯರೆಲ್ಲರೂ ಒಪ್ಪಬೇಕೆಂದು ಹೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಈ ಕತ್ತರಿ ನಿರ್ಣಯವನ್ನು ಈ ವಿಧದಲ್ಲಿ ತರಬಾರದಾಗಿತ್ತೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಶ್ರೀಮಾನ್ ಕೆ. ಸುಬ್ಬರಾಯರಿಗೆ ಒಂದು ವಿಷಯವನ್ನು ಹೇಳಬೇಕಾಗುತ್ತದೆ. "ಯಾರೋ ಒಬ್ಬ ಅಮಲ್ದಾರರು ಯಾರೋ ಒಬ್ಬ ಶೇಕದಾರರಿಗೆ ಜುಲ್ಮಾನೆ ಹಾಕಿದರಂತೆ. ಆ ಶಿಕ್ಷೆ ರೈತರಿಗೆ ತೊಂದರೆಯಾಗುತ್ತದೆ ದಯವಿಟ್ಟು ಹಾಕಬೇಡಿ ಎಂದು ಹೇಳಿದರಂತೆ" ಏಕೆಂದರೆ ಆ ಹಣವನ್ನು ಅವರಿಂದಲೇ ತೆಗೆದುಕೊಂಡು ಕೊಡುವುದು ಅದಕ್ಕೋಸ್ಕರ. ಆ ರೀತಿ ಯೋಚನೆ ಮಾಡಿದರೆ ನಾವೇನೂ ಇಷ್ಟೇ ಅಂತ ತೆಗೆದುಕೊಂಡು ಕೆಲಸ ಮಾಡುವುದಿಲ್ಲ. ಕಕ್ಷಿಗಾರರಿಂದ ಬೇಕಾದಷ್ಟು ತೆಗೆದುಕೊಳ್ಳುತ್ತೇವೆ. ಅದು ಕೇಸಿನಲ್ಲಿ ಸೇರಿರುವುದಿಲ್ಲ. ಆ ರೀತಿ ಅನುಕೂಲಗಳು ಇದ್ದೇ ಇವೆ ಎಂದು ಹೇಳುತ್ತೇನೆ. ಷೆಡ್ಯೂಲ್ ಫೀಜನ್ನು ನಿರ್ದಿಷ್ಟವಾಗಿ ಷೆಡ್ಯೂಲ್‌ನಲ್ಲಿ ಇಷ್ಟೇ ಇದೆ ಎಂದು ಹೇಳಿ ಅಷ್ಟನ್ನೇ ಕೇಳಿದ ಲಾಯರನ್ನು ನಾನು ಖಂಡಿತವಾಗಿಯೂ ನೋಡಲಿಲ್ಲ. ಆ ರೀತಿ ಷೆಡ್ಯೂಲ್‌ನಲ್ಲಿರುವುದನ್ನು ಕೇಳಿದ್ದೇನೆ ಎಂದು ಇಲ್ಲಿ ಯಾರಾದರೂ ಒಬ್ಬರು ಹೇಳಿದರೆ ಸಾಕು. ಆ ರೀತಿ ಒಂದು ಕೇಸೂ ಸಹ ಇಲ್ಲ. ಕೊನೆಗೆ ಈ ಖೋತಾ ನಿರ್ಣಯವನ್ನು ಸೂಚಿಸಿದವರು ಆ ರೀತಿ ತೆಗೆದುಕೊಂಡಿದ್ದೇನೆ ಎಂದು ಹೇಳಿದರೂ ಒಪ್ಪಿಕೊಳ್ಳಬಹುದು. ಇದರಲ್ಲಿ ಇನ್ನೊಂದು ವಿಚಾರ ಇದೆ. ಕಕ್ಷಿಗಾರರಿಗೆ ತೊಂದರೆ ಇದೆ. ಆದ್ದರಿಂದ ಕಕ್ಷಿಗಾರರು ಕೇಳಬೇಕೇ ಹೊರತು ಲಾಯರುಗಳು ಕೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಅವರು ಕಕ್ಷಿಗಾರರ ಪರವಾಗಿ ಮಾತನಾಡುತ್ತಾರೋ! ಅಥವಾ ಲಾಯರುಗಳ ಪರವಾಗಿ ಮಾತನಾಡುತ್ತಾರೋ.

ಶ್ರೀ ಎ. ಭೀಮಪ್ಪನಾಯಕರು.—ಕಕ್ಷಿಗಾರರು ಷೆಡ್ಯೂಲ್‌ನಲ್ಲಿರುವುದಕ್ಕಿಂತಲೂ ಜಾಸ್ತಿಯಾಗಿಯೇ ಕೊಡುತ್ತಾರೆ. ಒಂದು ವಿಚಾರ ಹೇಳುವುದಾದರೆ ಲಂಚ ನಿರೋಧ ಸಮಿತಿಯವರು ಆ ರೀತಿ ಷೆಡ್ಯೂಲ್‌ನಲ್ಲಿ ನಿರ್ದಿಷ್ಟವಾಗಿರುವುದಕ್ಕಿಂತಲೂ ಜಾಸ್ತಿ ತೆಗೆದುಕೊಳ್ಳುತ್ತಾರೆಂದು ತಿಳಿದು ಬಂದರೆ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದು ಒಳ್ಳೆಯದೆಂದು ಕಾಣುತ್ತದೆ. If that is the case, let them ask the parties and take what they like. Why should they ask for a revision of the schedule rates ? It depends upon the efficiency of the lawyer He may say, 'I am not going to take up this case for 5 percent.' 5%. ಕೊಟ್ಟರೇ ಮಾಡುತ್ತೇನೆ ಎಂದು ಹೇಳಬಹುದು. ಯಾವುದೊ ಸಂದರ್ಭದಲ್ಲಿ ಯಾರೋ ಒಬ್ಬ ಮದರಾಸಿನಲ್ಲಿರುವ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರಿಗೆ ಸೇಕಡ 500 ರಂತೆ ಫೀಜ್ ಕೊಟ್ಟಿದ್ದಾನೆಂದರೆ, ಇಲ್ಲಿ ನಮಗೂ ಅದೇ ರೀತಿ ಸಿಕ್ಕಬೇಕೆಂದರೆ ಅದು ಹೇಗೆ ಸಾಧ್ಯ ? ನಿಜ; ಪಾರ್ಟಿಗಳು ಹಾಗೆ ಕೊಡುತ್ತಿದ್ದರೆ ಎಲ್ಲರಿಗೂ ಆದಾಯ ಜಾಸ್ತಿ ಬಂದೇ ಬರುತ್ತೆ. ಆದರೆ ಪಾರ್ಟಿಗೆ ಬರತಕ್ಕ ಆದಾಯವೇನು ? ಕೆಲವು ಕೇಸುಗಳಲ್ಲಿ ನಾನು ನೋಡಿರುವ ಹಾಗೆ ಷೆಡ್ಯೂಲಿನಲ್ಲಿ ಸೇಕಡ 5 ರಂತೆ ಫೀಜು ಕೊಡಬೇಕೆಂಬ ನಿಯಮವಿದ್ದರೂ ಕೂಡ 10-20 ಸಾವಿರ ರೂಪಾಯಿಗಳ ವ್ಯವಹಾರದಲ್ಲಿ ಲಾಯರುಗಳು

ಸೇಕಡ 2 ರಂತೆ ಫೀಜನ್ನು ತೆಗೆದುಕೊಂಡು ಕೆಲಸ ಮಾಡಿದ್ದಾರೆ. ಇದರಿಂದ ಷೆಡ್ಯೂಲಿನ ಟಿಕ್ಕಟ್ಟು ಎಲ್ಲಿದೆ? ಆಗ ಷೆಡ್ಯೂಲು ಏನಾಯಿತು? ಷೆಡ್ಯೂಲಿನಲ್ಲಿ ಆ ರೀತಿ ನಮೂದು ಮಾಡಿದ್ದ ಮಾತ್ರಕ್ಕೇ ಅದರಂತೆ ಯಾರೂ ನಡೆಸುತ್ತಿಲ್ಲ. ಇದೆಲ್ಲ ಆಯಾಯ ಸಂದರ್ಭಗಳಿಗನುಗುಣವಾಗಿ ಮತ್ತು ಆ ವ್ಯವಹಾರಗಳ ರೀತಿ ನೀತಿಗನುಸಾರವಾಗಿ ಹೋಗುತ್ತದೆ. ಈಗ ಎಲ್ಲಿನೋಡಲಿ, ಯಾವ ಬಾಬಿನಲ್ಲಿ ನೋಡಲಿ, ಖರ್ಚನ್ನು ಕಮ್ಮಿ ಮಾಡಬೇಕೆಂಬ ಕೂಗು ಕೇಳಿ ಬರುತ್ತದೆ. ಲಿವಿಂಗ್ ಇಂಡೆಕ್ಸ್ ಕಡಿಮೆ ಮಾಡುತ್ತಿರುವಾಗ ಈ ಷೆಡ್ಯೂಲು ಫೀಜನ್ನು ಜಾಸ್ತಿ ಮಾಡಬೇಕೆಂದು ಕೇಳಿರುವುದು ಸರಿಯಲ್ಲ. ಆದ್ದರಿಂದ ಸೂಚಕರು ಇದನ್ನು ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ದಿವಸಕ್ಕೆ ನೂರಾರು, ಸಾವಿರಾರು ಕೇಸುಗಳು ದಾಖಲಾಗುತ್ತಲೇ ಇವೆ. ಹಾಗೆ ಕೋರ್ಟಿಗೆ ಹೋಗಿ ಹೊಡೆದಾಡಿ ಕಡೆಯಲ್ಲಿ ಗೆದ್ದವನು, ಸೋತಹಾಗೆಯೂ, ಸೋತವನು ಸತ್ತಹಾಗೆಯೂ ಎಂದು ಭಾವಿಸಲಾಗಿದೆ. ಎಷ್ಟೋ ವ್ಯವಹಾರಗಳಲ್ಲಿ 1,000 ರೂಪಾಯಿ ಬರುವ ಕಡೆ 100–200 ರೂಪಾಯಿಗಳಿಗೆ ಡಿಕ್ರಿ ದೊರೆತಿರುವ ಸಂಭವಗಳಿವೆ. ಅಂಥ ಸಂದರ್ಭಗಳಲ್ಲಿ ಪಾರ್ಟಿಗಳ ಗತಿಯೇನಾಗಬೇಕು? ಅವರು ಕೋರ್ಟು ಖರ್ಚನ್ನು ಕೊಡಬೇಕು. ಇತ್ತಲಾಗಿ ಲಾಯರ ಫೀಜನ್ನೂ ಕೊಡಬೇಕು. ಕಡೆಗೆ ಆಗುವ ತೀರ್ಮಾನ ಯಾರಿಗೂ ಗೊತ್ತಿರುವುದಿಲ್ಲ. ಹೀಗೆ ಕೋರ್ಟಿಗೆ ಹೋಗತಕ್ಕ ಜನಗಳಿಗೆ ನಾನಾ ಕಷ್ಟನಷ್ಟಗಳಿರುತ್ತವೆ. ಏನೋ ಗೆದ್ದವನಿಗಂತೂ ಖರ್ಚಿನ ಮೇಲೆ ದೃಷ್ಟಿ ಅಷ್ಟಾಗಿ ಬೀಳುವುದಿಲ್ಲ. ಏಕೆಂದರೆ, ನ್ಯಾಯ ಅವನ ಕಡೆಗೆ ದೊರೆತಿರುತ್ತದೆ. ಹಾಗೆ ನ್ಯಾಯ ದೊರೆಯದೆ ಸೋತವನ ಗತಿಯೇನಾಗಬೇಕು? ಈ ರೀತಿ ಫೀಜನ್ನು ಹೆಚ್ಚಿಸಬೇಕೆಂಬುದನ್ನು ನಾನು ಖಂಡಿತ ಒಪ್ಪುವುದಿಲ್ಲ. ಇದನ್ನು ನಾನು ವಿರೋಧಿಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ವಿಷಯ ಸಭೆಯಲ್ಲಿ ಚರ್ಚೆಯಾಗುತ್ತಿರುವಾಗ ಒಂದು ಹೊಸ ಅಂಶ ಬೆಳಕಿಗೆ ಬಂದಿರುತ್ತೆ. ಕೋರ್ಟಿಗೆ ಬೀಳತಕ್ಕ ವ್ಯವಹಾರದ ಹಣ ಮತ್ತು ಕೋರ್ಟು ಸ್ಟಾಂಪ್ ಫೀಜಿನ ಮೇಲೆ ನಿರ್ಧರಿಸಿರುವ ಪ್ರಕಾರ ಲಾಯರುಗಳು ತಮ್ಮ ಫೀಜನ್ನು ತೆಗೆದುಕೊಳ್ಳುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಈ ಬಾಬಿನಲ್ಲಿಯೂ ಬ್ಲಾಕ್ ಮಾರ್ಕೆಟ್ ನಡೆಯುತ್ತಿದೆಯೆಂಬುದು ಈಗ ನಮ್ಮ ಗಮನಕ್ಕೆ ಬಂದಿರುತ್ತೆ.

ಅಧ್ಯಕ್ಷರು.—ತಾವು ಲಾಯರೂ ಆಗಿಲ್ಲ ಮತ್ತು ಕಕ್ಷಿಗಾರರೂ ಅಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ ಬಗ್ಗೆ ವಿದ್ಯಾ ಮಂತ್ರಿಗಳು ಕೊಂಚ ಪರಿಶೀಲನೆ ಮಾಡಬೇಕು. ಲಂಚನಿರೋಧ ಇಲಾಖೆಯವರಿಗೆ ನಿಗಾ ಇಡುವಂತೆ ಸೂಚನೆ ಕೊಡಬೇಕೆಂದು ಸೂಚಿಸುತ್ತೇನೆ. ಯಾವ ಯಾವ ಕೇಸುಗಳಲ್ಲಿ ವಿಧಾಯಕವಾಗಿರತಕ್ಕ ಫೀಜಿಗಿಂತಲೂ ಹೆಚ್ಚಾಗಿ ತೆಗೆದುಕೊಳ್ಳುತ್ತಿದ್ದಾರೋ ಅದನ್ನು ಕಂಡುಹಿಡಿದು...............

Mr. SPEAKER.—Hon'ble Member cannot go beyond the point that has been raised in the cut motion.

Sri S. RANGARAMIAH (Mysore District-General).—What is his experience?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈಗ ಲಾಯರುಗಳಿಗೆ ಕೊಡತಕ್ಕ ಫೀಜು ಈಗ ಷೆಡ್ಯೂಲಿನಲ್ಲಿ ಎಷ್ಟು ಇದೆಯೋ ಅದಕ್ಕನುಸಾರವಾಗಿರಬೇಕು. ಈಗ ಸೂಚಿಸಿರುವಂತೆ ಹೆಚ್ಚಿಸುವುದೇ ಆಗಲಿ ಆಯಾ ಸಂದರ್ಭಗಳಿಗನುಸಾರವಾಗಿ ಯಾಗಲಿ, ಆಯಾಯ ಪಾರ್ಟಿಯ ಸ್ಥಿತಿಗತಿಗಳ ಮೇಲಾಗಲಿ, ಮತ್ತು ಆಯಾಯ ಕೇಸಿನ ದರ್ಜೆಯ ಮೇಲಾಗಲಿ, ಲಿಟಿಗೇಷನ್ ಇದ್ದಂತೆಲ್ಲಾ ಫೀಜನ್ನು ವಸೂಲು ಮಾಡುವ ನೀತಿ ಸರಿಯಲ್ಲ. ದಯವಿಟ್ಟು ಇದನ್ನು ಸೂಚಕರು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಸುಬ್ರಹ್ಮಣ್ಯರವರು (ತುಮಕೂರು ಜಿಲ್ಲೆ).—ಲಾಯರುಗಳು ಕೆಲಸಮಾಡಿ ಫೀಜು ತೆಗೆದುಕೊಳ್ಳುವುದನ್ನು ಬ್ಲಾಕ್ ಮಾರ್ಕೆಟ್ ಎಂದು ಹೇಳಿರುವುದು ಸರಿಯಾದುದಲ್ಲ ಮತ್ತೂ ಸಾಧುವಾದ್ದಲ್ಲ. ಈಗ ಒಂದು ಜಟಕಾಸ್ಟ್ಯಾಂಡಿನಲ್ಲಿ ಜಟಕಾಗಾಡಿ ಹೊಡೆಯತಕ್ಕವನು ಇವರು ಅಂಥವರು, ಇವರು ಇಂಥವರು ಎಂಬುದನ್ನು ನೋಡದೆ ಯಾರು ಯಾರು ದುಡ್ಡು ಕೊಡುತ್ತಾರೋ ಅವರೆಲ್ಲರನ್ನೂ ಕರೆದುಕೊಂಡು ಹೋಗಲೇಬೇಕಾಗಿರುತ್ತೆ. ಅದೇ ರೀತಿ ಲಾಯರಾಗಿರತಕ್ಕವನೂ ಕೂಡ ತನಗೆ ಇಷ್ಟ ಬಂದ ಕೇಸುಗಳನ್ನು ತೆಗೆದುಕೊಳ್ಳುತ್ತಾನೆ ಇಷ್ಟ ಬಾರದ ಕೇಸಗಳನ್ನು ಬಿಟ್ಟು ಬಿಡುತ್ತಾನೆ. ತನಗೆ ಗಿಟ್ಟುವುದಾಗಿದ್ದರೆ ಕೇಸನ್ನು ಹಿಡಿಯುತ್ತಾನೆ, ಗಿಟ್ಟದಿದ್ದರೆ ಬಿಟ್ಟುಬಿಡುತ್ತಾನೆ ತನಗೆ ಗಿಟ್ಟುವಂತೆ ಹೆಚ್ಚಾಗಿ ಫೀಜನ್ನು ತೆಗೆದುಕೊಂಡರೆ ಅದನ್ನು ಬ್ಲಾಕ್ ಮಾರ್ಕೆಟ್ ಎಂದು ಹೇಳುವುದು ಸರ್ವಥಾ ಸರಿಯಲ್ಲವೆಂದು ನಾನು ಹೇಳುತ್ತೇನೆ. ನ್ಯಾಯಸ್ಥಾನದಲ್ಲಿ ಕೆಲಸಮಾಡತಕ್ಕ ಜಡ್ಜಿಗಳೂ ಮತ್ತು ಲಾಯರುಗಳೂ, ಈ ಇಬ್ಬರೂ ನ್ಯಾಯಾಂಗಕ್ಕೆ ಒಂದೊಂದು ಅಂಗವಿದ್ದ ಹಾಗೆ. ಕೋರ್ಟಿನ ಅಧಿಕಾರಿಗಳೂ ಮತ್ತು ಇವರು ಹೊಂದಾಣಿಕೆಯಿಂದ ಕೆಲಸ ಮಾಡಿದರೆ ನ್ಯಾಯ ವಿಮರ್ಶೆ ಆಗುತ್ತೆ.

ಈಗ ಎಲ್ಲಾ ಕೋರ್ಟುಗಳಲ್ಲಿಯೂ ಕೋರ್ಟು ಫೀಜನ್ನು ಹೆಚ್ಚಿಸಿದ್ದಾರೆ, ಜಡ್ಜಿಗಳಿಗೆ ಸಂಬಳ ಹೆಚ್ಚು ಮಾಡಿದ್ದಾರೆ. ಹೀಗೆ ಎಲ್ಲ, ನೋಡಿದರೂ ಅವರ ವರಮಾನ ಹೆಚ್ಚಿರುವಾಗ, ಲಾಯರುಗಳಿಗೂ ಕೂಡ ಅವರ ಫೀಜನ್ನು ಹೆಚ್ಚಿಸದಿದ್ದರೆ ಅದು ನ್ಯಾಯವೂ ಅಲ್ಲ ಮತ್ತು ಸರಿಯಾದ ತೀರ್ಮಾನವೂ ಅಲ್ಲ. ಈಗಿರುವ ರೀತಿಯಲ್ಲಿ ಲಾಯರುಗಳು ಇಲ್ಲದಹೋದರೆ ನ್ಯಾಯ ಸರಿಯಾಗಿ ವಿಮರ್ಶೆಯಾಗುವುದಿಲ್ಲವೆಂಬುದು ನಿರ್ವಿವಾದವಾದ ವಿಷಯ.

Sri H. M. CHANNABASAPPA.—Question.

Sri T. SUBRAHMANYA.—You try that. How many people would have been hanged if there were no lawyers?

Sri H. M. CHANNABASAPPA.—Saved also.

Sri T. SUBRAHMANYA.—It is like this. They may do away with lawyesr. I do not worry. But so long as the present administration of justice continues, there is necessity for the presence

of lawyers. Otherwise, to sift truth from untruth it is not possible. The lawyers have been of very great value and help to the Judges who preside in Court. Both the lawyers and Judges form officers of the Court and through them justice is to be administered.

ಈಗಿನ ಕಾಲದಲ್ಲಿ ಎಲ್ಲರ ಜೀವನದ ಖರ್ಚು ವಿಪರೀತವಾಗಿ ಏರಿಹೋಗಿದೆ. ಲಾಯರಿಗೆ ಸಂಬಳ ಜಾಸ್ತಿ ಮಾಡದೆ ಅಂದರೆ ಫೀಜನ್ನು ಹೆಚ್ಚು ಮಾಡದೆ ಜಡ್ಜಿಗಳಿಗೆ ಸಂಬಳವನ್ನು ಮಾತ್ರ ಹೆಚ್ಚಿಸಿಕೊಂಡು ಅವರಿಗೆ ಬರತಕ್ಕ ಇತರ ಡಿ. ಎ. ಇತ್ಯಾದಿಗಳನ್ನೆಲ್ಲಾ ಹೆಚ್ಚುಮಾಡಿ, ಲಾಯರು ಹಿಂದಿನಂತೆಯೇ ಈಗಲೂ ಫೀಜು ತೆಗೆದುಕೊಂಡು ಕೆಲಸಮಾಡಬೇಕೆಂದು ಹೇಳುವುದು ಸರಿಯಾಗಿ ಕಾಣುತ್ತಿಲ್ಲ. ಇದನ್ನು ಸ್ವಲ್ಪ ಆಲೋಚಿಸಿ ನೋಡತಕ್ಕ ಅಂಶವಾಗಿದೆ. ಹಾಗೆ ಜಾಸ್ತಿಮಾಡಬೇಕೆಂದು ಕೇಳಿರುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಆದರೆ ಕೆಲವು ಲಾಯರುಗಳಿಗೆ ಸಂಪಾದನೆ ಚೆನ್ನಾಗಿರಬಹುದು. ಇನ್ನು ಕೆಲವರಿಗೆ ಇಲ್ಲದಿರಬಹುದು. ಈ ದಿವಸ ಅವರಲ್ಲಿ ಅನೇಕರಿಗೆ ಜೀವನ ನಡೆಸುವುದು ಬಹಳ ಕಷ್ಟವಾಗಿದೆ. ಹೀಗೆ ತಮಗೆ ಬರತಕ್ಕ ವರಮಾನ ಹೆಚ್ಚಿಸಿ ಕೊಡಿ ಎಂದು ಕೇಳುವುದು ಸಾಧುವಾಗಿದೆ. ಇಲ್ಲವಾದರೆ ದುಡ್ಡು ಅವರಿಗೆ 'ಚಪಲಚಿತ್ತ' ರನ್ನಾಗಿ ಮಾಡುತ್ತೆ. ತಾವೀಗ ಕೋರ್ಟಿಗೆ ಕೊಡತಕ್ಕ stamp duty ಯನ್ನು ಜಾಸ್ತಿಮಾಡಿದ್ದೀರಿ. ಅದೇ ರೀತಿ ಇದನ್ನೂ ಜಾಸ್ತಿಮಾಡಬೇಕೆಂದು ಕೇಳಿದರೆ, ಆಗುವುದಿಲ್ಲವೆಂದು ಹೇಳುವುದು ಸರಿಯಾದ್ದಲ್ಲ. ಇದನ್ನು ಹಾಗೆ ಜಾಸ್ತಿ ಮಾಡದೆ ಹೋದರೆ ಶರೀರದ ಒಂದು ಅಂಗವನ್ನು ನಿಕೃಷ್ಟವಾದ ದೃಷ್ಟಿಯಿಂದ ನೋಡಿದ ಒಂದು ದೋಷಕ್ಕೆ ಪಾತ್ರರಾಗುತ್ತೀರಿ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).— ನನಗೆ ಈ ಲಾಯರುಗಳ ಮೇಲೇನೂ ಅಷ್ಟು ಅಸೂಯೆ ಇಲ್ಲ. ಆದರೆ ಇದರಿಂದ ಬಡರೈತರಿಗೆ ಬಹಳ ಕಷ್ಟನಷ್ಟಗಳಾಗುತ್ತವೆಂಬುದೇ ನನ್ನ ವ್ಯಥೆ. ಹೋಗಲೀ ಅದೂ ಚಿಂತೆಯಿಲ್ಲ. ಲಾಯರುಗಳಿಗೊಬ್ಬರಿಗಾದರೆ ಏನೋ ಫೀಜನ್ನು ಕೊಟ್ಟು ಸುಧಾರಿಸಿಕೊಳ್ಳಬಹುದು. ಆದರೆ ಅವರ ಮಧ್ಯೆ ಅನೇಕ ಜನ ಪ್ಲೀಡರ್ ಲಾಯರುಗಳಿರುತ್ತಾರೆ. ಅವರಿಗೆ ಎಷ್ಟು ಕೊಡಬೇಕಾಗುತ್ತದೆ!

ಅಧ್ಯಕ್ಷರು.—ಅವರಿಗೆ ಷೆಡ್ಯೂಲಿನಲ್ಲಿ ಏನೂ ಒದಗಿಸಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅಂತೂ ಅನೇಕ ಜನರಿದ್ದಾರೆ. ಅವರು ತೆಗೆದುಕೊಳ್ಳುತ್ತಿರುವುದನ್ನೂ ನಾನು ನೋಡಿದ್ದೇನೆ. ನಮ್ಮ ತಂದೆಯವರ ಕಾಲದಲ್ಲಿ ನಡೆಯುತ್ತಿದ್ದ ಒಂದು ವಿಚಾರವನ್ನು ಈಗ ನಾನು ತಿಳಿಸಬೇಕೆಂದಿದ್ದೇನೆ. ಆಗ ನಾನು ಸಣ್ಣ ಹುಡುಗನಾಗಿದ್ದೆ. ಅಂತೂ ಇದೆಲ್ಲ ನನಗೆ ಚೆನ್ನಾಗಿ ಜ್ಞಾಪಕವಿದೆ. ನಮ್ಮ ಮನೆ ಲಾಯರು, ಶ್ರೀ ಟಿ. ರಾಮಾಚಾರ್ಯರು ಎಂದು, ಒಬ್ಬರಿದ್ದರು. ಅವರ ಮನೆಗೆ ನಮ್ಮಲ್ಲಿಂದ ಹೋಗುತ್ತಿದ್ದ ತರಕಾರಿ, ಕುಂಬಳಕಾಯಿ ಇತ್ಯಾದಿಗಳೆಷ್ಟೋ ಹೇಳುವುದಕ್ಕಾಗುವುದಿಲ್ಲ. ಇಷ್ಟೆಲ್ಲಾ ಕೊಟ್ಟರೂ ಫೀಜನ್ನು ಕೊಡುವುದೇನೋ ತಪ್ಪುತ್ತಿರಲಿಲ್ಲ.

ಶ್ರೀ ಟಿ. ಸುಬ್ರಹ್ಮಣ್ಯರವರು.—ನಮ್ಮ ಮನೆಗಳಲ್ಲಿಯೂ ಈಗ ಎಷ್ಟೋ ಜನ ಕಕ್ಷಿಗಾರರು ಊಟಮಾಡುತ್ತಾರೆ. ಅದನ್ನೆಲ್ಲಾ ಹೇಳುವುದಕ್ಕಾಗುತ್ತದೆಯೇ! I have fed hundreds of clients. If Sri Krishnappa were my client, I would have fed him also.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅಂತೂ ಈಗಾಗಲೇ ರೈತರಿಗೆ ಬೇಕಾದಷ್ಟು ತೊಂದರೆಗಳಿವೆ. ಈಗ ಎಲ್ಲಿ ನೋಡಲಿ ಪ್ರತಿಯೊಬ್ಬರೂ 'ಲಾ' ಓದುವುದಕ್ಕೆ ಹೋಗುತ್ತಿದ್ದಾರೆ. ಹೀಗಾಗಿ ಈಗ ಲಾಯರುಗಳ ಸಂಖ್ಯೆಯೂ ವಿಪರೀತವಾಗಿದೆ. ಪ್ರತಿಯೊಬ್ಬ young bachelor ಲಾಯರಾಗುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಯಾವ ಮಂತ್ರಿಮಂಡಲದಲ್ಲಿ ನೋಡಿದರೂ ಲಾಯರುಗಳೇ. ಯಾವ ಸದಸ್ಯರಾಗತಕ್ಕ ಜನಗಳನ್ನು ನೋಡಲಿ ಅವರು ಲಾಯರೇ. ಹೀಗೆ ಎಲ್ಲೆಲ್ಲಿಯೂ ಲಾಯರುಗಳೇ ಆಗಿದ್ದಾರೆ. Save us from these lawyers ಈ ಲಾಯರುಗಳಿಗೆಲ್ಲ ಒಂದಲ್ಲ ಒಂದು ದಿವಸ ಪ್ರವೃದ್ಧಮಾನಕ್ಕೆ ಬಂದೇ ಬರುತ್ತೇವೆಂಬ ಭರವಸೆ ಅವರಿಗಿರುತ್ತಾದ ಕಾರಣ ಅವರು ಇಂಥಾ ಸಣ್ಣ ಬಾಬಿನಲ್ಲಿ ಫೀಜನ್ನು ಜಾಸ್ತಿಮಾಡಬೇಕೆಂದು ಕೇಳುವುದು ಸರಿಯಾದ್ದಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).— ಅಧ್ಯಕ್ಷರೇ, ಈ ಸೂಚನೆಯ ಮೇಲೆ ಮಾತನಾಡಬೇಕೆಂಬ ಉದ್ದೇಶವೇ ನನಗೆ ಇರಲಿಲ್ಲ. ಆದರೆ ಶ್ರೀಮಾನ್ ಟಿ. ಸುಬ್ರಮಣ್ಯರಂಥವರೂ ಹೀಗೆ ಮಾತನಾಡಿರುವುದು ನನಗೆ ಬಹಳ ಆಶ್ಚರ್ಯವನ್ನುಂಟುಮಾಡಿದೆ. ಅವರು ತಿಳಿಸಿದರು, ಜಟಕಾಸ್ಟ್ಯಾಂಡಿನಲ್ಲಿ ಜಟಕ ಹೊಡೆಯತಕ್ಕವನಿಗೆ ಯಾರಾದರೇನು, ದುಟ್ಟು ಕೊಟ್ಟವರನ್ನು ಕರೆದುಕೊಂಡುಹೋಗಲೇ ಬೇಕು, ಆದರೆ ಲಾಯರು ಆ ರೀತಿ ತಮ್ಮಲ್ಲಿಗೆ ಬಂದ ಕೇಸುಗಳನ್ನೆಲ್ಲಾ ತೆಗೆದುಕೊಳ್ಳಬೇಕೆಂಬ ಖಡ್ಡಾಯವಿಲ್ಲ, ಅವರಿಗೆ ಗಿಟ್ಟಿದರೆ ತೆಗೆದುಕೊಳ್ಳುತ್ತಾರೆ, ಇಲ್ಲದಿದ್ದರೆ ಇಲ್ಲ ಎಂದು. ಅದು ತಪ್ಪು ಅಭಿಪ್ರಾಯ. ಲಾಯರಾಗಿರತಕ್ಕವರು ತನ್ನ ಮನಸ್ಸಿಗೆ ತೀರಾ ಸುಳ್ಳು ಕೇಸೆಂಬುದಾಗಿ ಕಂಡು ಬಂದರೆ ಆ ರೀತಿ ನಿರಾಕರಿಸಬಹುದು. ತನಗೆ ಉತ್ಪತ್ತಿ ಬರುವುದಾದರೆ ಮಾತ್ರ ತೆಗೆದುಕೊಳ್ಳುತ್ತೇವೆಂದೂ, ಇಲ್ಲದಿದ್ದರೆ ಇಲ್ಲವೆಂದೂ ಅದನ್ನು ಒಂದು ವ್ಯಾಪಾರ ದೃಷ್ಟಿಯಿಂದ ಮಾಡುವುದು ನನ್ನ ಮನಸ್ಸಿಗೆ ಸರಿಯಾಗಿ ಕಾಣುತ್ತಿಲ್ಲ.

Sri T. SUBRAHMANYA.—Kindly read the Legal Practitioners' Act. I am not bound to accept every engagement.

ಶ್ರೀ ಎಚ್. ಕೆ. ವೀರಣ್ಣಗೌಡರು.—ಅವರ ಮನಸ್ಸಿಗೆ ಕೇಸು ಅನ್ಯಾಯವೆಂಬುದು ಚೆನ್ನಾಗಿ ತಿಳಿದುಬಂದಾಗ್ಯೆ ಅದನ್ನು ಒಂದು ಸಂಪಾದನೆ ದೃಷ್ಟಿಯಿಂದ ತೆಗೆದುಕೊಂಡು ಕೆಲಸಮಾಡಿ ಅಂಥಾ ರೀತಿಯಲ್ಲಿ ಸಂಪಾದನೆ ಮಾಡಿದರೆ ಅದು ತೀರಾ ಅನ್ಯಾಯವೆಂದು ಹೇಳಬೇಕಾಗುತ್ತದೆ. ಗಿಟ್ಟಿದರೆ ತೆಗೆದುಕೊಳ್ಳುತ್ತೇನೆ, ಇಲ್ಲದಿದ್ದರೆ ಬಿಡುತ್ತೇನೆಂದು ಹೇಳಿದರೆ, ಇದನ್ನು ಹಾಗೆ ಒಂದು ವ್ಯಾಪಾರದೃಷ್ಟಿಯಲ್ಲಿ, ನ್ಯಾಯಾನ್ಯಾಯಗಳ ಪರಿಶೀಲನೆಯನ್ನು ವಿಮರ್ಶೆಮಾಡುವುದಕ್ಕಾಗುವುದಿಲ್ಲ. ಕೇವಲ ಸಂಪಾದನೆಯೊಂದರ ಮೇಲೆಯೇ ದೃಷ್ಟಿಯಿಟ್ಟು ಇದನ್ನು ವ್ಯಾಪಾರಮಾಡಿದಹಾಗೆ ಭಾವಿಸಿ ನಡತೆ ಚೆನ್ನಾಗಿಲ್ಲವೆಂದು ತಿಳಿದುಬಂದರೂ ಅಂಥಾ ಮನುಷ್ಯನ ಬೆಂಬಲಕ್ಕೆ ಹೋಗುವುದನ್ನು ತಪ್ಪಿಸುವುದು ಚೆನ್ನಾಗಿರುತ್ತೆ.

Sri T. SUBRAHMANYA.—No, no. Sir, that is not the way to look at it.

ಶ್ರೀ ಎಚ್. ಕೆ. ವೀರಣ್ಣಗೌಡರು.—ಲಾಯರುಗಳಲ್ಲಿ ಅನೇಕರು ಕೇವಲ ಫೀಜಿನ ದೃಷ್ಟಿಯಿಂದಲೇ ಕೆಲಸ ಮಾಡುತ್ತಿದ್ದಾರೆಂಬುದು ನನ್ನ ಭಾವನೆಯಲ್ಲ. ಸರಿಯಾದ ಫೀಜು ತೆಗೆದುಕೊಳ್ಳದಿದ್ದರೆ ಅನೇಕ ಲಾಯರುಗಳಿಗೆ ಜೀವನಕ್ಕೆ ತೊಂದರೆಯೂ ಇರಬಹುದು.

ಅಧ್ಯಕ್ಷರು.—ಹಾಗೆ ಮಾಡಿದರೆ ಅವರಿಗೆ ಜೀವನ ಹೇಗೆ ನಡೆಯಬೇಕು ?

ಶ್ರೀ ಎಚ್. ಕೆ. ವೀರಣ್ಣಗೌಡರು.—ಇದನ್ನು ಒಂದು ಲಾಭದೃಷ್ಟಿಯಿಂದಲೇ ನೋಡುವುದಕ್ಕಾಗುವುದಿಲ್ಲ.

Sri T. SUBRAHMANYA.—I should like to interfere for a minute. My frind thinks only of civil cases. What about criminal cases ? If he does not give me my fees, I won't go. Another man may be prepared to go for Rs. 5. I may demand Rs. 500. Sri Alladi Krishnaswami Iyer does not come for less than Rs. 1,000. Sri Sarat Chandra Bose does not accept a case for less than Rs. 1,000.

Mr. SPEAKER.—Unfortunately he is not living.

ಶ್ರೀ ಎಚ್. ಕೆ. ವೀರಣ್ಣಗೌಡರು.—ಅವರು ಹೇಳಿದ್ದನ್ನು ಕೇಳಿ ನನಗೆ ಆಶ್ಚರ್ಯವಾಗುತ್ತದೆ ನಾನು ಬರೀ ಈ ಖೋತಾ ಸೂಚನೆಯಮೇಲೆ ಮಾತನಾಡಬೇಕೆಂದು ಮಾತನಾಡುತ್ತಿಲ್ಲ. ನನಗೆ ತಿಳಿದಿರುವಮಟ್ಟಿಗೆ ಲಾಯರ್‌ಫೀಜು ಎನ್ನುವುದು ಸಿವಿಲ್ ಕೇಸುಗಳಿಗೆ ಮಾತ್ರ. ಕ್ರಿಮಿನಲ್ ಕೇಸುಗಳಲ್ಲಿ ಅದು ಆಯಾ ಸಂದರ್ಭದ ಮೇಲೆ ಹೋಗುತ್ತದೆ.

ಶ್ರೀ ಕೆ. ಸುಬ್ಬರಾಯರು.—ಅವರು ಹೇಳಿದ್ದು ಸರಿಯಲ್ಲ. ಎಲ್ಲಾ ಸಿವಿಲ್ ಕೇಸುಗಳಿಗೂ ಫೀಜು ಬರುವುದಿಲ್ಲ. Declaration of property ಮುಂತಾದುವುಗಳಿಗೆಲ್ಲಾ ಏನೂ ಬರುವುದಿಲ್ಲ. Money suits ನಲ್ಲಿ ಮಾತ್ರ ಬರುತ್ತದೆ. ವಿಷಯ ಪೂರ್ತಿಯಾಗಿ ತಿಳಿದುಕೊಳ್ಳದೆ ಹೇಳುವುದು ಸರಿಯಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಈಗ ಸಭೆಯ ಮುಂದಿರುವ ಪ್ರಶ್ನೆ ಸಿವಿಲ್ ದಾವೆಗಳ ಸಂದರ್ಭಗಳಲ್ಲಿ ಫೀಜು ಜಾಸ್ತಿಮಾಡಬೇಕೆಂದೇ ಹೊರತು ಕ್ರಿಮಿನಲ್ ಕೇಸುಗಳಲ್ಲಿ ಷೆಡ್ಯೂಲ್ ಹಾಕಿ ಫೀಜು ತೆಗೆದುಕೊಳ್ಳುವ ವಿಚಾರವಲ್ಲ. ಈಗ ಮಾನ್ಯಸದಸ್ಯರು ಸಭೆಯಲ್ಲಿ ಹೇಳಿದ್ದನ್ನು ನೋಡಿದ್ದರಲ್ಲಿ, 'ನನಗೆ ಗಿಟ್ಟಿದರೆ ತೆಗೆದುಕೊಳ್ಳುತ್ತೇನೆ ಇಲ್ಲದಿದ್ದರೆ ಇಲ್ಲ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಹಾಗಾಯಿತು. ಹೀಗೆ ಹೇಳುವುದು ಸರಿಯಲ್ಲ, ಅದು ಲಾಯರ ಘನತೆಗೆ ತಕ್ಕುದಲ್ಲವೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಷೆಡ್ಯೂಲನ್ನು ನೋಡಿ ಅದಕ್ಕೆ ವಿರೋಧವಾಗಿ ಹೆಚ್ಚಿಗೆ ತೆಗೆದುಕೊಳ್ಳುವುದೆಂದರೆ, ನ್ಯಾಯವಾಗಿ ಕಾನೂನು ಪ್ರಕಾರ ಎಷ್ಟು ಸಲ್ಲಬೇಕೋ ಅದಕ್ಕಿಂತ ಹೆಚ್ಚಿಗೆ ತೆಗೆದುಕೊಳ್ಳಬೇಕೆಂಬ ಅವರ ಆಸೆಯನ್ನು ಸೂಚಿಸುತ್ತದೆ. ಅಲ್ಲದೆ ಅದು ಒಂದು ಪಕ್ಷ ಬ್ಲಾಕ್‌ಮಾರ್ಕೆಟ್ ಆದರೆ ಹೇಗಾಗುತ್ತೆ. ಶ್ರೀಮಾನ್ ಸುಬ್ರಹ್ಮಣ್ಯರವರಂಥ ಪ್ರಖ್ಯಾತ ಲಾಯರು ಕೂಡ ಇಂಥ ವಾದವನ್ನು ಹೂಡಿದರಲ್ಲಾ ಎಂದು ನನಗೆ ಆಶ್ಚರ್ಯವಾಗಿದೆ !

ಅಲ್ಲದೆ ಇನ್ನೊಂದು ವಿಚಾರವೇನೆಂದರೆ, ನಾನು ನೋಡಿರುವಂತೆ ಎಷ್ಟೋ ಜನ ಶೇಕಡಾ 5 ರೂಪಾಯಿಗಳನ್ನು ಕೂಡ ತೆಗೆದುಕೊಳ್ಳುವವರಿದ್ದಾರೆ. ಎಷ್ಟೋ ಕಡೆ ಶೇಕಡಾ $2\frac{1}{2}$ ಯಂತೆ ತೆಗೆದುಕೊಳ್ಳುವುದೂ ಇದೆ. ಇನ್ನು ಕೆಲವರು ಸ್ನೇಹಿತರು ಫೀಜು ಮಾತಿರಲಿ, ಸ್ಟಾಂಪ್ ಸಹ ತೆಗೆದುಕೊಳ್ಳದೆ ಹಾಗೆಯೇ ಮಾಡಿಕೊಡುವುದೂ ಉಂಟು. ಆದ್ದರಿಂದ ಬರೀ ಕಾಗದದ ಮೇಲೆ ಹೀಗೆ ಬದಲಾವಣೆ ಮಾಡಿ ಬಿಟ್ಟದ್ದರಿಂದೇನೂ ಪ್ರಯೋಜನವಾಗುವುದಿಲ್ಲ. ಎಲ್ಲಾ ಆಯಾ ಲಾಯರುಗಳ ಅಂತಸ್ಥಿನಮೇಲೆ ಮತ್ತು ಕೇಸಿನ ಸ್ವಭಾವದ ಮೇಲೆ ಹೋಗುತ್ತೆ. ಆದ್ದರಿಂದ ಪುಸ್ತಕದಲ್ಲಿ ಬರೆಯಿಸಿದ ಮಾತ್ರಕ್ಕೆ ಹಾಗೆಯೇ ಎಲ್ಲರೂ ನಡೆದುಕೊಳ್ಳುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ಕಾನೂನು ಬದಲಾವಣೆ ಮಾಡುವುದು ಅನಾವಶ್ಯಕವೆಂದು ಅಭಿಪ್ರಾಯಪಡುತ್ತೇನೆ.

ಶ್ರೀ ಕೆ. ಟಿ. ಭಾಷ್ಯಂರವರು (ನ್ಯಾಯಾಂಗ ಮತ್ತು ಕಾರ್ಮಿಕ ಸಚಿವರು).—ಈ ಖೋತಾಸೂಚನೆಯ ವಿಷಯದಲ್ಲಿ ಖಚಿತವಾಗಿ ಹೀಗೆಯೇ ಮಾಡಬೇಕೆಂದು ಹೇಳುವುದು ಸ್ವಲ್ಪ ಕಷ್ಟವೇ. ಈಗಿರತಕ್ಕ ಷೆಡ್ಯೂಲನ್ನು ಜಾಸ್ತಿ ಮಾಡಿದರೆ ಕಕ್ಷಿಗಾರರಿಗೇ ಸ್ವಲ್ಪ ತೊಂದರೆಯಾಗುತ್ತದೆಂಬುದರಲ್ಲಿ ಏನೂ ಸಂದೇಹವಿಲ್ಲ. ಆದರೆ ಈಗಿರತಕ್ಕ ಪರಿಸ್ಥಿತಿಯಲ್ಲಿ ಲಾಯರ ಗಳಿಗೆ ಷೆಡ್ಯೂಲಿನಂತೆ ಫೀಜನ್ನು ಕೊಡುವುದೆಂದರೆ ಲಾಯರುಗಳಿಗೂ ಕಷ್ಟ ಮತ್ತು ಕಕ್ಷಿಗಾರರಿಗೂ ಕಷ್ಟ. ಏಕೆಂದರೆ, ಹೆಚ್ಚಾಗಿ ಫೀಜು ಕೊಡುವವರೂ ಕೆಲವರು ಇರುತ್ತಾರೆ. ಅದನ್ನು ಬ್ಲಾಕ್‌ಮಾರ್ಕೆಟ್ ಎಂದು ಹೇಳುವುದು ಸರಿಯಲ್ಲ. ಏಕೆಂದರೆ ಇಂಥವುಗಳನ್ನೆಲ್ಲಾ ಕೇವಲ ವ್ಯಾಪಾರದೃಷ್ಟಿಯಿಂದ ನೋಡಿ ಬ್ಲಾಕ್‌ಮಾರ್ಕೆಟ್ ಎಂದು ಹೇಳುವುದಕ್ಕಾಗುವುದಿಲ್ಲ. ಉತ್ತಮವಾದ ಲಾಯರುಗಳನ್ನು ಇಟ್ಟುಕೊಂಡು ಸ್ವಲ್ಪ ಜಾಸ್ತಿ ಕೊಟ್ಟರೂ ಪರವಾಗಿಲ್ಲ, ಚೆನ್ನಾಗಿ ವಾದ ಮಾಡುತ್ತಾರೆ, ಜಯ ಲಭಿಸುತ್ತದೆಂದು ಆಶಿಸಿ ಕೊಡುತ್ತಾರೆ. ನಮ್ಮ ಮಿತ್ರರು ಹೇಳುವುದು 'ಅವರು ಇನ್ನೂ ಏನೇನೋ ಕೊಡುತ್ತಾರೆ' ಎಂದು. ಅದೆಲ್ಲಾ ವಿಶ್ವಾಸದಿಂದ ನಡೆಯತಕ್ಕದ್ದೇ ಹೊರತು ಬ್ಲಾಕ್‌ಮಾರ್ಕೆಟ್ ಅಲ್ಲ. ಲಾಯರ ವೃತ್ತಿ ಬಹಳ ಉತ್ತಮವಾದದ್ದು. It is an honourable profession ; we want a very honourable set of people to be in charge of conducting legislation. ಅವರು honourable ಆಗಿ ಇರಬೇಕಾದರೆ ಅವರು ಆರ್ಥಿಕ ವಿಷಯದಲ್ಲಿ ಉತ್ತಮದರ್ಜೆಯಲ್ಲಿದ್ದರೆ ಅನುಕೂಲ. ಆ ದೃಷ್ಟಿಯಿಂದ we must keep them above want as far as possible. ಈಗಿನ cost of living ನೋಡಿದರೆ ಒಂದಕ್ಕೆ ಮೂರರಷ್ಟಾಗಿದೆ. ಆದ್ದರಿಂದ ಶೇಕಡಾ ಐದರಷ್ಟು ಎಂದು ಹಿಂದಿದ್ದುದನ್ನೇ ಇಟ್ಟರೆ ಲಾಯರುಗಳಿಗೆ ಜೀವನ ನಡೆಸುವುದೂ ಕಷ್ಟ, ಅವರು ಸರಿಯಾಗಿ ಕೇಸು ನಡೆಸುವುದೂ ಕಷ್ಟ. ಮತ್ತು temptation ಗಳಿಗೂ ಅಸ್ಪದವಾಗುತ್ತದೆ.

It is something of which we may be very proud that the lawyers in spite of these difficulties are keeping up a high standard of professional ethics. It is very difficult. Therefore, I wish that all Hon'ble Members should view it from the point of view of keeping these officers of court above want. It is from that point of view that it is

suggested that the schedule fee may be raised.

ಕೆಲವರು ಹೇಳಿದಂತೆ ಕೆಲವು ಸಣ್ಣ ಕೇಸುಗಳಲ್ಲೂ ಷೆಡ್ಯೂಲಿಗಿಂತ ಹೆಚ್ಚಿಗೆ ಕಕ್ಷಿಗಾರರೇ ಕೊಡುತ್ತಾರೆ. ಲಾಯರುಗಳೂ ತೆಗೆದುಕೊಳ್ಳುತ್ತಾರೆ. ಅದೇ, ದೊಡ್ಡ ಕೇಸುಗಳಲ್ಲಿ, ಹತ್ತು, ಇಪ್ಪತ್ತು ಸಾವಿರ ರೂಪಾಯಿಗಳ ಕೇಸುಗಳ ವಿಷಯದಲ್ಲಿ ಶೇಕಡಾ ಐದಕ್ಕಿಂತ ಕಡಿಮೆ ಯಾಗಿಯೂ ತೆಗೆದುಕೊಳ್ಳುತ್ತಾರೆ. ಅಂದಮಾತ್ರಕ್ಕೇ ಷೆಡ್ಯೂಲ್ ಬೇಕಾಗಿಲ್ಲವೆಂದು ಹೇಳುವುದು ಸರಿಯಲ್ಲ. ನಾವು ಈ ಷೆಡ್ಯೂಲನ್ನು ಸ್ವಲ್ಪ ಬದಲಾವಣೆಮಾಡಿದರೂ ಅದರಮೇಲೆ ಹೆಚ್ಚುಕಡಿಮೆ ವಿಶ್ವಾಸದಿಂದ ನಡೆದುಕೊಂಡು ಹೋಗುತ್ತಾರೆ. ಮುಖ್ಯವಾಗಿ ಈ ಷೆಡ್ಯೂರ್ ಏರ್ಪಡಿಸುವುದರಲ್ಲಿ ನಮ್ಮ ಅಭಿಪ್ರಾಯವೇನಿರಬೇಕೆಂದರೆ You must keep the lawyer above want. ಲಾಯರುಗಳಿಗೆ ಸಾಮಾನ್ಯವಾಗಿ ಹೆಚ್ಚು ಖರ್ಚುಗಳಿರುತ್ತವೆ. ಈಗ ಹೈಕೋರ್ಟಿನವರೂ ಇದನ್ನೆಲ್ಲಾ ಆಲೋಚನೆಮಾಡುತ್ತಿದ್ದಾರೆ. ಈಚೆಗೆ ಕೋರ್ಟ್ ಫೀಜೂ ಜಾಸ್ತಿಯಾಗಿದೆ. ಹಿಂದೆ ಶೇಕಡಾ 7½ ಯಷ್ಟು ಇದ್ದುದನ್ನು ಈಗ ಶೇಕಡಾ ಹತ್ತರಷ್ಟು ಮಾಡಿದ್ದೇವೆ. ಹಾಗೆಯೇ ಲಾಯರುಗಳಿಗೂ ಹೆಚ್ಚುಮಾಡಿದರೆ ಕಕ್ಷಿಗಾರರಿಗೆ ತೊಂದರೆಯಾಗಬಹುದೆಂದು ಹೇಳಬಹುದು. ಆದರೂ, ವಕೀಲರು ಜಡ್ಜಿಯವರಿಗೆ ಕೇಸುಗಳನ್ನು ತೀರ್ಮಾನಮಾಡುವುದಕ್ಕೆ ಅನುಕೂಲವಾಗುವ ಹಾಗೆ ಕೇಸ್ ಲಾ, ಪ್ರಿಸಿಡೆಂಟ್‌ಗಳು ಎಲ್ಲವನ್ನೂ ತೆಗೆದು ತೋರಿಸಿ ಜಡ್ಜರಿಗೆ ಬಹಳ ಸಹಕಾರಿಯಾಗಿರುತ್ತಾರೆ.

Many Judges have openly acknowledged, both orally and in their judgments, the immense help rendered to them by the lawyers who appeared in the cases before them.

Sri G. A. ACHARYA (Bangalore District—General).—Lawyers educate the Judges.

Sri K. T. BHASHYAM.—I will not say that they educate the Judges, but they elucidate points with a view to the understanding of truth. So I suggest that this cut motion may be viewed with some sympathy, although we may not accept it immediately. It is under the consideration of the High Court—both the question of court fee and the lawyer's fee. I do not think that the raising of the lawyer's fee by a small extent will be prejudicial to the interests either of the clients or of the country. I therefore request Hon'ble Members to view this with sympathy. We shall see what the High Court says in the matter. I would request the Hon'ble mover, in view of the discussions that have taken place, to be satisfied with the fact that the High Court are considering the matter, and to withdraw his cut motion.

Sri K. CHENGALARAYA REDDY.—I need add nothing very much more to what my friend the Hon'ble Law Minister has said in respect of this cut motion. I should not be understood as disparaging the honourable profession of Law. It is indeed a noble profession, as all professions ought to be and are. There can be no debate on that particular aspect of the matter.

The subject covered by this cut motion, relates to the enhancement of fees to be paid by clients to their lawyers. Incidentally another aspect has been dragged into the debate, namely the enhancement of court fees. The two are different. The court fee to be paid is one thing and the remuneration to be fixed as between the lawyer and his client is another thing. So far as remuneration is concerned, there is a clause governing it in the Legal Practitioners Act and it is as follows:

"The Legal Practitioners may make their own arrangements with the clients for their remuneration."

That is a thing to be done as between the two. It is only with regard to fees that this cut motion is raised. Regarding that, I do not want to say anything very much. We consulted the High Court in regard to this matter and the High Court said that the question was closely connected with that of increasing court fees and that the whole question was under detailed examination by them. They have promised that a further report, after examining the question in detail, would be sent. After we receive the report, we shall go into the matter and decide as to what is best under the circumstances.

Janab SYED ABDUR RAHMAN.—In view of the assurance given by the Hon'ble Chief Minister, I beg to withdraw the cut motion.

The cut motion was, by leave of the Assembly, withdrawn.

Need for a Second Class Magistrate's Court at Davangere.

Sri G. VEERAPPA (Chitaldrug District—General).—Sir, I beg to move:

"That the demand under the head '18' Courts of Law' for Rs. Rs. 19,65,900 be reduced by Re. 1 (to raise a debate on the immediate need for the establishment of a Second Class Magistrate's Court at Davangere."

ಸ್ವಾಮಿ, ಸಿವಿಲ್ ಕೋರ್ಟು ಮತ್ತು ಕ್ರಿಮಿನಲ್ ಕೋರ್ಟುಗಳಿಗೆ ಬರುವವರಿಗೆ ಆದಷ್ಟು ಜಾಗ್ರತೆ ನ್ಯಾಯ ದೊರಕಿಸಿ ಕೊಡಬೇಕು. ಈಗ ಬಹಳ ನಿಧಾನವಾಗುತ್ತಿದೆ. ಹೈಕೋರ್ಟಿನವರೇನೊ ಈ ಎರಡು ಕೋರ್ಟುಗಳಲ್ಲೂ ಕೇಸುಗಳು ತೀರ್ಮಾನವಾಗುವುದಕ್ಕೆ ಕಾಲ ನಿಗದಿಮಾಡಿದ್ದಾರೆ, ಅದರ ಪ್ರಕಾರ ಒಂದು ವರ್ಷದಲ್ಲಿ ತೀರ್ಮಾನಮಾಡಬೇಕು. ಆದರೆ ಕ್ರಿಮಿನಲ್ ಕೋರ್ಟುಗಳಲ್ಲಿ 2—3 ವರ್ಷಗಳಿಂದ ಕೆಲವು ತೀರ್ಮಾನವಾಗದೇ ಹಾಗೆಯೇ ಇವೆ. ಒಂದು ಸಾರಿ ಒಂದು ಕಂಪ್ಲೈಂಟ್ ಹಾಕಿದರೆ ಸಾಕ್ಷಿ ಬರುವುದು ಕಷ್ಟ; ಖರ್ಚು ಹೆಚ್ಚು. ನಮ್ಮ ಮಿತ್ರರು ಹೇಳಿದ ಹಾಗೆ ಪೂಟ್ ಲಾಯರೂ ಬರುತ್ತಾರೆ. ಸಾಕ್ಷಿಗಳು ಒಂದೊಂದು ಹೀರಿಂಗಿಗೂ ಬರಬೇಕೆಂದರೆ ಬಂದರೂ ಬರಬಹುದು, ಇಲ್ಲದೇ ಇದ್ದರೂ ಇರಬುದು. ನಿಧಾನವಾದರೆ ಎದುರುಪಕ್ಷದ ಕಡೆಗೆ ಸಾಕ್ಷಿಗಳು ಸೇರಿ ಹಣ ತೆಗೆದುಕೊಂಡರೂ ತೆಗೆದುಕೊಳ್ಳಬಹುದು. ಮತ್ತು ಮ್ಯಾಜಿಸ್ಟ್ರೇಟರು ಒಂದೊಂದು ವೇಳೆ ಕೆಲಸ ಕಡಿಮೆಯಿದ್ದಾಗ ಸಾಕ್ಷಿಗಳಿಗೆ ಕಾಯದೆ ಕೇಸನ್ನು ತೀರ್ಮಾನ ಮಾಡಿಬಿಡುತ್ತಾರೆ. ಹೀಗಾಗುವುದರಿಂದ ನ್ಯಾಯ ದೊರಕುವುದಕ್ಕೆ ತೊಂದರೆ, ಬಡವರಿಗೆ ಸಾಕ್ಷಿಗಳಿಗೆ ಖರ್ಚುಕೊಟ್ಟು ಕರೆದುಕೊಂಡು ಬರುವುದಕ್ಕೂ ಮತ್ತು ಕೇಸು ನಿಧಾನದಾದರೂ ಬಹಳ ತೊರದರೆ.

ಇನ್ನೊಂದು ವಿಚಾರ. ಪೋಲೀಸ್ ಕೇಸುಗಳಲ್ಲಿ ಸಾಕ್ಷಿಗಳಿಗೆ ಕಾನೂನು ಪ್ರಕಾರ ಖರ್ಚು ಕೊಡುತ್ತಿಲ್ಲ. ಅದರಿಂದ ನ್ಯಾಯ ದೊರಕುವುದಿಲ್ಲ. ಸರ್ಕಾರದವರು ಕೇಸು ಹಾಕಿ ಸಾಕ್ಷಿ ಕರೆಯುತ್ತಾರೆ. ಆದರೆ ಸ್ವಂತ ಖರ್ಚಿಟ್ಟುಕೊಂಡು ಅನೇಕಸಲ ಬರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸರ್ಕಾರವೇ ಖರ್ಚು ಕೊಡಬೇಕು. ನಿಧಾನವಾದರೆ ಸರ್ಕಾರಕ್ಕೂ ಖರ್ಚು ಹೆಚ್ಚಾಗುತ್ತದೆ.

ಆಮೇಲೆ ಕೊಲೆ ಮತ್ತು ಡಕಾಯಿತಿ ಕೇಸುಗಳಲ್ಲಿ ತಪ್ಪಿತಸ್ಥರನ್ನು ಒಂದು ವರ್ಷ ಜೈಲಿನಲ್ಲಿಡುತ್ತಾರೆ. ಅವರನ್ನು ಜಾಮೀನಿನ ಮೇಲೆ ಬಿಡುವುದಕ್ಕೂ ಅವಕಾಶವಿಲ್ಲ. ಹೀರಿಂಗುಗಳು ಜಾಸ್ತಿಯಾದರೆ ಅನೇಕ ಸಲ ಬರಬೇಕಾಗುವುದು, ಅದಕ್ಕೆ ಪರಿಹಾರ ಕೊಡಬೇಕು. ಕೊಲೆ ಕೇಸು ನಿಧಾನವಾಗಿ ಬಹುದಿನ ತಳ್ಳಿದರೆ ಸಾಕ್ಷಿ ಹೇಳುವುದು ಮರೆಯಲೂ ಬಹುದು. ನ್ಯಾಯ ದೊರಕಿಸಬೇಕೆಂಬ ಇಷ್ಟ ಸರ್ಕಾರಕ್ಕೇನೋ ಇದೆ. ಆದರೆ ನಿಧಾನವಾಗಿ ನ್ಯಾಯ ಕೊಡುವುದರಿಂದ ಖರ್ಚೂ ಹೆಚ್ಚು; ನ್ಯಾಯವೂ ಸರಿಯಾಗಿ ದೊರಕುವುದಿಲ್ಲ. ದಾವಣಗೆರೆಯಲ್ಲಿ ಮೂರು ವರ್ಷಗಳಿಂದ ಪೆಂಡಿಂಗ್ ಕೇಸುಗಳು ಬಹಳವಾಗಿವೆ. ಹೈಕೋರ್ಟಿನವರು ಅದನ್ನು ವರದಿಮಾಡಿದ್ದಾರೆ; ಅಜಮಾಯಿಷಿ ಮಾಡಿದ್ದಾರೆ. ಮಾನ್ಯ ಲಾ ಸಚಿವರು ಅಲ್ಲಿಗೆ ದಯಮಾಡಿಸಿದ್ದಾಗ ತಕ್ಷಣ ದಾವಣಗೆರೆಗೆ ಎರಡನೆಯ ದರ್ಜೆಯ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಮಂಜೂರು ಮಾಡುವುದಾಗಿ ವಾಗ್ದಾನಮಾಡಿದ್ದರು. ಅದರ ಅನುಕೂಲತೆ ದೊರಕಬೇಕೆಂಬ ಉದ್ದೇಶದಿಂದಲೇ ಈ ಖೋತಾ ಸೂಚನೆಯನ್ನು ತಂದಿದ್ದೇನೆ. ಅಲ್ಲಿ ಹೆಚ್ಚಾಗಿ ಪೆಂಡಿಂಗ್ ಕೇಸುಗಳಿರುವುದಕ್ಕೆ ಕಾರಣವೇನೆಂಬುದನ್ನು ಜಾಗ್ರತೆ ಪರಿಶೀಲಿಸಿ ಸರಿಯಾದ ಪರಿಹಾರವನ್ನು ಕಂಡುಹಿಡಿಯುವುದು ಅವಶ್ಯಕ. ದಾವಣಗೆರೆಗೆ I ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟು ಕೊಟ್ಟರೂ ಕೊಡಬಹುದು. ಅದು ಈಗ ಮೈಸೂರು ಬೆಂಗಳೂರುಗಳಂತೆ ಸಿಟಿ ಆಗಿರುವುದರಿಂದ ಸಿಟಿ ಮ್ಯಾಜಿಸ್ಟ್ರೇಟರನ್ನು ಕೊಡಬಹುದು. ಆದ್ದರಿಂದ ದಾವಣಗೆರೆಗೆ II ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಕೊಡುವುದನ್ನು ಯೋಚನೆಮಾಡಬೇಕು.

Mr. SPEAKER.—Cut motion moved:

"That the demand under the head '18. Courts of Law' for Rs. 19,65,900 be reduced by Re. 1."

Sri K. CHENGALARAYA REDDY.—Mr. Speaker, the cut motion raises the question of the establishment of a Second Class Magistrate's Court at Davangere. Regarding the need for the establishment of some more Munsiff-Magistrates' Courts and Second Class Magistrates' Court, the matter has been considered at great length by the Government, and for the time being, the policy of the Government is to go slow. The question of finance also is intimately connected with this problem. I would very much, personally speaking, wish that every effort should be made to minimise litigation in our country. Instead of allowing litigation to grow and then ask for more and more courts, it would be in the best interests of the country to make every effort to reduce litigation. But that is a tall order, I suppose, in these days! Anyway, effort has to be made in that direction.

Regarding the court work at Davangere. we have received a communication from the High Court. When we consulted the High Court, they have reported that there has been accumulation of work in the Special Magistrate's Court at Davangere and that it is necessary to give relief to the First Class Magistrate of that place. The High Court have recommended accordingly the establishment of an additional First Class Magistrate's Court at Davangere for a period of one year as a temporary measure. This question is separately under the consideration of the Government. So I cannot give any definite assurance regarding the

starting of a Second Class Magistrate's Court as a permanent measure at Davangere. The question of establishing at Davangere a court for a temporary period—for one year—in order to relieve the congestion of work, is under the consideration of the Government and they will take a decision in that matter very early.

Sri G. VEERAPPA.—In view of the assurance given by the Hon'ble Chief Minister that an additional court would be established soon, I withdraw the cut motion.

Sri K. CHENGALARAYA REDDY.—As a temporary measure.

The cut motion was, by leave of the Assembly, withdrawn.

Facilities to the litigant public and the Bar Associations.

Sri S. RANGARAMIAH (Mysore District—General).—Sir, I beg to move:

"That the demand under the head '18. Courts of Law' for Rs. 19,65,900 be reduced by Re. 1 (to discuss the want of facilities to the litigant public and the Bar Associations)."

ಸ್ವಾಮಿ, ಈ ಖೋತಾ ನಿರ್ಣಯವನ್ನು ತಂದಿರುವುದರ ಉದ್ದೇಶ ಕೋರ್ಟುಗಳಲ್ಲಿ ಮತ್ತು ಬಾರ್ ಅಸೋಸಿಯೇಷನ್‌ಗಳಲ್ಲಿ ಕಕ್ಷಿಗಾರರಿಗೆ ತಗಲುತ್ತಿರುವ ತೊಂದರೆಯನ್ನು ಸರ್ಕಾರದ ಗಮನಕ್ಕೆ ತರಬೇಕೆಂಬುದೇ ಆಗಿದೆ. ಮೊದಲು ಘನ ಸರ್ಕಾರದವರು ಈ ತೊಂದರೆಗಳನ್ನು ಗಮನಿಸಬೇಕಾಗಿದೆ. ಈಗ ಸಂಸ್ಥಾನದಲ್ಲಿನ ಕೋರ್ಟುಗಳಲ್ಲಿ ಕೆಲವು ಕಡೆ ಮಾತ್ರ ಸಾಕ್ಷಿ ಷೆಡ್ ಕಟ್ಟಿದ್ದಾರೆ. ಸಾಧಾರಣವಾಗಿ ಅನೇಕ ಕಡೆಗಳಲ್ಲಿ ಕಕ್ಷಿಗಾರರಿಗೆ ಕೂತುಕೊಳ್ಳುವುದಕ್ಕೆ ಸ್ಥಳವೇ ಇರುವುದಿಲ್ಲ. ಅದರಿಂದ ಎಷ್ಟು ತೊಂದರೆಯೆಂಬುದು ಮಾನ್ಯ ಸದಸ್ಯರಿಗೆ ವೇದ್ಯವಾಗಿದೆ, ಈಗ ಕೋರ್ಟುಗಳ ಬಳಿ ವಿಟ್‌ನೆಸ್ ಷೆಡ್ ಇಲ್ಲದೆ ಕಕ್ಷಿಗಾರರು ಕೋರ್ಟಿನ ಸರಹದ್ದಿನಲ್ಲೇ ಕುಳಿತುಕೊಳ್ಳುತ್ತಾರೆ, ಹಾಗೆ ಕುಳಿತುಕೊಂಡ ಕೂಡಲೆ ಅಲ್ಲಿರಕೂಡದೆಂದು ಕೇಸು ನಡೆಯುವಾಗ ಗಲಾಟೆ ಮಾಡುತ್ತಾರೆ. ಆದ್ದರಿಂದ ಅವರು ಹೊರಗಡೆ ಅಂಗಳದಲ್ಲಿ ನಿಲ್ಲಬೇಕು. ಅಲ್ಲಿ ಮಳೆಗಾಲದಲ್ಲಿ ಮಳೆ ಹೊಡೆತ, ಬಿಸಿಲುಗಾಲದಲ್ಲಿ ಬಿಸಿಲಿನ ಹೊಡೆತ. ಕುಳಿತುಕೊಳ್ಳಲು ಸ್ಥಳವಿಲ್ಲ. ಹೀಗೆ ಬಹಳ ತೊಂದರೆ ಇದೆ.

ಎರಡನೆಯದೇನೆಂದರೆ, ಅವರಿಗೆ ಕುಡಿಯುವುದಕ್ಕೆ ನೀರು ಕೂಡ ಸಿಕ್ಕುವುದಿಲ್ಲ. ಎಷ್ಟೋ ಕಡೆ ನೀರಿನ ಸೌಕರ್ಯವೇ ಇಲ್ಲ. ಬಾವಿಗಳಿದ್ದರೆ ನೀರು ಸೇದುವುದಕ್ಕೆ ಹಗ್ಗವಿರುವುದಿಲ್ಲ, ಪಾತ್ರೆಗಳಿರುವುದಿಲ್ಲ. ಹೀಗಿರುವುದರಿಂದ ನೀರಿನ ಅನುಕೂಲ ಮಾಡಬೇಕು. ಕೆಲವು ಕೋರ್ಟುಗಳ ಹತ್ತಿರ ಜನರು ತಿಂಡಿ ತಿನ್ನಲು ವ್ಯವಸ್ಥೆ ಇರುವುದಿಲ್ಲ. ದೂರದಿಂದ ಎಷ್ಟೋ ಜನ ಉಪವಾಸ ಬಂದಿರುತ್ತಾರೆ. ಅವರು ತಿಂಡಿ ತಿನ್ನಲು ಬೇರೆ ಎಲ್ಲಿಗಾದರೂ ಹೋದರೆ, ಹಾಗೆ ಹೋದಾಗ ಕೇಸುಗಳನ್ನು ಕೂಗಿಸಿಬಿಟ್ಟರೆ ಜಡ್ಜಿಗಳ ಆಕ್ರೋಶಕ್ಕೆ ಪಾತ್ರರಾಗುತ್ತಾರೆ. ಅನೇಕ ಕೋರ್ಟುಗಳ ಹತ್ತಿರ ಕಕ್ಕಸುಗಳೂ ಮೂತ್ರಿಗಳೂ ಇಲ್ಲ. ಮೈಸೂರು ಕೋರ್ಟಿನ ಹತ್ತಿರ ಕಕ್ಕಸು ಕಟ್ಟಿಸಿದ್ದಾರೆ. ಅದರ ಅವಸ್ಥೆ ನೋಡಿದವರಿಗೇ ಗೊತ್ತು. ಸರಿಯಾಗಿ ಚೊಕ್ಕಟಮಾಡುವುದಿಲ್ಲ. ಆದುದರಿಂದ ಕಕ್ಷಿಗಳಿಗೆ ಅನುಕೂಲವಾಗುವಂತೆ ಕಕ್ಕಸು, ನೀರು ಮತ್ತು ತಿಂಡಿ ತಿನ್ನಲು ವ್ಯವಸ್ಥೆ ಇಷ್ಟು ಸೌಕರ್ಯವನ್ನು ಕಲ್ಪಿಸಿಕೊಡಬೇಕು.

ಎರಡನೆಯದಾಗಿ, ಬಾರ್ ಅಸೋಸಿಯೇಷನ್‌ಗಳಿಗೆ ಸಣ್ಣ ಸಣ್ಣ ರೂಮುಗಳನ್ನು ಕೊಟ್ಟಿದೆ, ಸಾಕಾಗುವುದಿಲ್ಲ. ಮೈಸೂರಿನ ಬಾರ್ ಅಸೋಸಿಯೇಷನ್ ಇರುವ ಸ್ಥಳವನ್ನು ಎಷ್ಟೋ ವೇಳೆ ಅಧಿಕಾರಿಗಳಿಗೂ ಮಾನ್ಯ ಮಂತ್ರಿಗಳಿಗೂ ತೋರಿಸಿದ್ದೇನೆ. ಈಗಿರುವ ಕೊಟ್ಟಡಿ ಸಾಲದು, ಜನ ಜಾಸ್ತಿ. ಮಾನ್ಯ ಮಂತ್ರಿಗಳೇನೋ ಅವರಿಗೆ ಸೌಕರ್ಯ ಮಾಡಿಕೊಡಲು ಪ್ರಯತ್ನಪಟ್ಟರು. ಆದರೆ ಅವರು ಕೇಳಿದುದನ್ನು ಇವರು ಕೊಡಲಲ್ಲ, ಇವರು ಕೊಟ್ಟದ್ದು ಅವರಿಗೇ ಸಾಕಾಗಲಲ್ಲ. ಹೀಗೆಲ್ಲಾ ಇರುವುದರಿಂದ, ಅವರು ಕುಳಿತುಕೊಳ್ಳುವುದಕ್ಕೆ ಸರಿಯಾದ ಸ್ಥಳ, ಲೈಬ್ರರಿ ಅನುಕೂಲ ಮಾಡಿಕೊಡಬೇಕು. ದೊಡ್ಡ ದೊಡ್ಡ ಸ್ಥಳಗಳಲ್ಲಿ ವಿನಾ ಅನೇಕ ಇತರ ಕಡೆಗಳಲ್ಲಿ ಚಂದಾ ವಸೂಲಾಗುವುದು ಸಾಕಾಗುವುದಿಲ್ಲ. ಇದರಿಂದಲೂ ಪುಸ್ತಕಗಳು, ಮ್ಯಾಗಜೈನ್‌ಗಳನ್ನು ಕೊಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಆದುದರಿಂದ ಸರ್ಕಾರದವರು ದ್ರವ್ಯರೂಪದಲ್ಲಿ ಸಹಾಯ ಮಾಡಿದರೆ ಬಹಳ ಸೌಕರ್ಯವಾಗುತ್ತದೆ. ಈ ಖೋತಾ ನಿರ್ಣಯವನ್ನು ಸರ್ಕಾರದ ಮಂತ್ರಿಗಳು ಉದಾರ ರೀತಿಯಿಂದ ನೋಡುತ್ತಾರೆಂದು ನಂಬಿ ಸಭೆಯ ಮುಂದೆ ಇದನ್ನು ಮಂಡಿಸಿದ್ದೇನೆ.

Mr. SPEAKER.—Cut motion moved:

"That the demand under the head '18. Courts of Law' for Rs. 19,65,900 be reduced by Re. 1."

Sri K. CHENGALARAYA REDDY.—Sir, with regard to this cut motion, I want to be very brief in my remarks. That there are several facilities which have got to be provided near the courts and that facilities provided for the lawyers are not enough is admitted and there is no difference of opinion whatsoever. Government would like to give the maximum facilities to the Bar Associations in the various places in the State. Two facilities have to be particularly given. The Hon'ble mover has referred to the library and furniture. With regard to this, the Government have taken a definite step. A suggestion has been made to the High Court that half the cost of the furniture and the law books required by the Law Associations would

be met by the Government if the other half is raised by the Bar Association concerned. The opinion of the High Court is called for in this behalf and a report from them is awaited. A reminder also has been issued to them and as soon as we hear from the High Court regarding this matter, we will be in a position to go ahead.

With regard to waiting sheds and conveniences near the courts, it is very necessary that these conveniences have to be provided everywhere and particularly the place from which the Hon'ble Member who has moved this cut motion comes, namely Mysore City. I am given to understand that the conveniences there are very much wanting. There are not even the minimum conveniences for sanitary purposes.

Sri Kadidal MANJAPPA (Shimoga District—General).—Not only Mysore; there are many such places.

Sri H. SIDDAVEERAPPA (Chitaldrug District—General).—There are equally bad places.

Sri K. CHENGALARAYA REDDY.—Conveniences of this kind are very necessary and I want to assure Hon'ble Members that all possible steps will be taken in this behalf and the needful will be done. I cannot say to what extent we can provide funds for this purpose and within what time we can carry it out. But it is our intention and the Government will be prepared to provide the minimum or maximum conveniences within the shortest time possible.

ಶ್ರೀ ಎಸ್. ರಂಗರಾಮಯ್ಯನವರು.—ಮಾನ್ಯ ಮುಖ್ಯ ಮಂತ್ರಿಗಳು ಇಷ್ಟು ಸಹಾನುಭೂತಿಯಿಂದ ಈ ವಿಚಾರವನ್ನು ಪರಿಶೀಲನೆ ಮಾಡುವುದಾಗಿ ಭರವಸೆ ಕೊಟ್ಟಿರುವುದರಿಂದ, ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿಯನ್ನು ಬೇಡುತ್ತೇನೆ.

The cut motion was, by leave of the Assembly, withdrawn.

Supply of Stationery and Forms to Law Courts.

Sri H. C. LINGA REDDY (Kolar District—General).—Mr. Speaker, Sir, I move:

"That the demand under the head '18. Courts of Law' for Rs. 19,65,900 be reduced by Re. 1 (to urge the necessity for proper supply of stationery to the Courts)."

Sir, I only wish to say a few words on this cut motion. It is unfortunate that in many courts of the State sufficient stationery and forms referred to in the Civil Procedure Code and the Criminal Procedure Code, Summons Forms, Deposition Forms and a number of other forms are not at all available, and in spite of sending telegrams and writing letters to the High Court and also to the Government, these forms have not been supplied at all. It is well-known, Sir, that the Judges are required to dispose of cases very quickly. They begin their courts at 11 A.M. and go on till 5 P.M. in the evening and sometimes even late. Unless they have the necessary forms and deposition sheets, it will not be possible for them to dispose of the cases. Summons Forms, Show-cause notices, etc., will be very necessary for notices being issued to parties. The courts in Kolar do not have these stationery at all, and it is very necessary that Government should make provision for this and supply them immediately. It is also well-known that the Judicial Department is a revenue-fetching department. We get more by way of stamps and other fees and the Government should pay sufficient attention to this aspect and spend some money also for these essential and necessary needs. With these observations, I commend the cut motion for the acceptance of the Government and the unanimous support of the Members.

Mr. SPEAKER.—Cut motion moved

"That the demand under the head '18 Courts of Law' for Rs. 19,65,900 be reduced by Re. 1."

ಶ್ರೀ ಕೆ. ಟಿ. ಭಾಷ್ಯಂರವರು (ನ್ಯಾಯಾಂಗ ಮತ್ತು ಕಾರ್ಮಿಕ ಸಚಿವರು).- ಅಧ್ಯಕ್ಷರೆ, ಕೋರ್ಟುಗಳಲ್ಲಿ ಕಾಗದ ಮತ್ತು ಇತರ ಲೇಖನ ಸಾಮಗ್ರಿಗಳು ಸರಿಯಾಗಿ ಸರಬರಾಯಿಯಾಗುತ್ತಿರಲಿಲ್ಲವೆಂಬುದು ಹಿಂದಿನ

ಅನುಭವ. 1946-47ನೆಯ ಸಾಲಿಗೆ ಹಿಂದೆ ಕಾಗದ, ಫಾರಂಗಳು ಮುಂತಾದುವನ್ನು ಸಾಕಷ್ಟು ಒದಗಿಸುತ್ತಿರಲಿಲ್ಲ. ಏಕೆಂದರೆ ಮೊದಲು ಎಷ್ಟೆಷ್ಟು ಬೇಕಾಗುತ್ತವೆಂದು ನಿರ್ಧಾರ ಮಾಡಿತ್ತೋ ಅದರಲ್ಲಿ ಶೇಕಡ 50ರಷ್ಟು ಮಾತ್ರ ಒದಗಿಸಬೇಕೆಂಬುದು ಸರ್ಕಾರದವರು ಆಜ್ಞೆ ಮಾಡಿದರು. ಆಗ ಕಾಗದಕ್ಕೆ ಹೆಚ್ಚು ಅಭಾವ ಬಂದಿತ್ತು. ಈಚೆಗೆ ಕೋರ್ಟುಗಳಿಗೆ ಹೆಚ್ಚು ಹೆಚ್ಚಾಗಿ ಒದಗಿಸಬೇಕೆಂದು ಒತ್ತಾಯ ಬಂದ ಮೇಲೆ 1949ನೆಯ ನವಂಬರಿನಲ್ಲಿ ಸರ್ಕಾರದವರು ಒಂದು ಆಜ್ಞೆ ಮಾಡಿದ್ದಾರೆ. ಅದರ ಪ್ರಕಾರ ಹಿಂದೆ ಗೊತ್ತು ಮಾಡಿದಷ್ಟು ಪೂರ್ತಿಯಾಗಿ ಈ ಸಾಮಾನುಗಳನ್ನು ಕೊಡಬೇಕೆಂದು ಮಾಡಿದ್ದೇವೆ. 1949ನೆಯ ಜುಲೈ ಒಂದನೆಯ ತಾರೀಖಿನಿಂದ ಪೂರ್ತಿ ಸಾಮಾನುಗಳನ್ನು ಸರಬರಾಯಿ ಮಾಡುತ್ತಿದ್ದಾರೆ. ಸುಮಾರು 70 ಸಾವಿರ ರೂಪಾಯಿ ಹೆಚ್ಚು ಖರ್ಚಿನಿಂದ ಕಾಗದ ಒದಗಿಸುತ್ತಿದ್ದೇವೆ. ಫಾರಂಗಳ ಅಭಾವವಿದ್ದುದಕ್ಕೆ ಕಾರಣ ಮುದ್ರಣ ಕೆಲಸ ಹೆಚ್ಚಾಗಿ, ಕೆಲಸಗಾರರು ಸಿಕ್ಕುತ್ತಿರಲಿಲ್ಲ. ಇದರಿಂದ ಸಾಕಷ್ಟು ಫಾರಂಗಳನ್ನು ಸಕಾಲದಲ್ಲಿ ಒದಗಿಸುವುದಕ್ಕಾಗುತ್ತಿರಲಿಲ್ಲ. Now full quota of stationery and forms is being supplied. ಈಚೆಗೆ ಈ ಅಭಾವವಿರಲಾರದು. ಅಥವಾ ಇನ್ನೊಂದೆರಡು ತಿಂಗಳಲ್ಲಿ ಅಭಾವ ಪೂರ್ತಿಯಾಗಿ ಹೋಗುತ್ತದೆ. ಒಂದು ವೇಳೆ ಇನ್ನೂ ಹೆಚ್ಚು ಬೇಕಾಗುವುದಾದರೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ. ಈಗಾಗಲೇ ಅರ್ಧ ಕೊಡುತ್ತಿದ್ದುದನ್ನು ಪೂರ್ತಿ ಕೊಡಬೇಕೆಂದು ಏರ್ಪಾಡು ಮಾಡಿದ ಮೇಲೆ ಸ್ಥಿತಿ ಉತ್ತಮವಾಗಿದೆ. ಹೆಚ್ಚಿಸಬೇಕಾದರೆ ಪರಿಶೀಲಿಸುತ್ತೇವೆ. ಇಷ್ಟು ಹೇಳಿದ ಮೇಲೆ ಶ್ರೀ ಲಿಂಗಾರೆಡ್ಡಿಯವರು ಈ ಖೋತಾ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri H. C. LINGA REDDY.—In view of the encouraging assurance given by the Hon'ble Minister, I beg to withdraw the cut motion.

The cut motion was, by leave of the Assembly withdrawn.

Mr. SPEAKER.—The question is:

"That a sum not exceeding Rs. 19,65,900 be granted to the Government to defray the charges which will come in course of payment during the year ending 31st d y of March 1951, in respect of 'Courts of Law'."

The motion was adopted.

Demand No. 13.—19. Jails.

Sri K. T. BHASHYAM (Minister for Law and Labour.—Sir, on the recommendation of His Highness the Maharaja, I beg to move:

"That a sum not exceeding Rs 5,50,000 be granted to the Government to defray the charges which will come in course of payment during the year ending 31st day of March 1951, in respect of 'Jails'."

Mr. SPEAKER.—There are no cut motions. The question is:

"That a sum not exceeding Rs. 5,50,000 be granted to the Government to defray the charges which will come in course of payment during the year ending 31st day of March 1951, in respect of 'Jails'."

The motion was adopted.

Demand No. 14.—20. Police.

Sri T. MARIAPPA (Home Minister).—Sir, on the recommendation of His Highness the Maharaja, I beg to move:

"That a sum not exceeding Rs. 80,50,000 be granted to the Government to defray the charges which will come in course of payment during the year ending 31st day March 1951, in respect of 'Police'"

Mr. SPEAKER.—Motion moved:

"That a sum not exceeding Rs. 80,50,000 be granted to the Government to defray the charges which will come in course of payment during the year ending 31st day of March 1951, in respect of 'Police'."

Sri K. Subba Rao will now move cut motion No. 112, standing in his name.

Putting an end to Anti-Social Elements.

Sri K. SUBBA RAO (Bangalore District—General).—Sir, I beg to move:

"That the demand under the head '20. Police' for Rs. 80,50,000 be reduced by Rs. 100 to urge upon the overnment the methods to be adopted to put an end to the activities of anti-social elements."

ಇದನ್ನು ತಂದಿರುವುದರ ಉದ್ದೇಶವಾದರೂ ಇಷ್ಟೆ. ಈಗ ನಾವು ಹೊಸದಾಗಿ ಸ್ವಾತಂತ್ರ್ಯವನ್ನು ಗಳಿಸಿ ಸ್ವತಂತ್ರ ಜನಾಂಗವಾಗಿದ್ದೇವೆ. ಒಂದು ಹೊಸ ಜನಾಂಗ ತನ್ನ ಸರಿಯಾದ ಸ್ಥಾನಮಾನಗಳನ್ನು ಉಂಟು ಮಾಡಿಕೊಳ್ಳಬೇಕಾಗಿದ್ದರೆ ಏನೇನು ಕೆಲಸ ಕಾರ್ಯಗಳು ಆಗಬೇಕೋ ಆ ಕೆಲಸ ಕಾರ್ಯಗಳ ಆಗುವುದಕ್ಕೆ ಯಾವ ಯಾವ ಅಡಚಣೆಗಳು ಇವೆಯೋ ಅವನ್ನು ನಿವಾರಣೆ ಮಾಡಿಕೊಳ್ಳಬೇಕಾದ ಸನ್ನಿವೇಶ ಪ್ರಾಪ್ತವಾಗಿದೆ. ಈ ಸಂದರ್ಭದಲ್ಲಿ ಕೂಡ ಅನೇಕ ಪ್ರಶ್ನೋತ್ತರಗಳ ಮತ್ತು ಠರಾವುಗಳ ಮೂಲಕ ಬಹುಮಟ್ಟಿಗೆ ಚರ್ಚೆಯಾಗಿ ಆ ವಿಷಯಗಳು ಚರ್ವಿತ ಚರ್ವಣವಾದ ಹಾಗೆ ಆಗಿದೆ. ಈಗ ಅದೇ ವಿಷಯವನ್ನು ಹೆಚ್ಚಾಗಿ ಹೇಳದೇ ಸೂಕ್ಷ್ಮವಾಗಿ ಹೇಳ ಬಯಸುತ್ತೇನೆ. ನಾವು ರಾಷ್ಟ್ರ ವಿನಾಶಕ ಚಳುವಳಿಗಾರರು ಯಾರು ಎನ್ನುವುದಕ್ಕೆ ವಿಶಾಲವಾದ ಅರ್ಥ ಕೊಡಬೇಕು. ಕೇವಲ ರಾಷ್ಟ್ರೀಯ ಸೇವಾ ಸಂಘವಾಗಲಿ, ಕಮ್ಯೂನಿಸ್ಟ್ ಸಂಘವಾಗಲೀ

ಉಗ್ರ ರಾಜಕೀಯ ಕಾರ್ಯ ಕ್ರಮ ಇಟ್ಟುಕೊಂಡಿರುವವರಾಗಲಿ—ಇವರುಗಳು ಮಾತ್ರ ರಾಷ್ಟ್ರ ವಿನಾಶಕ ಚಳುವಳಿಗಾರರು ಎಂದು ಹೇಳುವುದಿಲ್ಲ. ನಿಜವಾಗಿಯೂ ಸಮಾಜದ ಏಳಿಗೆಗೆ ಸರ್ಕಾರದವರು ಕೈಕೊಂಡಿರತಕ್ಕ ಉತ್ತಮೋತ್ತಮವಾದ ಕೆಲಸ ಕಾರ್ಯಗಳನ್ನು ಯಾರು ತಲೆಕೆಳಕು ಮಾಡುತ್ತಾ ಇದ್ದಾರೋ ಅಥವಾ ತಲೆ ಕೆಳಗಾಗುವಂತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೋ ಅವರೆಲ್ಲರೂ ಸಮಾಜಕ್ಕೆ ಶತ್ರುಗಳು, ದ್ರೋಹಿಗಳು ಎಂದು ಧಾರಾಳವಾಗಿ ಹೇಳಬಹುದು. ಅಂಥವರನ್ನು ತಡೆಗಟ್ಟಬೇಕಾಗಿದ್ದರೆ ಅಥವಾ ಹದ್ದಿನಲ್ಲಿಡಬೇಕಾಗಿದ್ದರೆ ಆ ಜವಾಬ್ದಾರಿ ಪೋಲೀಸ್ ಇಲಾಖೆಯ ಮೇಲೆ ಬಹಳ ಹೆಚ್ಚಾಗಿ ಬಿದ್ದಿದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಅದರಲ್ಲೂ ಈಗಿನ ವಾತಾವರಣದಲ್ಲಿ ಎಲ್ಲೆಲ್ಲೂ ಕಾರ್ಮೋಡ ಹರಡುತ್ತಾ ಇದೆ ಎಂಬುದೂ ಕೂಡ ನಿರ್ವಿವಾದವಾದ ವಿಷಯ. ಇಂಥಾ ಸಮಯದಲ್ಲಿ ಜನರ ಮನಸ್ಸು ಅನೇಕ ವಿಧವಾದ ಯೋಚನೆಗಳಲ್ಲಿ ಮುಳುಗಿ ಹೋಗುವುದು ಸ್ವಾಭಾವಿಕ. ಅವರಿಗೆ ಸರಿಯಾದ ತಿಳಿವಳಿಕೆ ಬೇಕು. ನಮ್ಮ ಸರ್ಕಾರದವರು ಕೈಗೊಂಡಿರತಕ್ಕ ರಾಷ್ಟ್ರ ರಕ್ಷಣಾ ಕಾರ್ಯ ಏನಿದೆಯೋ ಅದಕ್ಕೆ ನೆರವಾಗಿ ನಿಲ್ಲತಕ್ಕ, ಸಾಧಕವಾದ ಕೆಲಸ ಕಾರ್ಯ ಮಾಡತಕ್ಕ ಒಂದು ಸರಿಯಾದ ವ್ಯವಸ್ಥೆ ಪೋಲೀಸ್ ಇಲಾಖೆಯವರಿಂದ ಆಗಲೇ ಬೇಕಾಗಿದೆ. ಅದಕ್ಕೆ ಒಂದು ಸೂಚನೆ ಕೊಡಬೇಕೆಂದು ಬಯಸುತ್ತೇನೆ. ಮೊದಲನೆಯದಾಗಿ, ನಮ್ಮ ಸೇವಾದಳ ಬಹುಮಟ್ಟಿಗೆ ಈ ಕಾರ್ಯವನ್ನು ಮಾಡುವುದಕ್ಕೆ ಸಹಾಯಕವಾಗುತ್ತದೆ. ಅದಕ್ಕೆ ಸಹಾಯ ನೀಡಲು ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನನ್ನ ಆಶಯ. ಅದು ಗಾಂಧೀ ತತ್ವವನ್ನು ಹರಡುವುದಾಗಿದೆ. ನಮ್ಮ ದೇಶಕ್ಕೇ ಆಗಲೀ, ಒಟ್ಟು ಪ್ರಪಂಚಕ್ಕೇ ಆಗಲೀ ಶಾಂತ ವಾತಾವರಣ ಇಲ್ಲದೇ ಇದ್ದರೆ ಆಗುವುದಿಲ್ಲ ಎಂಬುದು ನಿರ್ವಿವಾದವಾದ ವಿಷಯ. ಬಹಳ ದೊಡ್ಡವರಿಂದ ಹಿಡಿದು ಸಾಮಾನ್ಯ ಮನುಷ್ಯರವರೆಗೂ ಈ ಪ್ರಶ್ನೆ ಈ ದಿನ ಪ್ರತಿಯೊಬ್ಬರ ಮನಸ್ಸಿನ ಮುಂದೂ ಇದೆ. ಆದಕ್ಕೆ ಒಂದು ಸುವ್ಯವಸ್ಥಿತವಾದ ಏರ್ಪಾಡು ಆಗದೇ ಇದ್ದರೆ ಕಾರ್ಯಗತವಾಗುವುದು ಬಹಳ ಕಷ್ಟವೇ ಸರಿ. ಕಾರ್ಯಗತವಾಗಬೇಕಾಗಿದ್ದರೆ ನಮ್ಮಲ್ಲಿ ಎರಡು ವಿಧವಾದ ವ್ಯವಸ್ಥೆ ಈಗ ಸಾಮಾನ್ಯವಾಗಿ ಇದೆ ಎಂದು ಹೇಳಬಹುದು. ಒಂದು ಹೋಂಗಾರ್ಡ್ಸ್ ಎನ್ನುವುದು, ಇನ್ನೊಂದು ಸೇವಾದಳ ಎನ್ನುವುದು. ಹೋಂಗಾರ್ಡ್ಸ್ ವ್ಯವಸ್ಥೆಯಲ್ಲೂ ಕೂಡ ಅದು ಈಗಿರತಕ್ಕ ಪರಿಸ್ಥಿತಿಯಲ್ಲಿ ಅನೇಕ ದೋಷಗಳಿವೆ. ಅವರಿಗೆ ಶಿಕ್ಷಣ ಕೊಡತಕ್ಕವರು ಸ್ಥಳೀಯ ಪೋಲೀಸ್ ಅಧಿಕಾರಿಗಳು ಅಥವಾ ದಫೇದಾರರು ಆಗಿರುತ್ತಾರೆ. ಅವರಿಗೇ ಸಾಕಾದಷ್ಟು ಶಿಕ್ಷಣ ಇರುವುದಿಲ್ಲವಾದ್ದರಿಂದ ಅವರು ಕೊಡುವ ಶಿಕ್ಷಣ ಸಮರ್ಪಕವಾಗಿರುವುದಿಲ್ಲ. ನಮ್ಮ ದೇಶದಲ್ಲಿ ಒಂದು ಪಂಗಡದ ಜನರು ಇದ್ದಾರೆ. ಅವರು ಇದರಲ್ಲಿ ಅರಿತು ನುರಿತವರಾಗಿರುತ್ತಾರೆ. ಅವರ ಸಹಾಯದಿಂದ ಕೆಲಸ ಕಾರ್ಯಗಳನ್ನು ಮಾಡಿದರೆ ಸಮರ್ಪಕವಾಗುತ್ತದೆಂದು ಆಶಿಸುತ್ತೇನೆ. ಹಿಂದೆ ಐ. ಎನ್. ಎ. ಎಂಬುದಾಗಿ ಒಂದು ಸೈನ್ಯ ಇತ್ತು. ಅದರಲ್ಲಿ ಇದ್ದವರು ಅನೇಕರು ಈ ದಿನ ಕೆಲಸವಿಲ್ಲದೆ ಇದ್ದಾರೆ. ಅವರ ತತ್ವ ಹೇಗೇ ಇರಲಿ, ಅವರು ರಾಷ್ಟ್ರಕ್ಕಾಗಿ ಪ್ರಾಣವನ್ನು ಸಹ ಅರ್ಪಿಸುವುದಕ್ಕೆ ತಯಾರಾಗಿದ್ದಾರೆ. ಇಂಡಿಯಾ ದೇಶದ ಸ್ವಾತಂತ್ರ್ಯಕ್ಕೆ ಮಹಾತ್ಮಾ ಗಾಂಧೀಜಿಯವರು ಹೇಗೆ ಒಂದು ತತ್ವ ದೃಷ್ಟಿಯಿಂದ ಪ್ರಯತ್ನಪಟ್ಟರೋ ಹಾಗೆಯೇ ಸುಭಾಸ್ ಚಂದ್ರಬೋಸ್‌ರವರೂ ಪ್ರಯತ್ನಪಟ್ಟರು. ಉದ್ದೇಶ, ಪರಸೂ ಸಮಾದ್ವೇಶವೇ ಆಗಿದೆ. ವಾಸ್ತವಾಂಶದಲ್ಲಿ ದೋಷ ಇರಲಿಲ್ಲ. ಆದರೂ ಕೂಡ ಐ. ಎನ್. ಎ. ಕ್ರಮ ಆಗಿನ ಸರ್ಕಾರದವರಿಗೆ ಒಪ್ಪಿತವಾಗುತ್ತಾ ಇರಲಿಲ್ಲ. ಬ್ರಿಟಿಷ್‌ನವರು ಅವರನ್ನು ಶತ್ರುಗಳಾಗಿ ಭಾವಿಸಿದ್ದರು. ಅಂಥಾ ಅರಿತು ನುರಿತವರು ಮತ್ತು ಶಿಕ್ಷಣ ಪಡೆದವರು ಈ ದಿನ ನಮ್ಮ ದೇಶದಲ್ಲಿ ಬಹಳ ಜನರಿದ್ದಾರೆ. ಅವರನ್ನು ಉಪಯೋಗ ಮಾಡಿಕೊಂಡು ಕವಾತ್ ಶಿಕ್ಷಣಪಡೆಯುವುದಕ್ಕೆ ಮುಂದೆ ಬರತಕ್ಕ ಯುವಕರಿಗೆ ಅವಕಾಶ ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಅವರನ್ನು ಸೇವಾದಳದವರಿಗೆ ಶಿಕ್ಷಣ ಕೊಡಲು ಉಪಯೋಗಮಾಡಬೇಕು. ಸೇವಾದಳದಲ್ಲಿ ಶಿಕ್ಷಣ ಆದ ಕೂಡಲೇ ಆ ಯುವಕರನ್ನು ಅವರು ತಯಾರಾಗಿದ್ದರೆ ಹೋಂಗಾರ್ಡ್ ಸಂಸ್ಥೆಗೆ ಸೇರಿಸಿಕೊಂಡು ಆಯುಧಗಳನ್ನು ಉಪಯೋಗಿಸುವ ಶಿಕ್ಷಣವನ್ನು ಕೊಟ್ಟು ರಕ್ಷಣಾದಳಕ್ಕೆ ಸೇರಿಸಬೇಕಾದ್ದು ಅತ್ಯಗತ್ಯವೆಂದು ನಾನು ಆಶಿಸುತ್ತೇನೆ.

ನೆನ್ನೆ ದಿನ ಒಂದು ಸಂದರ್ಭದಲ್ಲಿ ಕವಾತ್ ಪ್ರದರ್ಶನ ನಡೆಯಿತು. ಅದು ಎಷ್ಟರಮಟ್ಟಿಗೆ ಆಕರ್ಷಣೀಯವಾಗಿತ್ತು ಮತ್ತು ಅದರಿಂದ ಎಷ್ಟು ಪ್ರಯೋಜನವಾಗುತ್ತದೆ ಎಂಬುದನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ. ಅದು ಯುವಕರಿಗೆ ಶಕ್ತಿ, ಧೈರ್ಯ, ಶಿಸ್ತು ಕಲಿತುಕೊಳ್ಳಲು ಸಾಧಕವಾಗುತ್ತದೆ ಎಂಬ ವಿಷಯವನ್ನು ಮಾನ್ಯ ಮಂತ್ರಿಗಳೂ ಕೂಡ ಅವರ ಅಮೋಘವಾದ ಭಾಷಣದಲ್ಲಿ ನೆನ್ನೆ ದಿನ ವ್ಯಕ್ತಪಡಿಸಿದ್ದಾರೆ. ನಮ್ಮ ದೇಶದ ಯುವಕರಿಗೆ ಅಂಥಾ ಒಂದು ಶಿಕ್ಷಣವನ್ನು ಕೊಡುವುದಾದರೆ ಅನೇಕ ಜನ ಮುಂದೆ ಬರುತ್ತಾರೆ, ದೇಶಕ್ಕೂ, ಹೆಚ್ಚು ಪ್ರಯೋಜನವಾಗುತ್ತದೆ ಎಂಬುದು ನಿರ್ವಿವಾದವಾದ ವಿಷಯ. ಹೀಗೆ ಶಿಕ್ಷಣದ ವ್ಯವಸ್ಥೆಯನ್ನು ಪೋಲೀಸ್‌ನವರಿಂದ ತಪ್ಪಿಸಿ ಸುವ್ಯವಸ್ಥಿತವಾದ ಏರ್ಪಾಡು ಮಾಡಿದರೆ ಬಹಳ ಒಳ್ಳೆಯದು. ಪೋಲೀಸ್ ಇಲಾಖೆಯವರು ಅವರ ಕೆಲಸ ಕಾರ್ಯಗಳ ಕಡೆಗೆ ಹೆಚ್ಚು ಗಮನ ಕೊಡಬೇಕಾದ್ದು ಬಹಳ ಮುಖ್ಯವಾಗಿದೆ. ಸಮಾಜ ಕಂಟಕರು ಸಾಧಾರಣ ಜನರಿಗೆ ಕೊಡತಕ್ಕ ಕಿರುಕುಳ ಬಹಳ ಹೆಚ್ಚಾಗಿದೆ ಇದಕ್ಕೆ ಒಂದೇ ಒಂದು ಉದಾಹರಣೆ ಹೇಳುವುದಾದರೆ, ಶ್ರೀ ಆದಿರಾಜಯ್ಯನವರು ಕೊಟ್ಟಿರತಕ್ಕ ಹೇಳಿಕೆಯನ್ನು ನೋಡಿದರೆ ಗೊತ್ತಾಗುತ್ತದೆ. ಆ ವಿಷಯ ಕೋರ್ಟಿನಲ್ಲಿರುವುದರಿಂದ ಅದನ್ನು ಪ್ರಸ್ತಾಪ ಮಾಡುವುದಿಲ್ಲ. ಅಂಥಾ ಉದಾಹರಣೆಗಳು ಅನೇಕವಾಗಿವೆ ಎಂಬುದನ್ನು ಸಭೆಯ ವರ ಗಮನಕ್ಕೆ ತರುತ್ತೇನೆ. ಇಂಥಾ ಸಮಯದಲ್ಲಿ ತಕ್ಕ ವ್ಯವಸ್ಥೆ ಮಾಡಬೇಕು.

ಇಂಥಾ ಸಂದರ್ಭಗಳಲ್ಲಿ ತಾವು ತಕ್ಕ ವ್ಯವಸ್ಥೆಗಳನ್ನು ಮಾಡಬೇಕಾಗಿದೆ. ಪೋಲೀಸಿನವರು ಜವಾಬ್ದಾರಿಯಿಂದ ಕೆಲಸ ಮಾಡಬೇಕೆಂದು ಪ್ರಯತ್ನಪಟ್ಟರೆ ಅವರಿಗೆ ಹಾಗೆ ಮಾಡುವುದಕ್ಕೆ ಅವಕಾಶವಿದೆ. ಆದರೆ ಅವರ ಮನಸ್ಸು ಮಾಡುತ್ತಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ. ಫಸಲಿನ ರಕ್ಷಣೆಗಾಗಿ ಬೇಲಿ ಹಾಕಿದರೆ, ಹೀಗೆ ಹಾಗೆ ಜನರ ರಕ್ಷಣೆಗಾಗಿ ಮತ್ತು ಕಾನೂನು ರಕ್ಷಣೆಗಾಗಿ, ಸಮಾಜದ ರಕ್ಷಣೆಗಾಗಿ ಈ ಪೋಲೀಸ್ ಸಿಬ್ಬಂದಿ ಇಡಲಾಗಿದೆ. ಹೀಗಿರುವಾಗ ಪೋಲೀಸಿನವರು ಎಲ್ಲೆಲ್ಲಿ ಸಮಾಜ ಘಾತುಕರಿದ್ದಾರೆಂಬುದು ಅವರಿಗೆ ಗೊತ್ತಿದ್ದರೂ ಅವರ ಮೇಲೆ ತಕ್ಕ ಕಾರ್ಯಕ್ರಮವನ್ನು ನಡೆಸದಿರುವುದು, ಬೇಲಿ ಹೊಲ ಮೇಯಲಿಕ್ಕೆ ಬಿಟ್ಟಂತಾಗಿದೆ. ಆದರೆ ಎಲ್ಲರೂ ಹಾಗೆ ಮಾಡುತ್ತಾರೆಂದು ನಾನು ಹೇಳುತ್ತಿಲ್ಲ. ಅನೇಕರು, ನಿಸ್ಪೃಹತೆಯಿಂದ ಕೆಲಸಮಾಡುತ್ತಿದ್ದಾರೆ.

ಆದರೆ ನಾನು ಹೇಳತಕ್ಕದ್ದಿಷ್ಟೆ. ಈ ಕಾನೂನು ಪಾಲನೆಯನ್ನು ಸರಿಯಾಗಿ ಅವರು ಪಾಲಿಸಿಕೊಂಡು ಬಾರದಿರುವುದರಿಂದ ಅನೇಕ ಕಡೆ ಕಳ್ಳಕಾಕರರಿಗೆ ಉತ್ತೇಜನ ಕೊಟ್ಟಂತಾಗಿದೆ. ಅಷ್ಟೇ ಅಲ್ಲದೆ ಯಾರು ಕಾನೂನು ಪಾಲನೆಯನ್ನು ಸರಿಯಾಗಿ ಮಾಡಿಕೊಂಡು ಬರಬೇಕೆಂದು ನೇಮಕಮಾಡಲಾಗಿದೆಯೋ ಅಂಥವರೇ ಮೊದಲು ಕಾನೂನು ಉಲ್ಲಂಘನೆ ಮಾಡಿದಂತಾಗುತ್ತದೆ. ಆದರೆ ಪೋಲೀಸಿನವರಿಗೆ ಇಂಥಾದ್ದನ್ನೆಲ್ಲ ತಡೆಗಟ್ಟುವ ಶಕ್ತಿ ಇಲ್ಲದೆ ಇಲ್ಲ. ಎಲ್ಲೆಲ್ಲಿಯೋ ನಡೆದಂಥ ಖೂನಿ ಇತ್ಯಾದಿ ಮೊಕದ್ದಮೆಗಳನ್ನು ತನಿಖೆ ಮಾಡಿ ಪತ್ತೆ ಹಚ್ಚತಕ್ಕಂಥ ದಕ್ಷರೂ, ಶಕ್ತಿವಂತರೂ ಈ ಇಲಾಖೆಯಲ್ಲಿದ್ದಾರೆ. ಆದರೆ ಅಂಥಾ ಸಮಾಜ ಘಾತುಕರು ಎಲ್ಲೆಲ್ಲಿದ್ದಾರೆಂಬುದು ಅವರಿಗೆ ತಿಳಿದಿದ್ದಾಗ್ಯೂ ಅವರನ್ನು ಪತ್ತೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದು ಸರಿಯಿಲ್ಲ. ನಮ್ಮ ಸಿ. ಐ. ಡಿ. ಇಲಾಖೆಯವರು ಈ ಬಾಬಿನಲ್ಲಿ ಸ್ವಲ್ಪಮಟ್ಟಿಗೆ ಪ್ರಯತ್ನಪಟ್ಟರೆ ಇವರನ್ನು ಕಂಡುಹಿಡಿಯುವುದು ಅಷ್ಟು ಕಷ್ಟವಾಗುವುದಿಲ್ಲ. ಈ ವಿಷಯದಲ್ಲಿ ತಾವು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳದಿದ್ದರೆ ಮುಂದೆ ಅನೇಕ ತೊಂದರೆಗಳಿಗೆ ಅವಕಾಶವಾಗುತ್ತೆ.

ಈಗ ತಾವು ಪಾನನಿರೋಧಾಚರಣೆಯನ್ನು ಕೈಗೊಳ್ಳಲಾಗಿದೆ. ಮುಂದೆ ಈ ಬಾಬನ್ನೂ ಈ ಇಲಾಖೆಗೆ ವಹಿಸಬೇಕೆಂಬ ವದಂತಿ ಇದೆ. ಆದರೆ ಸಾಮಾನ್ಯವಾಗಿ ಪೋಲೀಸಿನವರಿಗೆ ಯಾರ ಯಾರ ಮನೆಯಲ್ಲಿ ಕದ್ದು ಈ ಸೆಂಡ ವಗೈರೆ ತಂದು ಅದನ್ನು ಚಲಾವಣೆ ಮಾಡುತ್ತಾರೆಂಬುದನ್ನು ಕಂಡು ಹಿಡಿಯುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇಂಥವರ ಮನೆಯಲ್ಲೇ ಹೀಗೆ ನಡೆಸುತ್ತಾರೆಂಬ ಒಂದು ಬಾತ್ಮಿ ಇವರಿಗೆ ಇದ್ದೇ ಇರುತ್ತದೆ.

ಆದರೆ ನಾನು ಇನ್ನೂ ಅನೇಕ ವಿಷಯಗಳನ್ನು ತಿಳಿಸಬೇಕೆಂದಿದ್ದೆ. ಆದರೆ ನನಗೆ ಕಾಲಾವಕಾಶವಿಲ್ಲವಾದ್ದರಿಂದ ಇವನ್ನು ಇಷ್ಟಕ್ಕೇ ಮುಗಿಸಿಬಿಡುತ್ತೇನೆ. ಯಾವ ಪೋಲೀಸಿನವರೇ ಆಗಲಿ ಲಂಚ ರುಷವತ್ತುಗಳನ್ನು ತೆಗೆದುಕೊಳ್ಳದಂತೆ, ನ್ಯಾಯಮಾರ್ಗದಲ್ಲಿ ಪ್ರಮಾಣಿಕತೆಯಿಂದ ಕೆಲಸ ಮಾಡುವಂತೆ ಮಾಡಲು, ಈ ಕೆಲವು ಲೋಪದೋಷಗಳನ್ನು ತಮ್ಮ ಗಮನಕ್ಕೆ ತರುವ ಉದ್ದೇಶದಿಂದ ನಾನು ಈ ಖೋತಾ ನಿರ್ಣಯವನ್ನು ಈಗ ಸಭೆಯಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved:

"That the demand under the head '20 Police' for Rs. 80,50,000 be reduced by Rs. 100"

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಇತ್ತೀಚೆಗೆ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಈ ಸಮಾಜ ದ್ರೋಹಿಗಳು ಎಲ್ಲೆಲ್ಲಿಯೂ ಹೆಚ್ಚುತ್ತಿದ್ದಾರೆ. ಇವರಲ್ಲಿ ದೊಡ್ಡವರು, ಚಿಕ್ಕವರು ಎಲ್ಲರೂ ಇದ್ದಾರೆ. ಇವರು ದೊಡ್ಡ ದೊಡ್ಡ ಪಟ್ಟಣಗಳಲ್ಲೂ ಇದ್ದಾರೆ. ಮತ್ತು ಹಳ್ಳಿಗಳಲ್ಲೂ ಇದ್ದಾರೆ. ಆದರೆ ಹಳ್ಳಿಗಳಲ್ಲಿರುವ ಸಮಾಜ ದ್ರೋಹಿಗಳ ರಖಮೇ ಒಂದು ರೀತಿಯಾಗಿದೆ. ಅವರು ಜನರನ್ನು ಫಸಲಾಯಿಸಿ, ಗ್ರಾಮಗಳಲ್ಲಿ ಪಾರ್ಟಿ ಹುಟ್ಟಿಸಿ, ವ್ಯಾಜ್ಯಕ್ಕೆ ದಾರಿ ಮಾಡಿಕೊಂಡು, ಅನೇಕ ಹೊಲ ಮನೆಗಳನ್ನು ಲೂಟಿಮಾಡುತ್ತಿದ್ದಾರೆ. ಈಗ ಹಾಲಿ ಇದು ನಡೆಯುತ್ತಿರುವ ವಿಚಾರ. ಜನರಲ್ಲಿ ಪಾರ್ಟಿ ಮಾಡಿ ಅವರನ್ನೇ ಕೋರ್ಟು ಕಚೇರಿಗಳಿಗೆ ಅಲೆಯುವಂತೆ ಮಾಡುತ್ತಿರುವವರೂ ಇವರೇ. ಈಗಲೂ ಈ ಅನಾಹುತಗಳೆಲ್ಲ ಅಲ್ಲಲ್ಲಿ ನಡೆಯುತ್ತಲೇ ಇವೆ. ಇದರಲ್ಲಿ ಗ್ರಾಮದಲ್ಲಿರುವ ಶ್ಯಾನುಭೋಗರು, ರೆವೆನ್ಯೂ ಇನ್ಸ್ಪೆಕ್ಟರು, ಸ್ಥಳೀಯ ಪೋಲೀಸ್ ನೌಕರರೂ ಇತ್ಯಾದಿ ಸರ್ಕಾರಿ ನೌಕರರೂ ಈ ಖಾಸಗೀ ಸಮಾಜ ದ್ರೋಹಿಗಳ ಗುಂಪಿಗೆ ಸೇರಿರುತ್ತಾರೆಂಬುದನ್ನು ತಿಳಿಸಲಿಕ್ಕೆ ನನಗೆ ತುಂಬಾ ವ್ಯಸನವಾಗುತ್ತದೆ.

ಈ ಸಂದರ್ಭದಲ್ಲಿ ನಾನೊಂದು ವಿಷಯವನ್ನು ಹೇಳಬಯಸುತ್ತೇನೆ. ಈ ಸಮಾಜ ದ್ರೋಹಿಗಳಿಂದ ಎಷ್ಟೆಷ್ಟು ಅನರ್ಥಗಳು ಹೇಗೆ ಹೇಗೆ ನಡೆಯುತ್ತಿವೆ. ಅದರಿಂದ ಎಂಥೆಂಥ ದುಷ್ಪರಿಣಾಮಗಳುಂಟಾಗುತ್ತಿವೆ. ಎಂಬುದನ್ನು ಮಾನ್ಯ ಸಭೆಯವರ ಗಮನಕ್ಕೆ ತರುವ ಉದ್ದೇಶವಕ್ಕಾಗಿ ಒಂದು ಉದಾಹರಣೆ ಕೊಡುತ್ತೇನೆ. ಕಲ್ಲಿನಕುಪ್ಪೆ ಎಂಬ ಗ್ರಾಮದಲ್ಲಿ ಒಬ್ಬ ಪುಂಡ ಸೇರಿಕೊಂಡಿದ್ದಾನೆ. ಆವನು ಆ ಸುತ್ತಮುತ್ತಲಿನ ಜನಗಳನ್ನೆಲ್ಲಾ ಬೆದರಿಸುತ್ತ ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಯಾರಾದರೂ ಸೌದೆ ಇತ್ಯಾದಿ ತರಲು ಹೋಗಬೇಕಾದರೆ ಅವರು ಆತನಿಗೆ ಕೇಳಿದಷ್ಟು ದುಡ್ಡು ಕೊಟ್ಟರೆ ಸರಿ, ಇಲ್ಲವಾದರೆ ಅವರು ಅನೇಕ ತೊಂದರೆಗೊಳಗಾಗಬೇಕಾಗುತ್ತದೆ. ಅದೇ ರೀತಿ ಅಲ್ಲಿಗೆ ಯಾರಾದರೂ ದನಕರುಗಳನ್ನು ಮೇಯಿಸಲಿಕ್ಕೆ ಹೊಡೆದುಕೊಂಡು ಹೋದರೆ, ಅವನಿಗೆ ದುಡ್ಡು ಕೊಡಬೇಕು. ಹೀಗೆ ಜನರು ವಿನಾ ಕಾರಣ ಆತನಿಗೆ ದುಡ್ಡು ತೆರಬೇಕಾಗಿದೆ.

ಅಲ್ಲಿ ಕೆಲವು ಲಂಬಾಣಿಯವರಿಗೆ ಸರ್ಕಾರದವರು 30—40 ಎಕರೆ ಜಮೀನನ್ನು ಕೊಟ್ಟಿದ್ದಾರೆ. ಆ ಜಮೀನನ್ನು ವ್ಯವಸಾಯಮಾಡಿ ಈ ವರ್ಷ ಬೆಳೆಯನ್ನಿಟ್ಟಿದ್ದರು. ಸುಮಾರು 200 ಪಲ್ಲ ರಾಗಿ ಅವರ ಕೈಗೆ ಬರುವ ಹಾಗಿತ್ತು. ಅಂಥಾ ಸಮಯದಲ್ಲಿ ಆ ಪುಂಡನು ಕೆಲವು ಜನಗಳನ್ನು ಕಟ್ಟಿಕೊಂಡು ಹೋಗಿ ಅದೆಲ್ಲವನ್ನೂ ನಾಶಪಡಿಸಿದ್ದಾನೆ. ಇದೇ ರೀತಿ ಆತನು ಮಾಡತಕ್ಕಂಥ ದೃಷ್ಟಾಂತರಗಳು ಬೇಕಾದಷ್ಟಿವೆ.

ಇದೇ ರೀತಿಯಾಗಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಹಿಂದೆಲ್ಲ ದರೋಡೆ, ಖೂನಿ ಇತ್ಯಾದಿಗಳಿಗೆ ಪ್ರಸಿದ್ಧಿ ಹೊಂದಿದ್ದಂಥ ಒಂದು ಗ್ರಾಮದ ಪುಂಡರು ಬಂದು ಹಲಸೂರು ಗ್ರಾಮದಲ್ಲಿ ಒಂದು ಮನೆಗೆ ನುಗ್ಗಿ ದನಕರುಗಳನ್ನೆಲ್ಲಾ ಓಡಿಸಿಕೊಂಡು ಹೋಗಿದ್ದಾರೆ. ಇಂಥಾದ್ದನ್ನೆಲ್ಲಾ ತಡೆಗಟ್ಟುವುದಕ್ಕೆ ಎಲ್ಲರೂ ಆಲೋಚನೆ ಮಾಡತಕ್ಕದ್ದು ಆವಶ್ಯಕ. ಸರ್ಕಾರದವರು ಇಂಥವರನ್ನೆಲ್ಲಾ ಪತ್ತೆ ಹಚ್ಚಿ ಅವರನ್ನು ಸಂಪೂರ್ಣವಾಗಿ ಮಟ್ಟಹಾಕಬೇಕು. ಹಾಗೆ ಸಮಾಜ ದ್ರೋಹಿಗಳನ್ನೆಲ್ಲಾ ಮಟ್ಟಹಾಕಬೇಕಾಗಿದ್ದರೆ ಅವರ ಮೇಲೆ ನೇಕ್-ಚಾಲು ಕೇಸುಗಳನ್ನು ಹಾಕಿ, ಅಂಥವರ ಒಂದು ಪಟ್ಟಿಯನ್ನು ತಯಾರಿಸಿ ಪ್ರತಿಯೊಂದು ತಾಲ್ಲೂಕು ಕಚೇರಿಗಳ ಅಧಿಕಾರಿಗಳಿಗೂ ರವಾನೆ ಮಾಡಿ, ಇಂಥಾ ಸಮಾಜ ದ್ರೋಹಿಗಳು ಕಚೇರಿಗೆ ಯಾವುದಾದರೂ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಲು ಬಂದಾಗ ಅವರಿಗೆ ಅಂಥಾ ಕೆಲಸಗಳನ್ನು ಮಾಡಿಸಿಕೊಡದಂತೆ ಒಂದು ಸಲಹೆ ಕೊಡಬೇಕು. ಇದೇ ರೀತಿಯಾಗಿ ಅವರು ಸರ್ಕಾರಿ ಆಸ್ಪತ್ರೆ ಮತ್ತು ಇತರೇ ಸೌಕರ್ಯಗಳು ಎಲ್ಲೆಲ್ಲಿ ದೊರೆಯುತ್ತವೋ ಅಲ್ಲೆಲ್ಲ ಅವರಿಗೆ ಆ ಅನುಕೂಲಗಳು ದೊರೆಯದಂತೆ ತಡೆಗಟ್ಟಬೇಕು. ಈಗ ಹಳ್ಳಿಗಳಲ್ಲಿರುವಂಥ ಸಮಾಜ ದ್ರೋಹಿಗಳನ್ನು ತಡೆಗಟ್ಟುವ ಮನೋಭಾವ ಈ ಪೋಲೀಸಿನವರಿಗಿದೆಯೆಂಬ ನಂಬಿಕೆ ಲವಲೇಶವೂ ಯಾರಿಗೂ ಇಲ್ಲ.

(At this stage, none of the Ministers excepting the Home Minister was in his seat).

Mushir-ul-Mulk J. MAHOMED IMAM (Chitaldrug *cum* Tumkur—Muslim).—Sir, I rise to a point of order. It is very important from the point of view of the privilege of this House. I find all the Ministers excepting the Home Minister, are absent. Whereas quorum is fixed for the Members of the Legislature, no quorum is fixed for the Ministers. At least half the number of Ministers should be present in the House. My Hon'ble friend is speaking not only of the Police Department but of other Departments.

Sri T. MARIAPPA (Home Minister).—I am taking down notes.

Janab J. MAHOMED IMAM.—Courtesy demands that at least the major number of Ministers must be present in the House. Otherwise, it will not be showing courtesy to this House.

Sri T. MARIAPPA.—It should never be taken in that light.

Janab J. MAHOMED IMAM.—I think a ruling may be given by the Chair that as far as possible all the Ministers must be present in the Chamber. They do not care for what the Members say.

Mr. SPEAKER.—Hon'ble Member cannot say that they do not care. His suggetion will be communicated to the Government.

Janab J. MAHOMED IMAM.—We Members have left our homes, our wives and children and have come here. These Ministers who are staying here...

Mr. SPEAKER.—The Minister who is responsible for this Demand is in the Chamber.

Janab J. MAHOMED IMAM.—The Government must be here. If one Member of the Government is here, it does not mean that the Government is represented.

Mr. SPEAKER.—There is no point of order. I cannot compel any one to be in the House always, but I will communicate the suggestion of the Member to the Government.

Sri A. BHEEMAPPA NAIK (Chitaldrug District—General).—I have not yet followed the point of order. Hon'ble Member is wasting the time of the House by raising points and giving some suggestions. I think he is raising a proposition which does not fit in here.

ಶ್ರೀ ಎಸ್. ಕರಿಯಪ್ಪನವರು.—ಸ್ವಾಮಿ, ಹೀಗೆ ಸಮಾಜದ್ರೋಹಿಗಳನ್ನು ಮಟ್ಟಹಾಕಲು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅದಕ್ಕನುಕೂಲವಾಗುವಂತೆ ಈ ಸೇವಾದಳಗಳನ್ನು ಬಲಪಡಿಸಬೇಕು. ಆಗ ನಮಗೆ ಇಷ್ಟು ಕಷ್ಟವಿರುವುದಿಲ್ಲ. ನಾವು ಸೇವಾದಳಗಳನ್ನು ಏರ್ಪಡಿಸದೇಹೋದರೆ ಅದನ್ನು ತಡೆಗಟ್ಟಲು ಈ ಪೋಲೀಸಿನವರಿಂದ ಖಂಡಿತ ಸಾಧ್ಯವಿಲ್ಲ. ಅಂಥಾ ಅನುಕೂಲವಾಗಿರುವ ಈ ಸೇವಾದಳಗಳನ್ನಾದರೂ ಒಂದು ಸುವ್ಯವಸ್ಥೆಯಿಂದ ನಡಿಸಿಕೊಂಡು ಬಾರದಿರುವುದನ್ನು ನೋಡಿದರೆ ಒಂದು ಮನೋವ್ಯಥೆಯಾಗುತ್ತದೆ. ಹೀಗೆ ಈ ಸೇವಾದಳಗಳ ಅಭಿವೃದ್ಧಿಗೆ ಬದಲಾಗಿ ಅಲ್ಲಲ್ಲೆ ಕೆಲವು ಕಡೆ ಹೈಸ್ಕೂಲುಗಳಲ್ಲಿ ಈ ಆರ್. ಎಸ್. ಎಸ್. ದಳಗಳಿಗೆ ಅಲ್ಲಿರುವ ಉಪಾಧ್ಯಾಯರೇ ವಿಶೇಷವಾಗಿ ಉತ್ತೇಜನ ಕೊಟ್ಟು ಅವುಗಳನ್ನು ಮುಂದುವರಿಯುವಂತೆ ಮಾಡುತ್ತಿದ್ದಾರ.

Mr. SPEAKER.—The R. S. S. has not been banned.

ಶ್ರೀ ಎಸ್. ಕರಿಯಪ್ಪನವರು.—ಯಾವಾಗ ಕೋಮುವಾರು ಭಾವನೆಯನ್ನು ಬೆಳೆಸತಕ್ಕ ಸಂಸ್ಥೆ ಇರಕೂಡದೆಂದು ಹೇಳಿದೆವೋ, ಅಂಥ ಭಾವನೆಗೆ ಬೆಂಬಲ ಕೊಡತಕ್ಕ ಸಂಸ್ಥೆ ಬೆಳೆಯುವುದಕ್ಕೆ ಅವಕಾಶ ಕೊಟ್ಟರೆ ಏನರ್ಥ !! ಆ ದೃಷ್ಟಿಯಿಂದ, ಕೋಮುವಾರು ದೃಷ್ಟಿಯಿಂದ ಕೆಲಸಮಾಡತಕ್ಕ ಸಂಸ್ಥೆಗೆ ಪ್ರೋತ್ಸಾಹ ಕೊಟ್ಟು ಅದರಲ್ಲಿ ಹೆಚ್ಚಿಗೆ ಕೆಲಸಮಾಡತಕ್ಕ ಯಾವ ಅಧಿಕಾರಿಗಳಿದ್ದರೂ, ಯಾವ ಉಪಾಧ್ಯಾಯರುಗಳಿದ್ದರೂ, ಅವರನ್ನೆಲ್ಲಾ ಕ್ರೂರವಾಗಿ ಶಿಕ್ಷಿಸಬೇಕೆಂದು ನನ್ನ ಅಭಿಪ್ರಾಯ. ಇಷ್ಟು ಅಂಶಗಳನ್ನು ಹೇಳಿ ಈ ಖೋತಾ ನಿರ್ಣಯ ವನ್ನು ನಾನು ಸಮರ್ಥಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಹತ್ತು ವರ್ಷಗಳು ನಮ್ಮ ದೇಶದಲ್ಲಿ ಶಾಂತಿ ಸರಿಯಾಗಿ ನೆಲಸಿದ್ದರೆ ಮತ್ತು internal disruption ಇಲ್ಲದಿದ್ದರೆ ನಮ್ಮ ದೇಶ ಪ್ರಥಮ ದರ್ಜೆಯ ರಾಷ್ಟ್ರವಾಗುತ್ತದೆಂಬುದರಲ್ಲಿ ಸಂದೇಹವೇ ಇಲ್ಲ. ಆದ್ದರಿಂದ ಈಗಿನಿಂದಲೂ ಒಂದು ಸುವ್ಯವಸ್ಥಿತವಾದ ಕಾನೂನಿನ ರಾಜ್ಯವಿರುವುದು ಅತ್ಯಾವಶ್ಯಕ. ಹಿಂದೂದೇಶದ ಪೂರ್ವೇತಿಹಾಸವನ್ನು ನೋಡುವುದಾದರೆ ಬಹಳ ಕಾಲದಿಂದಲೂ ನಮ್ಮ ದೇಶದಿಂದ ಸ್ವಾತಂತ್ರ್ಯ ಅಪಹರಣವಾಗುವುದಕ್ಕೆ ಸಮಾಜ ದ್ರೋಹಿಗಳೇ ಕಾರಣರೆಂದು ಹೇಳಬಹುದು. ಅಂತಹ ಜಯಚಂದರುಗಳು, ಮೀರ್ ಸಾದಕ್‌ಗಳು ಈಗಲೂ ಇದ್ದಾರೆ. ಅದರಿಂದ ಮುಂದೆ ಈ ಭಾರತ ದೇಶದ ಸ್ವಾತಂತ್ರ್ಯವೂ ಹೋಗುತ್ತದೆಂದು ಹೇಳಬಹುದು. ಆದ್ದರಿಂದ ಅಂಥ ಸಮಾಜದ್ರೋಹಿಗಳನ್ನು ಹತೋಟಿಯಲ್ಲಿಟ್ಟುಕೊಂಡು ಅವರಿಂದ ದೇಶಕ್ಕೆ ಹಾನಿಯಾಗದಂತೆ ನೋಡಿಕೊಳ್ಳುವುದು ಪ್ರಥಮ ಕರ್ತವ್ಯವೆಂದು ಹೇಳುತ್ತೇನೆ. ಶ್ರೀಮಾನ್ ಕರಿಯಪ್ಪನವರು ಹೇಳಿದಹಾಗೆ ಹಳ್ಳಿಗಳಲ್ಲಿ ಸಮಾಜದ್ರೋಹಿಗಳು ಸಂಘ, ಪಾರ್ಟಿಗಳನ್ನು ಕಟ್ಟಿಕೊಂಡು ಪೈರುಗಳನ್ನು ಕದ್ದು ಕೊಯ್ಯುವುದು, ಜನಗಳಲ್ಲಿ ದುಂಡಾವರ್ತಿ ಮಾಡುವುದು—ಈ ರೀತಿ ನಡೆಸುತ್ತಿದ್ದಾರೆ. ಇವರುಗಳಲ್ಲಿ ಫೂಟ್ ಲಾಯರುಗಳೂ ಇದ್ದಾರೆ. ಅಂಥ ವ್ಯಕ್ತಿಗಳನ್ನು ಪತ್ತೆಮಾಡಿ ಹಿಂದೆ ಕಾಂಗ್ರೆಸ್ ಚಳವಳಿಯಿದ್ದಾಗ ಸರ್ಕಾರದವರು ಯಾವ ರೀತಿ ನಮ್ಮಗಳ ವಿಷಯದಲ್ಲಿ ಒಂದು ಪಟ್ಟಿಯನ್ನು ತಯಾರುಮಾಡಿಟ್ಟುಕೊಂಡಿದ್ದರೋ

ಅದೇ ರೀತಿ ಇನ್ನುಮೇಲೆ ಒಂದು ಪಟ್ಟಿಯನ್ನು ಮಾಡಿ...............

ಶ್ರೀ ಎಲ್. ಸಿದ್ದಪ್ಪನವರು.—ಆ ಪಟ್ಟಿಯ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತಾನೆ !!

ಶ್ರೀ ಕಡಿದಾಳ್ ಮಂಜಪ್ಪನವರು.—ಹಳ್ಳಿಗಳಲ್ಲಿ ಪಾರ್ಟಿಗಳನ್ನು ಉಂಟುಮಾಡತಕ್ಕ ಸ್ವಾರ್ಥಸಾಧಕರಾದ ಸಮಾಜಘಾತುಕರನ್ನೂ, ಜನರಲ್ಲಿ ಅಲ್ಲಕಲ್ಲೋಲ ಉಂಟುಮಾಡಿ ಶಾಂತಿಗೆ ಭಂಗ ತರುವವರನ್ನೂ ಪಟ್ಟಿ ಮಾಡಿ ಅವರಮೇಲೆ ನಿಗಾ ಇಡುವಂತೆ ಹೊಸದಾಗಿ ಒಂದು ಕಾನೂನು ಮಾಡಿದರೆ ಒಳ್ಳೆಯದು. ಅಂಥವರ ಮೇಲೆ ನಿಗಾ ಇಡುವುದಲ್ಲದೆ ಜನರಲ್ಲಿ ಶಿಸ್ತು ಬೆಳೆಯುವಂತೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

Janab MOHAMED HANIEF (Bangalore—Muslim).—Sir, there is no doubt that the supreme need of the hour is the maintenance of law and order and the agency that is employed is the Police. Efficiency is certainly a matter for consideration by this House. We have become free; at the same time under the Constitution, formation of associations is permitted. There is no need to interfere with any association of anybody so long as its activities are confined to propagation and spread of ideas within the Constitution. It is only when they resort to subversive activities and become anti-social, they need to be brought under order. So long as they do not transgress law, they must be given the fullest freedom to do what they please and in any manner in which they wish to act under the law.

In the changed order of things, the Police, who were a terror to the people in the former regimes have to-day realised that they are part and parcel of the country. They are often told by their superiors that they should be very courteous to the general public and should resort to sterner methods only when they get out of order. Now, Sir, on account of the fear of the general public on the one side and the fear that justice may not be done to them on the other, the Police are paralysed to a large extent and are not in a position to exercise their discretion and authority even when emergencies arise. I for one would say that the Police should be given the fullest power and unfettered discretion to control mobs and people when they get out of hand. They should be given the protection necessary for them for the governance of such people in the discharge of their duties. If their very lives are left in precarious conditions and sometimes in awfully bad conditions, what are they to do? How are they to escape themselves from the danger of being annihilated?

I for one would say that the efficiency of the Police, at any rate of the Mysore Police, is not in any sense of the term bad. I must take advantage of this occasion and compliment the Hon'ble Home Member for the efficient.. .... (*Many Voices: This occasion should not be availed of to compliment*). I am talking of the efficiency or inefficiency of the Police and if I refer to the fact that......

Sri A. BHEEMAPPA NAIK (Chitaldrug District—General).—The Hon'ble Member is not in order, Sir, to talk of the efficiency of the Police under this cut motion which seeks to discuss methods intended to put an end to the activities of anti-social elements.

Janab MOHAMED HANIEF.—I think I am in order in debating on the efficiency of the Police in the maintenance of law and order.

Sri T. MARIAPPA.—That sort of a discussion would be more relevant under the next cut motion. The present one is only with regard to the methods to be adopted to put an end to the activities of anti-social elements.

Janab MOHAMED HANIEF.—Of course, this cut motion is to raise a debate on the activities of the anti-social elements. I think I am in order if I state that the Head of the Police is taking active steps on that account.

Mr. SPEAKER.—While speaking on this cut motion the Hon'ble Member cannot go beyond the arguments advanced by the Hon'ble mover. On the next cut motion, he can certainly raise the point that he wishes to stress now.

A VOICE.—Obviously he is a good friend of the Home Minister!

Janab MOHAMED HANIEF.—I am not such a good friend of the Home Minister. I am critical. I pay him a compliment if it is deserved.

Activities will be anti-social only in those cases where they are subversive activities of certain persons and subversive activities of certain persons are certainly connected with the maintenance of an efficient police. But this question is not so grave as otherwise it would have been had the police been less alert. What we have got to do now is to see whether there are any anti-social elements as such in the country who deserve to be put under order. Till such time I feel there is no need to raise a debate on that point.

Sri S. RANGARAMIAH (Mysore District—General).—Hon'ble Member has probably no experience of the villages.

Janab MOHAMED HANIEF.—That depends on the knowledge that my friend has of my activities and experience.

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ, ಸಮಾಜಘಾತುಕ ವ್ಯಕ್ತಿಗಳನ್ನು ತಡಗಟ್ಟಬೇಕೆಂಬುದೇ ಈ ಕತ್ತರಿ ಪ್ರಯೋಗದ ಮುಖ್ಯವಾದ ಅಂಶ. ಸಮಾಜಘಾತುಕ ವ್ಯಕ್ತಿಗಳು ನಾನಾ ತೆರದಲ್ಲಿ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ದೇಶದಲ್ಲಿ ಬೆಳೆಯುತ್ತಿರುವುದು ನಮ್ಮ ಗೃಹ ಮಂತ್ರಿಗಳಿಗೂ ಗೊತ್ತಿದೆ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಯಾವಯಾವ ತೆರದ ಸಮಾಜಘಾತುಕರಿದ್ದಾರೆಂಬುದನ್ನು ಆಗಲೇ ಸದಸ್ಯರು ಹೇಳಿದ್ದಾರೆ. ಅದನ್ನೇ ನಾನು ಒತ್ತಿ ಹೇಳಲು ಹೋಗುವುದಿಲ್ಲ. ಮುಖ್ಯವಾಗಿ ಇವರ ಮೇಲೆ ಪ್ರಬಲವಾದ ಹತೋಟಿಯಿರಬೇಕೆಂಬುದನ್ನು ಹೇಳುವಾಗ ಒಂದು ಉದಾಹರಣೆ ಜ್ಞಾಪಕಕ್ಕೆ ಬರುತ್ತದೆ. ಸಮಾಜದಲ್ಲಿ ನೆಮ್ಮದಿಯನ್ನು ಘಾತುಕವಾಡತಕ್ಕ ವ್ಯಕ್ತಿಗಳು ಬೆಳೆಯುವುದಿರಲಿ, ಇಡೀ ದೇಶದ ಸ್ವಾತಂತ್ರ್ಯಕ್ಕೇ ಧಕ್ಕೆ ತರುವ ಸಮಾಜಘಾತುಕ ವ್ಯಕ್ತಿಗಳು ಅಲ್ಲಲ್ಲೇ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಕೆಲಸಮಾಡುತ್ತಿರುವುದಕ್ಕೆ ಮೊನ್ನೆ ಮೀರ್ ಲಾಯಕ್ ಅಲಿಯವರು ನಮ್ಮ ದೇಶದಿಂದ ಪಲಾಯನ ಮಾಡಲು ಅವಕಾಶಮಾಡಿಕೊಟ್ಟಿರುವುದೇ ನಿದರ್ಶನವಾಗಿದೆ.

ನಮ್ಮ ದೇಶದಲ್ಲಿ ಸಮಾಜಘಾತುಕ ವ್ಯಕ್ತಿಗಳು ಇಲ್ಲದಿದ್ದರೆ ಇಂಥ ಅಕೃತ್ಯಗಳು ನಡೆಯುತ್ತಿರಲಿಲ್ಲ. ಅಂದಮೇಲೆ ಮೈಸೂರಿನಲ್ಲಿಯೂ ಸಹ ಇಂತಹ ದೇಶದ ನೆಮ್ಮದಿಗೆ ಭಂಗ ತರುವ ವ್ಯಕ್ತಿಗಳೂ, ಸ್ವಾತಂತ್ರ್ಯಕ್ಕೆ ಧಕ್ಕೆ ತರುವವರೂ ಸಹ ಇಲ್ಲವೆಂದು ಹೇಳುವ ಧೈರ್ಯ ನನಗಿಲ್ಲ. ನಮ್ಮ ಮಂತ್ರಿಗಳಿಗೂ ಇಲ್ಲ. ಎಂದು ಹೇಳಬಲ್ಲೆ. ಆದ್ದರಿಂದ ಪ್ರಕೃತ ಪರಿಸ್ಥಿತಿಯಲ್ಲಿ ನಾನಾ ರಾಜಕೀಯದ ತತ್ವಗಳ ಪ್ರಚಾರ ನೆಪದಲ್ಲಿ ಪ್ರತ್ಯಕ್ಷವಾಗಿಯೋ, ಅಪ್ರತ್ಯಕ್ಷವಾಗಿಯೋ ಸಮಾಜದ ನೆಮ್ಮದಿಗೆ ಭಂಗತರುವ ಕೆಲಸವನ್ನು ಅನೇಕರು ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ಗೃಹ ಸಚಿವರು ಹೇಗೆ ಕೆಲಸ ಮಾಡಬೇಕೆಂದರೆ less talkf more work ಎನ್ನುವಂತೆ ಮಾಡಬೇಕು. ಹಾಗೆ ಮಾಡದೆ more talk, less work ಆದರೆ ದೇಶದ ನೆಮ್ಮದಿಗೆ ಭಂಗ ಬರುತ್ತದೆ ಎಂದು ಖಂಡಿತವಾಗಿ ಹೇಳುತ್ತೇನೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಅದರ ಒಂದು ಪ್ರತಿಫಲ ಸಾಮಾನ್ಯ ಜನರಿಗೆ ರುಚಿನೋಡಬೇಕಾದರೆ ಅವರ ಆಸ್ತಿಪಾಸ್ತಿಗಳ ರಕ್ಷಣೆ, ಅದಕ್ಕಿಂತಲೂ ಹೆಚ್ಚಾಗಿ ಪ್ರಾಣರಕ್ಷಣೆ ಮತ್ತು ಮಾನ ರಕ್ಷಣೆ ಆಗಬೇಕು. ಆದರೆ ಸ್ವಾತಂತ್ರ್ಯ ಬಂದಮೇಲೂ ಅನೇಕ ಕಡೆ ನೋಡಿದರೆ ಹಾಗಾಯಿತು, ಹೀಗಾಯಿತು ಎಂದು ಹೇಳುತ್ತಿರುವಾಗ ಎಲ್ಲಿ ಸ್ವಾತಂತ್ರ್ಯವಿದೆ ಎಂದು ಅನೇಕರು ಕೇಳುತ್ತಾರೆ. ಇನ್ನೂ ಅನೇಕ ಕಡೆಗಳಲ್ಲಿ ಹಿಂಸಾಕೃತ್ಯಗಳು ಅಧಿಕವಾಗಿವೆ. ಕೋಲಾರ ಜಿಲ್ಲೆಯಲ್ಲಿ ಮಾಲೂರು ತಾಲ್ಲೂಕು, ಗಂಗಪುರ, ಸೂರಗಾನಹಳ್ಳಿ ಮುಂತಾದ ಕಡೆಗಳಲ್ಲಿ ಜನರ ಸ್ಥಿತಿ ಚಿಂತಾಜನಕವಾಗಿದೆ. ಅಲ್ಲಿ ರೈತರನ್ನು ಜೋಡಿದಾರರು ಮನೆಬಿಟ್ಟು ಓಡಿಸಿದ್ದಾರೆ. ಆ ರೈತರು ಬೇರೆ ಗ್ರಾಮಗಳಿಗೆ ಹೋಗಿ ನೆಲೆಸಿದ್ದಾರೆ. ಬಾಗೇಪಲ್ಲಿ ಮತ್ತು ಚಿಂತಾಮಣಿ ತಾಲ್ಲೂಕುಗಳಲ್ಲೂ ಹೀಗೆಯೇ ಜನರು ಸಮಾಜಘಾತುಕ ಶಕ್ತಿಗಳಿಂದ ಭಯಪಡುತ್ತಾರೆ. ಸಮಾಜಘಾತುಕ ವ್ಯಕ್ತಿಗಳು ಹೀಗೆ ಬಹಳ ಮೋಸಮಾಡಿ ಜನರ ಮಾನಭಂಗ, ಪ್ರಾಣಹರಣ ಮುಂತಾದ್ದನ್ನು ಮಾಡುತ್ತಾ ಇದ್ದಾರೆ. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಅನೇಕ ಗ್ರಾಮಗಳಲ್ಲಿ ತಲೆಹೋಕರು ಮತ್ತು ಸಮಾಜಘಾತುಕರು ಹೆಚ್ಚಿ ಜನರ ಆಸ್ತಿಪಾಸ್ತಿಗಳನ್ನು ಕೊಳ್ಳೆ ಹೊಡೆಯುವುದಕ್ಕೆ ಪ್ರಾರಂಭಿಸಿದ್ದಾರೆ. ಆದರೆ ಈ ವಿಷಯದಲ್ಲಿ ಕೇಸು ನಡೆಯುತ್ತಿರುವುದರಿಂದ ತಪಶೀಲನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ. ಆದ್ದರಿಂದ ಸ್ವಾತಂತ್ರ್ಯ ಬಂದ ಮೇಲೆ ರಾಜ್ಯವನ್ನು ಸರಿಯಾಗಿ ಸುಭದ್ರವಾದ ಅಡಿಪಾಯದ ಮೇಲೆ ಕಟ್ಟಬೇಕು ಮತ್ತು ಯಾವ ವಿಧವಾಗಿಯೂ ನೆಮ್ಮದಿಗೆ ಭಂಗ ಬಾರದೇಯಿರುವಂತೆಯೂ, ಜನರು ಸರಿಯಾಗಿ ಬೆಳೆದು ಬಾಳುವಂತೆಯೂ, ಅವರ ಮಾನ, ಪ್ರಾಣ, ಆಸ್ತಿಪಾಸ್ತಿಗಳ ರಕ್ಷಣೆಯು ಸುವ್ಯವಸ್ಥಿತವಾಗಿ ಬಾಳಬಹುದೆಂಬ ಭಾವನೆ ಬರುವ ಹಾಗೂ ಏರ್ಪಾಡುಮಾಡಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀ ಟಿ. ಮರಿಯಪ್ಪನವರು.—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮಾನ್ಯ ಸದಸ್ಯರು ಈ ವಿಷಯದಲ್ಲಿ ಕೊಟ್ಟಿರುವ ಉಪಯುಕ್ತ ಸಲಹೆಗಳಿಗಾಗಿ ತುಂಬಾ ಕೃತಜ್ಞನಾಗಿದ್ದೇನೆ. ಇದಕ್ಕೆ ಸ್ವಲ್ಪ ಹಿನ್ನೆಲೆಯನ್ನು ಪರೀಕ್ಷೆ ಮಾಡಿ ನೋಡಿದರೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಕಾಲದಲ್ಲಿ ಅನೇಕ ಆಂಟಿ-ಸೋಷಿಯಲ್ ಎಲಿಮೆಂಟ್ಸ್‌ಗೆ ಸ್ವಲ್ಪ ಪ್ರೋತ್ಸಾಹವಿತ್ತು, ಸ್ವಾತಂತ್ರ್ಯವನ್ನು ಅದುಮುವ ಪ್ರಯತ್ನವಿತ್ತು.

ಸ್ವಾತಂತ್ರ್ಯ ಬಂದಮೇಲೆ ಕೆಲವು ಮಹಾಶಯರು ಶತ್ರುಗಳಾದರೆಂದು ಭಾವಿಸಿದ್ದೇನೆ. ದೇಶದಲ್ಲಿ ಅಲ್ಲಲ್ಲಿ ಸಮಾಜದ್ರೋಹಿಗಳಿದ್ದಾರೆಂದು ಮಾನ್ಯ ಸದಸ್ಯರೂ ಸಹ ಉದಾಹರಣೆ ಕೊಟ್ಟರು. ಅದರಲ್ಲಿ ಎರಡು ತರಹ ಇದ್ದಾರೆ. ಒಬ್ಬೊಬ್ಬರ ಸ್ವಾರ್ಥತೆಗಾಗಿ ಸಣ್ಣ ಪುಟ್ಟವರನ್ನು ಆಕರ್ಷಿಸಿ ಫ್ರೂಟ್‌ಲಾಯರ್ ಕೆಲಸ ಮಾಡುವವರೂ, ಪಾರ್ಟಿ ಹೆಚ್ಚಿಸುವವರೂ, ಇನ್ನು ಕೆಲವು ಮಹನೀಯರೂ ಹಿಂಸಾಮಾರ್ಗವನ್ನು ಅನುಸರಿಸಿಕೊಂಡು ಬುಡಮೇಲು ಮಾಡುವ ಚಳುವಳಿಯಲ್ಲಿ ನಿರತರಾಗಿರುವವರೂ ಇದ್ದಾರೆ. ಮತ್ತೆ ಕೆಲವರು ಇನ್ನೂ ನೀಚ ಕಾರ್ಯಗಳಲ್ಲಿ ತೊಡಗಿದ್ದಾರೆ. ಶ್ರೀ ಚೆನ್ನಬಸಪ್ಪನವರು, ಶ್ರೀ ಗೋವಿಂದರೆಡ್ಡಿಯವರು ಮತ್ತು ಶ್ರೀ ಕರಿಯಪ್ಪನವರು ಸೂಕ್ಷ್ಮವಾಗಿ ಹೇಳಿ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಖಚಿತವಾಗಿ ಸಭೆಯ ಮುಂದಿಡ

ಬೇಕೆಂದು ಪ್ರಾರ್ಥಿಸುತ್ತೇನೆ. ಎಲ್ಲಾ ಪೋಲೀಸ್ ಅಧಿಕಾರಿಗಳಿಗೂ ಪಾರ್ಟಿಮಾಡುವವರು, ಕಳ್ಳತನಮಾಡಿ ನಫೆ ಸಂಪಾದನೆ ಮಾಡುವವರು, ಜನರಿಗೆ ಹಿಂಸೆ ಕೊಡುವವರು ಎಲ್ಲಿದ್ದಾರೋ ಅವರನ್ನು ಆಯಾ ಸ್ಥಳದಲ್ಲಿ ಪತ್ತೆ ಹಚ್ಚಿ ಯಾವಾಗಲೂ ಅವರ ಮೇಲೆ ಎಚ್ಚರಿಕೆ ಇಟ್ಟಿರಬೇಕು ಎಂದು ಎಚ್ಚರಿಕೆ ಸೂಚನೆ ಕೊಟ್ಟಿದ್ದೇವೆ. ಜೊತೆಗೆ ಮುಂಜಾಗ್ರತೆ ಕಾರ್ಯಕ್ರಮ ತೆಗೆದುಕೊಂಡು ಅದು ಸಾಧ್ಯವಾಗದಿದ್ದರೆ ಸಾಮಾನ್ಯವಾಗಿ ಸಾಕ್ಷಿ ನೋಡಿ ಕೇಸ್ ಹಾಕಿರುವುದಕ್ಕೆ ನಿದರ್ಶನವಿದೆ. ಆ ರೀತಿ 1947–48ರಲ್ಲಿ ಪ್ರಿವೆಂಟಿವ್ ಸೆಕ್ಷನ್ ಪ್ರಕಾರ 687 ಕೇಸು ಹಾಕಿ 58 ತೀರ್ಮಾನವಾಗಿದೆ; 383 ಪೆಂಡಿಂಗಿನಲ್ಲಿವೆ. 1948–49ರಲ್ಲಿ 387 ಕೇಸು ಹಾಕಿದ್ದರಲ್ಲಿ 86 ತೀರ್ಮಾನವಾಗಿ 186 ಪೆಂಡಿಂಗಿನಲ್ಲಿವೆ. ಹೀಗೆ ಪ್ರಿವೆಂಟಿವ್ ಸೆಕ್ಷನ್ ಉಪಯೋಗಿಸಿ 'ಕಾರ್ಯಕ್ರಮ ಕೈಕೊಂಡಿದೆ. ಇನ್ನೂ ಹೆಚ್ಚಾಗಿ ತೆಗೆದುಕೊಳ್ಳಬೇಕೆಂದಿದೆ. ಮುಖ್ಯವಾಗಿ ಖಾಸಗೀ ಮಹನೀಯರ ಮತ್ತು ಈ ಸಭೆಯ ಮಾನ್ಯ ಸದಸ್ಯರ ಸಹಕಾರ ಸಂಪೂರ್ಣವಾಗಿ ಬೇಕೆಂದು ಪ್ರಾರ್ಥಿಸುತ್ತೇನೆ. $1\frac{1}{2}$ ವರ್ಷದ ಕೆಳಗೆ ಹಸ್ತಪತ್ರಿಕೆಗಳ ಮೂಲಕ ಅಪಪ್ರಚಾರ ಮಾಡಿದಂಥ ಸಮಾಜದ್ರೋಹಿಗಳು ಎಷ್ಟೋ ಇದ್ದಾರೆ. ಶಾಂತಿ ಭಂಗಪಡಿಸುವವರೂ ಇದ್ದಾರೆ. ಇದನ್ನು ಸರಿಯಾಗಿ ಸ್ಥಳದ ಮುಖಂಡರು ದೇಶದ ಹಿತದೃಷ್ಟಿಯಿಂದ ಯೋಚನೆಮಾಡಿ ಉತ್ತಮಗೊಳ್ಳುವ ರೀತಿ ಮಾಡಬೇಕು. ನಾವು ಒಂದು ಪರ್ವಕಾಲದಲ್ಲಿದ್ದೇವೆ. ಈಗ ತಾನೆ ಸ್ವಾತಂತ್ರ್ಯ ಬಂದಿದೆ. ಈಗ ಇದು ನಿಲ್ಲಬೇಕಾದರೆ ಸಮಾಜದ್ರೋಹಿಗಳನ್ನು ಹಿಡಿದು ಅದುಮಿಡಬೇಕು. ಒಂದು ದೇಶವನ್ನು ಪುನರ್ರಚನೆ ಮಾಡಬೇಕಾದರೆ ಶಾಂತಿಯಿಲ್ಲದಿದ್ದರೆ ಬಹಳ ಕಷ್ಟ. ಶಾಂತಿ ಕಾಪಾಡುವುದಕ್ಕೆ ಸಮಾಜ ಕಂಟಕರು ಭಂಗಪಡಿಸುವಂಥ ಕಾರ್ಯವನ್ನವಲಂಬಿಸುವುದರಿಂದ ಕಷ್ಟವೆಂಬುದು ಪ್ರಾಪ್ತವಾಗುತ್ತದೆ. ಶ್ರೀ ಚೆನ್ನಬಸಪ್ಪನವರು ಹೇಳಿರುವುದು ಸಂಪೂರ್ಣವಾಗಿ ಸರ್ಕಾರದ ಗಮನದಲ್ಲಿದೆ. ಯಾರ್ಯಾರು ದೇಶದಲ್ಲಿ ದುಷ್ಟ ಚಟುವಟಿಕೆ ನಡೆಸುತ್ತಾರೋ ಅವರ ಮೇಲೆ ಕಣ್ಣಿದೆ. ಶಾಂತಿ ಭಂಗವಾಗದಹಾಗೆ ನೋಡಿಕೊಳ್ಳುತ್ತೇವೆ ಎಂದು ಭರವಸೆ ಕೊಡುತ್ತೇನೆ.

ಇನ್ನು ಶ್ರೀ ಸುಬ್ಬರಾಯರಿಗೆ ಭರವಸೆ ಕೊಡಬೇಕಾಗಿದೆ. ಸದಾ ಆದಷ್ಟು ಕಾರ್ಯಕ್ರಮ ತೆಗದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ. ಸೇವಾದಳವನ್ನು ಇನ್ನೂ ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತೇವೆ. ಹೋಂಗಾರ್ಡ್‌ಗಳನ್ನೂ ಸಾಧ್ಯವಾದಷ್ಟು ಉಪಯೋಗಿಸುತ್ತೇವೆ. ಹೋಂಗಾರ್ಡುಗಳನ್ನು ಪುನರ್ವ್ಯವಸ್ಥೆ ಮಾಡುವುದು ಅತ್ಯಗತ್ಯ. ಯೋಚನೆಮಾಡಿ ಸಾಧ್ಯವಾದಷ್ಟು ಮಾಡಲು ಪ್ರಯತ್ನಿಸುತ್ತೇವೆ.

ಆ ಮೇಲೆ ಶ್ರೀ ಕರಿಯಪ್ಪನವರು ಹೇಳಿದ ಹಾಗೆ ಪುಂಡರೂ ಇದ್ದಾರೆ. ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಸ್ಥಳದಲ್ಲೇ ರುಜುವಾತು ಕೊಡುವಹಾಗಿದ್ದರೆ ಮಹನೀಯರು ಮುಂದೆಬಂದರೆ ಒಳ್ಳೆಯದೆಂದು ಸದಸ್ಯರಲ್ಲಿ ಬೇಡುತ್ತೇನೆ.

ಒಟ್ಟಿನಲ್ಲಿ ಜನಾಭಿಪ್ರಾಯ ರೂಪುಗೊಳಿಸುವಹಾಗೆ ವಿಶೇಷ ಸಹಾಯಮಾಡಬೇಕು ಮತ್ತು ಪೋಲೀಸಿನವರು ದಕ್ಷತೆಯಿಂದ ವರ್ತಿಸಬೇಕು ಎಂಬುದನ್ನು ಒಪ್ಪುತ್ತೇನೆ. ಲೋಪ ದೋಷಗಳನ್ನು ಸಾಧ್ಯವಾದಷ್ಟು ಬೇಗ ಪರಿಹಾರಮಾಡಲು ಕಾರ್ಯಕ್ರಮ ಸೂಕ್ತ ರೀತಿಯಲ್ಲಿ ಕೈಗೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ

ಶ್ರೀ ಎಸ್. ರಂಗರಾಮಯ್ಯನವರು.—ಗ್ರಾಮಾಭಿವೃದ್ಧಿ ಸಮಿತಿಗಳಿಂದ ಈ ವಿಚಾರದಲ್ಲಿ ಏನು ಸೂಚನೆ ಬಂದಿದೆ?

ಶ್ರೀ ಟಿ. ಮರಿಯಪ್ಪನವರು.—ಅದನ್ನು ನೋಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಗ್ರಾಮಾಭಿವೃದ್ಧಿ ಸಮಿತಿಯು ಎಲ್ಲರಿಗೂ ಹಸ್ತಪತ್ರಿಕೆಗಳನ್ನು ಕೊಟ್ಟಿದೆ.

Sri. K. SUBBA RAO.—On the assurance given by the Hon'ble Minister, I withdraw the cut motion.

The cut motion was, by leave of the Assembly, withdrawn.

Inefficiency of the Police.

Sri L. SIDDAPPA (Shimoga District–General).—Sir, I beg to move:

"That the demand under the head '20 Police' for Rs. 80,50,000 be reduced by Rs. 100 (to raise a debate on the inefficiency of the Police in maintaining law and order in the State and especially in rural parts)."

ಸ್ವಾಮಿ, ಈ ಖೋತಾ ಸೂಚನೆಯನ್ನು ಪುಷ್ಟೀಕರಿಸಿ ಇದರ ಪರವಾಗಿ ಏನೇನು ಹೇಳಬಹುದಾಗಿತ್ತೋ ಆ ವಿಷಯಗಳನ್ನೆಲ್ಲಾ ಹಿಂದಿನ ಖೋತಾ ಸೂಚನೆಯ ಮೇಲಿನ ಚರ್ಚೆಯಲ್ಲಿ ಮಾನ್ಯ ಸದಸ್ಯರನೇಕರು ಸಭೆಯ ಗಮನಕ್ಕೆ ತಂದಿದ್ದಾರೆ. ಈ ಸೂಚನೆಯನ್ನು ಸಭೆಯ ಮುಂದೆ ತರಬೇಕೆಂದು ನಾನು ಯೋಚನೆ ಮಾಡಿದಾಗ ಇಂತಹ ಸೂಚನೆಯನ್ನು ತರಬೇಕಲ್ಲಾ ಎಂದು ನನಗೆ ವ್ಯಥೆಯಾಯಿತು. ಏಕೆಂದರೆ, ಒಂದು ಪ್ರದೇಶದಲ್ಲಿ ಇಂತಹ ಕೃತ್ಯಗಳು ನಡೆಯುತ್ತಿವೆಯೆಂದು ನನ್ನ ಗಮನಕ್ಕೆ ಬಂದದ್ದರಿಂದ ಒಟ್ಟು ಸಂಸ್ಥಾನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚೆ ಮಾಡುವ ಈ ಸಭೆಯಲ್ಲಿ ಇದನ್ನು ತರುವುದು ಸೂಕ್ತವೆ ಎನ್ನಿಸಿತು. ಆದರೂ ಈಗಿನ ಸ್ಥಿತಿಗತಿಗಳನ್ನು ಗಮನಿಸಿ ಇದನ್ನು ಸಭೆಯ ಮುಂದಿಡುವುದೇ ಸೂಕ್ತವೆಂದು ಇಟ್ಟಿದ್ದೇನೆ. ನಾನು ಇರತಕ್ಕ ಚನ್ನಗಿರಿ ತಾಲ್ಲೂಕು ಒಂದರಲ್ಲೆ ಕಳೆದ ಆರು ತಿಂಗಳಲ್ಲಿ ಏನೇನು ಘಟನೆಗಳು ನಡೆದಿವೆ ಎಂಬುದನ್ನು ಸಭೆಯ ಗಮನಕ್ಕೆ ತರುತ್ತೇನೆ. ಕಳೆದ 1949ನೆಯ ಯುಗಾದಿಯ ದಿವಸ ಒಂದೇ ದಿವಸದಲ್ಲಿ ಮೂರು ಗ್ರಾಮಗಳಲ್ಲಿ ದೊಂಬಿ ನಡೆದು, ಎರಡು ಗ್ರಾಮಗಳಲ್ಲಿ ಖೂನಿಗಳು ಕೂಡ ನಡೆದವು. ಆ ಮೇಲೆ ರಸ್ತೆಗಳಲ್ಲಿ ಜನರು ಗುಂಪು ಕಟ್ಟಿಕೊಂಡು ಹೋಗಿ ಎದುರಿಗೆ ಬರುತ್ತಿದ್ದವರನ್ನು ಹೊಡೆದು ಕೈಕಾಲುಗಳನ್ನು ಮುರಿದು ಅವರು ಸುಮಾರು ಎರಡು ತಿಂಗಳ ಕಾಲ ಡಿಸ್ಟ್ರಿಕ್ಟ್ ಆಸ್ಪತ್ರೆಯಲ್ಲಿ ಇಲಾಜು ಹೊಂದಬೇಕಾಯಿತು. ಇದಾದನಂತರ ಕೆಲವು ದಿವಸಗಳಲ್ಲಿ ಹಗಲು ಹೊತ್ತಿನಲ್ಲಿ ಸುಮಾರು ಹತ್ತುಗಂಟೆಯ ಸಮಯದಲ್ಲಿ ಕೋರ್ಟಿಗೆ ಹೋಗುವಾಗ ಇಬ್ಬರನ್ನು ಸಮಾಜ ಘಾತುಕರು ಬಂದೂಕಿನಿಂದ ಹೊಡೆದು ಕೊಂದರು. ಇತ್ತೀಚೆಗೂ ಕೆಲವು ಘಟನೆಗಳು ನಡೆಯುತ್ತಿದ್ದವು. ಇದನ್ನು ನೋಡಿದರೆ ಪೋಲೀಸಿನವರಿಗೆ ಇದನ್ನು ಸರಿಪಡಿಸುವುದಕ್ಕೆ ಅವಕಾಶವಿದೆ, ತಡೆಗಟ್ಟುವ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಅವಕಾಶವಿದೆ. ತಡೆಗಟ್ಟುವ ಶಿಕ್ಷೆ ವಿಧಿಸುವುದಕ್ಕೆ ಅವಕಾಶವಿದೆ. ಇದೆಲ್ಲಾ ಸಾಧ್ಯವಾಗದೇ ಹೋದರೆ ಯಾವ ಯಾವ ಸ್ಥಳಗಳಲ್ಲಿ ಇಂತಹ ಪರಿಸ್ಥಿತಿ ಬರುವ ಸಂಭವವಿದೆಯೋ ಅಂತಹ ಪ್ರದೇಶದಲ್ಲಿ ಸಾಮೂಹಿಕ ದಂಡ

ಹಾಕಿ ಹೆಚ್ಚಿನ ಪೋಲೀಸ್ ಸಿಬ್ಬಂದಿಯನ್ನು ಅಲ್ಲಿ ಇಡುವುದು ಉತ್ತಮ. ಇದರ ಹಿನ್ನೆಲೆಯನ್ನೆಲ್ಲಾ ನೋಡಿದರೆ ಅಲ್ಲಿ ಪೋಲೀಸಿನವರಿಗೆ ಇಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಗೊತ್ತಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಪೋಲೀಸಿನವರು ಸ್ಥಳೀಯ ವಿಚಾರಗಳನ್ನು ಗೋಪ್ಯವಾಗಿ ತಮ್ಮ ಬಾತ್ಮೀದಾರರ ಮೂಲಕ ಶೇಖರಿಸುವುದರಿಂದಲೂ ಬೇರೆ ವಿಧಗಳಿಂದಲೂ ಮುಂಜಾಗ್ರತೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದಾಗಿತ್ತು. ಇದನ್ನು ತೆಗೆದುಕೊಳ್ಳದೇ ಇರುವುದನ್ನು ನೋಡಿದರೆ ದಕ್ಷತೆಯಿಲ್ಲವೆಂದು ಖಂಡಿತವಾಗಿ ಹೇಳಬೇಕಾಗಿದೆ.

ಹಿಂದಿನ ಆಡಳಿತದಲ್ಲಿ ಶ್ರೀಮಾರ್ಕ್ ವ್ಯಾರ್ಥ್‌ರವರು ಲಾ ಸಚಿವರಾಗಿದ್ದಾಗ ಒಂದು ಸರ್ಕಾರದ ಪ್ರೊಸೀಡಿಂಗ್ಸ್‌ನಲ್ಲಿ ಯಾವ ಪ್ರದೇಶದಲ್ಲಿ law and order ಸರಿಯಾಗಿಡುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿನ ಪೋಲೀಸರು ಸಮರ್ಪಕವಾಗಿಲ್ಲ, ಅವರಲ್ಲಿ ದಕ್ಷತೆಯಿಲ್ಲವೆಂದು ಹೇಳಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆ ರೀತಿ ಸ್ಥಳೀಯ ಅಧಿಕಾರಿಗಳಿಗೆ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ, ಪೋಲೀಸ್ ಸೂಪರಿಂಟೆಂಡೆಂಟರಿಗೆ ಸೂಚನೆಯನ್ನು ಸರ್ಕಾರದವರು ಕಳುಹಿಸಬೇಕು. ಪೋಲೀಸ್ ಅಧಿಕಾರಿಗಳ ಮುಖ್ಯ ಕರ್ತವ್ಯ ಶಾಂತಿ ಮತ್ತು ಶಿಸ್ತನ್ನು ಪಾಲನೆ ಮಾಡುವುದು. ಎಲ್ಲಿ, ಯಾವ ಡಿಸ್ಟ್ರಿಕ್ಟಿನಲ್ಲಿ, ಯಾವ ಸಬ್ ಡಿವಿಜನ್‌ನಲ್ಲಿ ಶಾಂತಿ ಶಿಸ್ತುಗಳನ್ನು ಪರಿಪಾಲಿಸುವುದಿಲ್ಲವೋ ಅಲ್ಲಿನ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡುವುದಿಲ್ಲವೆಂದು ತಿಳಿದುಕೊಳ್ಳಲು ಅವಕಾಶವಿದೆ. ಈ ರೀತಿ confidential circular ಗಳನ್ನು ಅಧಿಕಾರಿಗಳಿಗೆ ಸರ್ಕಾರದವರು ಕಳುಹಿಸುತ್ತಿದ್ದರೆ, ಅದರಿಂದ ಅವರ ಮನಸ್ಸಿನ ಮೇಲೆ ಪರಿಣಾಮವಿರುತ್ತದೆ.

ಎರಡನೆಯದಾಗಿ, ಮಾನ್ಯ ಗೃಹ ಸಚಿವರು ಹಿಂದಿನ ಖೋತಾ ಸೂಚನೆಗೆ ಉತ್ತರ ಕೊಡುವಾಗ ಒಂದು ವಿಷಯವನ್ನು ಒಪ್ಪಿಕೊಂಡಿದ್ದಾರೆ. ಅದೇನೆಂದರೆ, ಹಿಂದೆ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುವ ಸಮಯದಲ್ಲಿ ಅದನ್ನು ತಡೆಗಟ್ಟುವುದಕ್ಕಾಗಿ ಪೋಲೀಸರಲ್ಲಿ ಕೆಲವು ಸಮಾಜ ದ್ರೋಹಿಗಳಿಗೆ ಪ್ರೋತ್ಸಾಹ ದೊರೆಯಿತು ಎಂದು ಹೇಳಿದರು. ಈಗ ಸ್ವಾತಂತ್ರ್ಯ ಸಿಕ್ಕಿದ ಮೇಲೆ ತಾವು ಏನು ಬೇಕಾದರೂ ಮಾಡಬಹುದೆಂಬ ಮನೋಭಾವ ಕೆಲವರಲ್ಲಿ ಬಂದಿದೆಯೆಂದೂ ಹೇಳಿದರು. ಅದು ನಿಜ. ನನ್ನ ಗಮನಕ್ಕೂ ಬಂದಿದೆ. ಎಲ್ಲಾದರೂ ಒಂದು ದಾಂಧಲೆ ನಡೆದರೆ, ದಾಂಧಲೆ ನಡೆಸಿದವರ ಏಜೆಂಟರೂ ಮತ್ತು ಸ್ನೇಹಿತರು ಮಂತ್ರಿಗಳ ಮನೆಗೆ ಹೋಗುತ್ತಾರೆ. ಅಲ್ಲಿ ದುಷ್ಕೃತ್ಯಮಾಡಿದವರಿಗೆ ನಮಗೆ ಮಂತ್ರಿಗಳು ಗೊತ್ತು, ಅವರಿಗೆ ಹೇಳುತ್ತೇವೆ, ಎಂದು ಹೇಳುತ್ತಾರೆ. ನಿಜವಾಗಿಯೂ ಅವರು ಆ ರೀತಿ ಮಂತ್ರಿಗಳಿಗೆ ಹೇಳುವುದಿಲ್ಲ, ಹೊರಗಿನವರಿಗೆ ಆ ರೀತಿ ಒಂದು ಭಾವನೆ ಬರಲೆಂಬ ಉದ್ದೇಶದಿಂದ ಹಾಗೆ ಹೇಳುತ್ತಾರೆ. ಇಂಥವರ ಹೆಸರುಗಳ ಪಟ್ಟಿಯನ್ನು ಮಂತ್ರಿಗಳು ಇಟ್ಟುಕೊಂಡು ಅವರನ್ನು ನೋಡುವುದಕ್ಕೆ ಬಂದಾಗ ದಿಟ್ಟ ಮನಸ್ಸಿನಿಂದ ಅವರಿಗೆ 'ನೀನು ಸಮಾಜ ದ್ರೋಹಿ, ನಿನ್ನೊಡನೆ ಸಂಭಾಷಣೆ ಮಾಡುವುದಿಲ್ಲ' ಎಂದು ಖಂಡಿತವಾಗಿ ಹೇಳಬೇಕು.

ಇನ್ನು ಸಣ್ಣ ಪುಟ್ಟ ಕಳ್ಳತನಗಳು ಬಹಳ ಹೆಚ್ಚಾಗಿವೆ. ನಾನು ಇಲ್ಲಿಗೆ ಬರುವುದಕ್ಕೆ ಮುಂಚೆ ಒಂದುವಾರ ನನ್ನ ಹಳ್ಳಿಯಲ್ಲಿದ್ದೆ. ಸುತ್ತಮುತ್ತ ನಾಲ್ಕು ಹಳ್ಳಿಗಳಿವೆ. ಅಲ್ಲಿ ಕೆಲವು ಮನೆಗಳಲ್ಲಿ ರೈತರು ನೆರಕೆ ಕಟ್ಟಿಕೊಂಡಿದ್ದಾರೆ; ಅದರಲ್ಲಿ ಎತ್ತುಗಳನ್ನು ಕಟ್ಟಿ ತಾವು ತಮ್ಮ ಮನೆಗಳಲ್ಲಿ ಮಲಗುತ್ತಾರೆ. ಬೆಳಗ್ಗೆ ಎದ್ದು ನೋಡಿದರೆ ಎತ್ತುಗಳೇ ಇರುವುದಿಲ್ಲ. ಮನೆಯ ಮುಂದೆ ಬಿಟ್ಟಿದ್ದ ಗಾಡಿಗಳೇ ಇರುವುದಿಲ್ಲ. ಹೀಗೆ ಅನೇಕ ಉದಾಹರಣೆಗಳಿವೆ. ನಲ್ಲೂರು, ಸೋಮಶೆಟ್ಟಿಹಳ್ಳಿ, ಸಿದ್ದಪುರ—ಈ ಹಳ್ಳಿಗಳಲ್ಲೆಲ್ಲಾ ಈ ರೀತಿ ಆಗುತ್ತಿದೆ. ಹಾಗಾದರೆ ಬಡವರು ಹೇಗೆ ಜೀವನ ಮಾಡುವುದು? ಈಗಿನ ಕಾಲದಲ್ಲಿ ಜೊತೆಗೆ 700-800 ರೂಪಾಯಿ ಕೊಟ್ಟು ಕೊಂಡುಕೊಂಡಿರುವ ಎತ್ತುಗಳು ಹೊರಟು ಹೋದರೆ ರೈತನ ಬೇಸಾಯವೇ ಹೋಯಿತು! ಪೋಲೀಸಿನವರೇ ಎಲ್ಲವನ್ನೂ ನೋಡಿಕೊಳ್ಳುವುದಕ್ಕಾಗುವುದಿಲ್ಲ, ಸ್ಥಳದವರೂ ನೋಡಿಕೊಳ್ಳಬೇಕೆಂದು ಮಂತ್ರಿಗಳು ಹೇಳಿದರು. ಇದು ನ್ಯಾಯ, ನಾನು ಕೂಡ ಜನರಿಗೆ ಆ ರೀತಿ ಬುದ್ಧಿವಾದ ಹೇಳಿದ್ದೇನೆ. ಆದರೆ ಇಂತಹ ಕೃತ್ಯಗಳನ್ನು ಮಾಡುವವರ ಗುಂಪಿರುತ್ತದೆ. ಇದನ್ನು ಪತ್ತೆ ಹಚ್ಚಿ ಪೋಲೀಸಿನವರು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡಿ, ಗ್ರಾಮಾಂತರಗಳಲ್ಲಿ, ಅದರಲ್ಲಿಯೂ ಪುಂಡು ಪೋಕರಿಗಳಿಗೆ ತಕ್ಕ ಶಿಕ್ಷೆ ಮಾಡಿ ಸರಿಯಾಗಿ ನೋಡಿಕೊಳ್ಳಲೆಂಬ ಉದ್ದೇಶದಿಂದ ಈ ಸೂಚನೆಯನ್ನು ತಂದಿದ್ದೇನೆ.

Presence of all Ministers in the Assembly.

Sri K. CHENGALARAYA REDDY (Leader of the House).—Before we proceed with the business of the House, I want to say a word or two in regard to a matter which has just been brought to my notice. It appears that the Hon'ble Leader of the Opposition Janab J. Mahomed Imam, raised a point regarding the attendance of the Ministers in this House. He seems to have made a point that all the Ministers were not in their seats while certain points were being made by the opposition members. I would submit that it is not necessary for all the Ministers to be present when cut motions are discussed or speeches are made by the Hon'ble Members of this House. It would be a very difficult thing for all Hon'ble Ministers to sit from the beginning to the end of the Session and follow the proceedings. Arrangements have been made for the supply of proceedings of the day and not a single point would be missed by any Minister and whenever there is a suitable opportunity and sufficient time for the Minister to reply, all the points raised by the Hon'ble Members would be met. We have made arrangement that the proceedings of each day's meeting

should be made available to the concerned Ministers overnight and it is not as if any point would be missed. It is enough if the Hon'ble Minister in charge of the particular department on which debate is going on is present. It is not obligatory that all the Hon'ble Ministers should be present. This is a well-established practice everywhere and the same practice is followed here also.

May I, Sir, on this occasion ventilate my complaint that the Hon'ble Member who has raised this point absents himself far too frequently? (Loud Laughter). He makes crisp and sharp comments and just at the time of the Hon'ble Minister's reply to him, he conveniently absents himself from the House. (Laughter).

So, persons living in glass houses should not try to throw stones at others. Apart from that, as I said, it is not obligatory for all the Ministers to be present.

Sri M. GOVINDA REDDY.—Sir, inefficiency in the Police Department as tabled by this cut motion is an old disease. (*A Voice: Incurable*). Not incurable; it is curable but not sufficient attention has been devoted to this aspect. It is only to this aspect that I want to address myself. The most important section of the Police Department, I must submit, is the Constabulary. Of course, there are higher officers; higher officers know their duty and know also how to discharge their duty. May be that they may not discharge their duty satisfactorily. Even supposing they discharge their duty satisfactorily, it is not they alone that count in preserving law and order, but it is the Constabulary that counts much. That is because we have constables everywhere. It is only in a Hobli or in a Taluk that a higher officer resides. So, the people, the generality of the people, meet the constable much more frequently than an officer. These constables are even ignorant of the essentials of the Police Regulation. For instance, when individuals in the public road use obscene language and a constable is passing by, he does not know that it is his duty to interfere and check it. For instance, a bus passes with a head load of passengers and the constable does not think that it is his duty to stop that and to check it and that he has power to do so. Of course, people of the Jamedar rank have got some idea. But the constables are entirely ignorant of their powers. So, Sir, I conceive the defect is due to lack of efficient training. I wish to point out to the Hon'ble Minister that our Police Department has got to be reorganised on the British Constabulary system. We know that it is an efficient system; perhaps the most efficient system in the whole world is the British Constabulary. There, it is not the higher officer, but, it is the constable who is important. The constable will be conversant with the members of the public and he would be able to give them the required information. He is not only an officer who prosecutes the wrong-doer but he is also the officer who gives protection to the people in need, who gives assistance to those who are in need of assistance. In fact, he is also a public welfare officer. Such a system I saw in Ceylon. Sir, I happened to converse with constables who can independently converse in English and who can give facts and figures pertaining to the area, the convictions secured and so on. I was so happy that the constables there were so well trained. Here, there are some defects. The reorganisation aspect has not been attended to by the Governments in the past. The financial aspect of the Police officer is very poor. The constable is paid a pittance. The Sub-Inspector is also paid a pittance. When we take into account the onerous duty that these officers have to discharge and the most unpleasant task, we have to consider that we should pay them good salaries. Of course, our financial position may not allow immediate increments, but the Government, I urge, should give their earnest consideration to this aspect—to improve their financial aspect.

So far as the training facilities are concerned, I think, it is very necessary

and of urgent importance that the Police training must be reorganised. When we feel that there are disruptive elements in the society and day by day there is greater and greater insecurity for the public life and property, it is very necessary that this organ, the only organ, which can give immediate protection to the people, must be toned up in a very good manner.

ಶ್ರೀ ಎಸ್. ಆರ್. ಗುರುಲಿಂಗಯ್ಯನವರು (ಬೆಂಗಳೂರು ಜಿಲ್ಲೆ).—ಸ್ವಾಮಿ ಈ ಖೋತಾ ನಿರ್ಣಯಕ್ಕೆ ಸಂಬಂಧಪಟ್ಟಂತೆ ಪೋಲೀಸ್ ಇಲಾಖೆಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಪೋಲೀಸ್ ಇಲಾಖೆಯ ಕಾನ್ಸ್ಟೇಬಲ್‌ಗಳಲ್ಲೂ ಮತ್ತು ಅಧಿಕಾರಿಗಳಲ್ಲೂ ಏನು ಒಂದು ವಿಧವಾದ ಮನೋಭಾವ ಬಂದಿದೆ ಎಂಬುದನ್ನು ಸ್ಪಷ್ಟ ಪಡಿಸುವುದಕ್ಕೆ ಇಷ್ಟಪಡುತ್ತೇನೆ. ನನಗೆ ತಿಳಿದ ಹಾಗೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಲ್ಲೆ, ಆದರೆ ಮೂರು ಉದಾಹರಣೆಗಳನ್ನು ಮಾತ್ರ ಹೇಳಿ ಮುಗಿಸುತ್ತೇನೆ. ನಮ್ಮ ದೊಡ್ಡಬಳ್ಳಾಪುರದ ಹತ್ತಿರದ ಒಂದು ಹಳ್ಳಿಯಲ್ಲಿ ಸ್ವಲ್ಪಗಲಾಟೆ ಆಗುವ ಸಂದರ್ಭವಿತ್ತು. ವಿಷಮ ಪರಿಸ್ಥಿತಿಯುಂಟಾಗಬಹುದು ಎಂಬುದನ್ನು ಹೇಳಬೇಕೆಂದು ಅಲ್ಲಿನ ಮುಖಂಡರು ಪೋಲೀಸ್ ಸ್ಟೇಷನ್ಗೆ ಹೋದಾಗ ಪೋಲೀಸ್ ಸಬ್ ಇನ್ಸ್‌ಪೆಕ್ಟರೊಬ್ಬರು ಬಂದರು. ಆಗ ಅವರಿಗೆ ಈ ರೀತಿ ಪರಿಸ್ಥಿತಿ ಆಗಿದೆ, ತಾವೇ ಬರದೇ ಇದ್ದರೂ ಕೂಡ ಒಬ್ಬ ಪೋಲೀಸ್‌ಕಾನ್ಸ್ಟೇಬಲ್‌ನಾದರೂ ಕಳುಹಿಸಿ, ಪೋಲೀಸ್ ಯೂನಿ ಫಾರಂಕಂಡರೆ ಪರಿಸ್ಥಿತಿ ಹತೋಟಿಗೆ ಬರುವ ಹಾಗಿದೆ ಎಂದು ಹೇಳಿದ್ದಕ್ಕೆ, ಆ ಆಫೀಸರು ಬಹಳ ನಿಕೃಷ್ಟವಾಗಿ ಅವರನ್ನು ಕಂಡು, "ಒಬ್ಬರೂ ಬರುವುದಿಲ್ಲ, ಏನಿದ್ದರೂ ಹಣ ಬಿದ್ದರೇ ನಾವು ಬರುವುದು. ಹಣ ಬಿದ್ದಾಗ ಬಂದು ಹೇಳಿಬರುತ್ತೇನೆ" ಎಂದು ಹೇಳಿದರು. ಇದು ಎಷ್ಟರ ಮಟ್ಟಿಗೆ ಶೋಚನೀಯ, ಎಷ್ಟು ವ್ಯಥೆಯಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಯಾರಾದರೂ ಪೋಲೀಸ್‌ನವರ ಸಹಾಯವನ್ನು ಕೇಳುವುದಕ್ಕೆ ಬಂದರೆ ಅಷ್ಟರ ಮಟ್ಟಿಗೆ ಆಫೀಸರು ಉತ್ತರ ಕೊಡುತ್ತಾರೆ ಎಂದರೆ ಪೋಲೀಸ್ ಇಲಾಖೆಯಲ್ಲಿ ಎಷ್ಟರಮಟ್ಟಿಗೆ ಅನೀತಿ ತುಂಬಿದೆ ಎಂಬುದನ್ನು ಸಭೆಯವರ ಗಮನಕ್ಕೂ ಮತ್ತು ಸರ್ಕಾರದವರ ಗಮನಕ್ಕೂ ತಂದಿದ್ದೇನೆ.

ಇನ್ನೊಂದು ವಿಷಯದಲ್ಲಿ ಒಬ್ಬ ದಫೇದಾರ್ ಅವರ ಕರ್ತವ್ಯವನ್ನು ಸರಿಯಾಗಿ ನೆರವೇರಿಸಲಿಲ್ಲವೆಂದು ಸಬ್ ಇನ್ಸ್‌ಪೆಕ್ಟರಿಗೆ ದೂರು ಕೊಟ್ಟಾಗ ಅವರು ಏನೂ ಕಾರ್ಯಕ್ರಮಕೈಗೊಳ್ಳಲಿಲ್ಲ. ಆ ಸಬ್ ಇನ್ಸ್‌ಪೆಕ್ಟರು ನನಗೆ ಪರಿಚಯವಿದ್ದಿದ್ದರಿಂದ ದೂರು ಕೊಟ್ಟ ವ್ಯಕ್ತಿಗಳು ನನ್ನ ಹತ್ತಿರ ಬಂದು ನಿಮಗೆ ಅವರ ಪರಿಚಯವಿದೆ, ಈ ವಿಷಯದಲ್ಲಿ ಸ್ವಲ್ಪ ಆಸಕ್ತಿ ವಹಿಸಿ ಎಂದು ಹೇಳಿದರು. ನಾನು ಹೋಗಿ ಹೇಳಿದಾಗ ಹಾಗೆ ಇದೆ, ಹೀಗೆ ಇದೆ, ಜಾಗ್ರತೆ ವಿಚಾರಿಸುತ್ತೇನೆ, ಎಂದು ಹೇಳಿದರು. ಅದಕ್ಕೆ ನಾನು ಅವರಿಗೆ ತಾವು ಮುತುವರ್ಜಿ ವಹಿಸಿ, ಆದರಿಂದ ಪೋಲೀಸ್ ಇಲಾಖೆಯೆಂದರೆ ಜನರಲ್ಲಿ ವಿಶ್ವಾಸ ಹುಟ್ಟುತ್ತದೆ ಎಂದು ಹೇಳಿದೆ. ಆಗ ಅವರು ಒಪ್ಪಿಕೊಂಡರೂ ಕೂಡ ಕೆಲವು ದಿನ ಆದ ಮೇಲೆ ಅದೇ ಸಬ್ ಇನ್ಸ್‌ಪೆಕ್ಟರು ನನ್ನನ್ನು ಕರೆಸಿ "ದೂರನ್ನು ವಾಪಸ್ಸು ತೆಗೆದುಕೊಳ್ಳುವ ಹಾಗೆ ಮಾಡಿ, ಏನೋ ಆದದ್ದು ಆಗಿ ಹೋಯಿತು. ಆ ದಫೇದಾರನನ್ನು ಬಿಟ್ಟು ಕೊಡುವುದಕ್ಕಾಗುವುದಿಲ್ಲ, ಆ ರೀತಿ ವಾಪಸ್ಸು ತೆಗೆದುಕೊಳ್ಳದಿದ್ದರೆ ಇಂಥಾ ದೂರು ಬಂದಿತ್ತು, ಎಂಬುದನ್ನೇ ಹೇಳುವುದಿಲ್ಲ. ಗುರು ಎನ್ನುವವರು ನನಗೇನೂ ಹೇಳಲೇ ಇಲ್ಲ ಎಂದು ಹೇಳುತ್ತೇನೆ" ಎಂಬುದಾಗಿ ತಿಳಿಸಿದರು.

ಇನ್ನೊಂದು ಉದಾಹರಣೆ ಹೇಳುತ್ತೇನೆ ಸ್ವಾಮಿ, ನಾನು ಆ ವಿಷಯವಾಗಿ ಈ ಸಭೆಯಲ್ಲೂ ಪ್ರಶ್ನೆಯನ್ನು ಹಾಕಿದ್ದೇನೆ. ಆ ವಿಷಯದಲ್ಲಿ ತನಿಖೆ ಪೂರೈಸಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. 5 ತಿಂಗಳಾದರೂ ಅದರ ತರದೂದು ಇನ್ನೂ ಪೂರ್ತಿಯಾಗಿಲ್ಲವೆಂದು ಹೇಳುವುದು ಅತ್ಯಾಶ್ಚರ್ಯ! ಸಾಯಂಕಾಲ 7 ಘಂಟೆಯಲ್ಲಿ ಬೀಗ ಒಡೆದು 9 ಸಾವಿರ ರೂಪಾಯಿ ಬೆಲೆ ಬಾಳತಕ್ಕ ಬೆಳ್ಳಿ ಸಾಮಾನುಗಳನ್ನು ಚಿನ್ನದ ಒಡವೆಗಳನ್ನು ದೋಚಿಕೊಂಡು ಹೋದರು. ಐದು ತಿಂಗಳಾದರೂ ಇನ್ನೂ ತರದೂದು ಪೂರ್ತಿಯಾಗಿಲ್ಲವೆಂದರೆ ಎಷ್ಟು ಮಟ್ಟಿಗೆ ಪೋಲೀಸ್ ಇಲಾಖೆಯ ಕೆಲಸಕಾರ್ಯಗಳು ಜರುಗುತ್ತಿವೆ ಎಂಬುದನ್ನು ಯೋಚಿಸಬಹುದು. ಈ ರೀತಿ ಆದರೆ ಇದನ್ನು inefficiency ಎಂದು ಕರೆಯಬೇಕೋ, incompetency ಎಂದು ಕರೆಯಬೇಕೋ ಗೊತ್ತಾಗುವುದಿಲ್ಲ. ಇಂಥಾ ಬೇಕಾದಷ್ಟು ಉದಾಹರಣೆಗಳನ್ನು ನಾನು ಹೇಳಬಲ್ಲೆ. ಮಾನ್ಯ ಸದಸ್ಯರಿಗೂ ಗೊತ್ತಿದೆ. ಅವರೂ ಹೇಳಬಲ್ಲರು. ಸುಮ್ಮನೆ ಕಾಲ ವ್ಯರ್ಥವಾಗುತ್ತದೆ. ಈ ಮೂರು ಉದಾಹರಣೆಗಳಿಂದ ಪೋಲೀಸ್ ಇಲಾಖೆಯಲ್ಲಿ ಎಷ್ಟರಮಟ್ಟಿಗೆ ಅನೀತಿ ತಲೆ ಹಾಕಿದೆ, ಬೇರೂರಿದೆ ಎಂಬುದು ಸ್ಪಷ್ಟವಾದರೆ ನನ್ನ ಉದ್ದೇಶ ಸಾರ್ಥಕವಾದೀತು ಎಂದು ಹೇಳುತ್ತೇನೆ ಸ್ವಾಮಿ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಸ್ವಾಮಿ, ಈ ಖೋತಾ ಸೂಚನೆಯ ಬಗ್ಗೆ ಒಂದೆರಡಂಶಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಮೊದಲನೆಯದಾಗಿ, ಈ ಪೋಲೀಸ್ ಇಲಾಖೆಯಲ್ಲಿ ಯಾವುದೋ ಒಂದು ಕಾಲದಲ್ಲಿ, ಬೇರೆಯವರ ಪ್ರಭುತ್ವವಿದ್ದಾಗ ಇಂಡಿಯನ್ನರಿಗೂ ಮತ್ತು ಆಂಗ್ಲೋ ಇಂಡಿಯನ್ನರಿಗೂ ಈ ಸಂಬಳ ಬಡ್ತಿ ಇತ್ಯಾದಿ ವಿಷಯಗಳಲ್ಲಿ ಒಬ್ಬರಿಗೆ ಹೆಚ್ಚಾಗಿ ಇನ್ನೊಬ್ಬರಿಗೆ ಕಡಿಮೆಯಾಗಿ ವ್ಯತ್ಯಾಸವಿದೆ. ಅದೇ ಪದ್ಧತಿ ಈಗ್ಯೂ ನಡೆದುಕೊಂಡು ಬರುತ್ತಿದೆ. ಈ ಒಂದು ಕಾರಣದಿಂದಲೂ, ಈಗಿರತಕ್ಕ ಸಬ್ ಇನ್ಸ್‌ಪೆಕ್ಟರವರ ಕೇಡರಿನಲ್ಲಿ ದಕ್ಷತೆ ಕಮ್ಮಿಯಾಗುವುದಕ್ಕೆ ಅವಕಾಶವಾಗಿದೆ. ಈ ಬಾಬಿನ ಹೆಚ್ಚಿಗೆ ವಿವರಗಳೆಲ್ಲ ಮಾನ್ಯ ಗೃಹ ಮಂತ್ರಿಗಳವರಿಗೆ ಚೆನ್ನಾಗಿ ಗೊತ್ತಿದ್ದರೂ ಅವರು ಇದಕ್ಕೆ ತಮ್ಮ ಗಮನವನ್ನು ಕೊಟ್ಟಿಲ್ಲ. ಇದೆಲ್ಲವನ್ನೂ ಸರಿಪಡಿಸಲಿಕ್ಕೆ ಇವರಿಗಾದರೂ ಏನು ಅಡ್ಡಿ ಆತಂಕಗಳವೆಯೋ ನನಗಂತೂ ಗೊತ್ತಾಗುವುದಿಲ್ಲ. ನನ್ನ ಜೊತೆಯಲ್ಲಿ ಓದುತ್ತಿದ್ದವರು ಎಷ್ಟೋ ದಿವಸಗಳ ಹಿಂದೆ ಅನೇಕರು ಸಬ್ ಇನ್ಸ್‌ಪೆಕ್ಟರುಗಳಾಗಿದ್ದಾರೆ. ಆದರೆ ಅವರಿನ್ನೂ ಈಗಲೂ 60–70 ರೂಪಾಯಿಗಳ ಸಂಬಳದಲ್ಲೇ ಇದ್ದಾರೆ. ಇವರೆಲ್ಲರೂ ಪದವೀಧರರು. ಆದರೆ ಎಷ್ಟೋ ಜನ ಆಗ್ಯೇ ಮಿಡಲ್ ಸ್ಕೂಲನಲ್ಲಿ, ಕೆಲವರು ಹೈಸ್ಕೂಲಿನಲ್ಲಿ ಓದುತ್ತಿದ್ದವರು, ಡಿ.ಎಸ್.ಪಿ.ಗಳಾಗಿದ್ದಾರೆ. ಕೆಲವರು ಡಿಗ್ರಿ ಪಡೆದಕೂಡಲೇ ಅವರೂ ಎ.ಎಸ್.ಪಿ., ಡಿ.ಎಸ್.ಪಿ. ಗಳಾಗಿದ್ದಾರೆ. ಆದರೆ ಹಾಗೆ ಅವರನ್ನು ಏಕ್‌ದಂ ಅಂಥ ಮೇಲ್ದರ್ಜೆಗೇರಿಸಲು ಅವರು ತಮ್ಮ ಕಾಲೇಜಿನ ವ್ಯಾಸಂಗದಲ್ಲಿ ಅಷ್ಟು ಬುದ್ಧಿವಂತರೆಂದು ಯಾವ ಖ್ಯಾತಿಯನ್ನಾದರೂ ಗಳಿಸಿದ್ದರೇ! ಅದೂ ಇಲ್ಲ. ಆದರೆ ಅದಕ್ಕೆ ಕಾರಣ ಅವರು ದೊಡ್ಡ ಮನುಷ್ಯರ ಮಕ್ಕಳು ಎಂದು. ಇನ್ನೂ ಕೆಲವರು ಕಾಲೇಜಿ

ಗ್ರಾಂ ಕೊಟ್ಟು, ಇನ್ನೂ ಅನೇಕ ಸಂದರ್ಭಗಳಲ್ಲಿ ಪ್ರೋಷನ್ ಮೂಲಕ ಕರೆಸಿಕೊಂಡು ಅವರನ್ನು ಎ.ಎಸ್.ಪಿ.ಗಳನ್ನಾಗಿ ಮಾಡಿ, ಈಗ ಅವರು ಡಿ.ಎಸ್.ಪಿ.ಗಳಾಗಿದ್ದಾರೆ. ಆದರೆ ಅವರರೊಬ್ಬರು ಒಂದನೇ ನಂಬರ್ ಪುಕ್ಲರು.

ಶ್ರೀ ಟಿ. ಮರಿಯಪ್ಪನವರು.—ಅವರೆಲ್ಲರೂ ಈಗ ನೇಮಕರಾದವರಲ್ಲ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಖಂಡಿತವಾಗಿಯೂ ತಾವು ಇದನ್ನೆಲ್ಲಾ ಸರಿಪಡಿಸಬೇಕು. ಮೇಲಧಿಕಾರಿಗಳು ಸರಿಯಾಗಿಲ್ಲದೆ, ಸುವ್ಯವಸ್ಥೆಯಿಂದ ಆಡಳಿತ ನಡೆಸಲಿಕ್ಕೆ ಕೈಲಾಗದಂಥ ಪುಕ್ಲರಿಗೆ ಅಧಿಕಾರಕೊಟ್ಟರೆ ಅವರಿಂದೇನು ಪ್ರಯೋಜನ? ಒಳ್ಳೆಯ ಬುದ್ಧಿವಂತರೂ, ಸಮರ್ಥರೂ, ದಕ್ಷತೆಯುಳ್ಳವರೂ ಕೇವಲ 60–70 ರೂಪಾಯಿಗಳ ಸಂಬಳದಲ್ಲಿರುವುದೂ ಅಲ್ಲದೆ, ಇಂಥಾ ದಕ್ಷತೆ ಶೂನ್ಯವಾಗಿರತಕ್ಕ ಡಿ.ಎಸ್.ಪಿ.ಗಳಿಗೆ 'ಸಲಾಂ' ಹೊಡೆಯುವುದಕ್ಕೆ ಹೇಗೆ ಸಾಧ್ಯವಾಗುತ್ತದೆ?

ಇದೂ ಅಲ್ಲದೆ ಮೇಲಿನ ಹುದ್ದೆಗಳಿಗೆ ಆಗಾಗ್ಯೆ ಅವಕಾಶ ಬದ್ದಂತೆಲ್ಲ ಈ ಸಬ್ ಇನ್ಸ್‌ಪೆಕ್ಟರುಗಳಿಗೆ ಪ್ರೊಮೋಷನ್ ಕೊಡದೆ ಸರ್ಕಾರದವರು ಈಗ ನೇರವಾಗಿ ದೊಡ್ಡ ದೊಡ್ಡ ಹುದ್ದೆಗಳಿಗೆ ಭರ್ತಿ ಮಾಡುತ್ತಿದ್ದಾರೆ. ಹೀಗೆ ಹತ್ತಾರು ಜನಗಳನ್ನು ಡಿ.ಎಸ್.ಪಿ. ಸ್ಥಾನಗಳಿಗೆ ತೆಗೆದುಕೊಂಡಿದ್ದಾರೆ. ಹಿಂದೆ ಪದವೀಧರರಾಗಿದ್ದವರು ಈ ಇಲಾಖೆಗೆ ಸೇರುವಾಗ ಚೆನ್ನಾಗಿ ಮೆಹನತ್ತಿನಿಂದ ಕೆಲಸ ಮಾಡಿದರೆ ಜಾಗ್ರತೆ ಬಡ್ತಿ ದೊರೆಯುವ ಮತ್ತು ಮೇಲಿನ ಹುದ್ದೆಗಳಿಗೆ ಏರುವ ಅವಕಾಶ ಸಿಕ್ಕುತ್ತದೆಂಬ ಆಸೆಗಳನ್ನಿಟ್ಟುಕೊಂಡು ಈ ಇಲಾಖೆಗೆ ಸೇರಿದರು. ಮುಂದಕ್ಕೆ ಈ ಇಲಾಖೆಯಲ್ಲಿ ಡಿ.ಎಸ್.ಪಿ.ಗಳಾಗುತ್ತೇವೆ, ಐ.ಜಿ.ಪಿ. ಆಗುವವರೆಗೂ ಅವಕಾಶ ಇದೆ ಎಂಬ ಒಂದು ಉತ್ಸಾಹ ಅವರಲ್ಲಿ ಆಗ್ಯೆ ಮೂಡಿತ್ತು. ಆದರೆ ಈಗ ಅವರೆಲ್ಲರೂ ಈ ರೀತಿಯ ನಾನಾ ಕಾರಣಗಳಿಂದ ಬಹಳ ನಿರುತ್ಸಾಹಕರಾಗಿರುವಾಗ ದಕ್ಷತೆಯಿಂದ ಯಾರು ತಾನೆ ಕೆಲಸಮಾಡಬಲ್ಲರು? ಈ ಇಲಾಖೆಯ ನೌಕರರು ಎಷ್ಟು ಜನರಿಗೆ ವಿಧೇಯನಾಗಿರಬೇಕಾಗಿದೆ! ಮೊದಲು ಪೋಲೀಸ್ ಕಾನ್ಸ್‌ಟೇಬಲ್ ಆದವನು ದಫೇದಾರರಿಗೆ ವಿಧೇಯನಾಗಿರಬೇಕು, ದಫೇದಾರನಾದವನು ಸಬ್ ಇನ್ಸ್‌ಪೆಕ್ಟರಿಗೆ ವಿಧೇಯನಾಗಿರಬೇಕು, ಸಬ್ ಇನ್ಸ್‌ಪೆಕ್ಟರಾದವನು ಇನ್ಸ್‌ಪೆಕ್ಟರಿಗೆ ವಿಧೇಯನಾಗಿರಬೇಕು. ಹೀಗೆ ಅನೇಕ ಅಧಿಕಾರಿಗಳಿಗೆ ಅವರು ಅಧೀನರಾಗಿ ನಡೆದುಕೊಂಡು ಹೋಗುತ್ತಿರಬೇಕಾಗಿದೆ. ಹೀಗಿರುವಾಗ ಒಬ್ಬೊಬ್ಬನ ಅಧೀನದಲ್ಲಿರುವ ಪ್ರತಿಯೊಬ್ಬರೂ ಶಿಸ್ತಿನಿಂದಿರಬೇಕು. ಹೀಗೆ ಅವರು ಶಿಸ್ತಿನಿಂದ ಇರಬೇಕಾದರೆ ಮೇಲಧಿಕಾರಿಗಳು ದಕ್ಷರಾಗಿರಬೇಕು. ಇಲ್ಲವಾದರೆ ಅಲ್ಲಿ ಯಾವ ಶಿಸ್ತೂ ಇರುವುದಿಲ್ಲ. ದಕ್ಷತೆ ಇರತಕ್ಕವರನೇಕರು ಇದ್ದಾರೆ. ಅವರೆಲ್ಲ ಬಹಳ ನಿಸ್ಸ್ಪೃಹತೆಯಿಂದ ಕೆಲಸ ಮಾಡುತ್ತಿದ್ದಾರೆ. ಕಷ್ಟಪಟ್ಟು ಕೆಲಸ ಮಾಡಿದರೆ ಅನುಕೂಲವಾಗುತ್ತದೆಂಬ ಭಾವನೆ ಅವರಿಗೆ ಹುಟ್ಟುವಂತಿರಬೇಕು. ನಾವು ತಮ್ಮಲ್ಲಿ ಪದೇ ಪದೇ ಇದನ್ನೆಲ್ಲ ಸರಿಪಡಿಸಬೇಕೆಂದು ಕೇಳಿದರೆ, ತಾವು ನಾವೇನು ಮಾಡುವುದಕ್ಕಾಗುತ್ತದೆ, ಇದೆಲ್ಲಾ ಹಿಂದಿನ ಸರ್ಕಾರದ ಒಂದು legacy: we are helpless ಎಂದು ಒಂದು 'ಪಲ್ಲವಿ' ಹಾಡಿಬಿಡುತ್ತೀರಿ. ಆದರೆ ಅಂಥಾ ಪಲ್ಲವಿಯಿಂದ... ....

ಶ್ರೀ ಎಲ್. ಸಿದ್ದಪ್ಪನವರು.—ಎಲ್ಲಾ ಸಂದರ್ಭಗಳಿಗೂ ಆ ಒಂದು 'ಪಲ್ಲವಿ' ಬಹಳ ಸಹಾಯಕವಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಇಂತಹ ಸಿಬ್ಬಂದಿಯನ್ನಿಟ್ಟುಕೊಂಡು ಜನಗಳು ಪಡುತ್ತಿರುವ ತೊಂದರೆಗಳು ಸಿಬ್ಬಂದಿಯನ್ನಿಟ್ಟುಕೊಳ್ಳದಾಗ ಅನುಭವಿಸುತ್ತಿದ್ದ ತೊಂದರೆಗಳಿಗಿಂತ ಹೆಚ್ಚಿನವುಗಳಾಗಿವೆ. ಆದಕಾರಣ ತಾವು ಈ ನ್ಯೂನತೆಗಳನ್ನೆಲ್ಲಾ ಸರಿಪಡಿಸದಿದ್ದರೆ ಮತ್ತು ಇದೇ ರೀತಿ ಮುಂದುವರಿದರೆ ಇನ್ನು ಒಂದು ಶತಮಾನವಾದರೂ ಈ ಇಲಾಖೆಯಲ್ಲಿ ದಕ್ಷತೆಯ ಚಿಹ್ನೆ ಕಂಡು ಬರಲು ಸಾಧ್ಯವಿಲ್ಲ.

ಶ್ರೀ ಬಿ. ಎನ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಸ್ವಾಮಿ, ಈ ಪೋಲೀಸ್ ಇಲಾಖೆಯಲ್ಲಿರತಕ್ಕ ಅಧಿಕಾರಿಗಳ ಮತ್ತು ನೌಕರರ ದಕ್ಷತೆ ಕಮ್ಮಿಯಾಗುವುದಕ್ಕೆ ಕಾರಣ ಇಷ್ಟೆ. ಡಿ.ಎಸ್.ಪಿ. ಹತ್ತಿರಕ್ಕೆ ಆಗಾಗ್ಯೆ ಕೆಲವು ಪೋಲೀಸ್ ಅಧಿಕಾರಿಗಳು ತಾಲ್ಲೂಕುಗಳಿಂದ ಬರುತ್ತಿರುತ್ತಾರೆ. ಹಾಗೆ ಬಂದವರು ಜಿಲ್ಲಾ ಕಛೇರಿಯಲ್ಲಿ ಈ ಡಿ.ಎಸ್.ಪಿ.ಗಳನ್ನು ನೋಡಿಕೊಂಡು ಹೋಗುವಾಗ ಇವರ ಕೈಕೆಳಗೆ ಕೆಲಸ ಮಾಡತಕ್ಕವರ ವಿಷಯದಲ್ಲಿ ಯಾರಿಗೆ ಪ್ರಮೋಷನ್ ಕೊಡಬೇಕು, ಯಾರಿಗೆ ಬಡ್ತಿ ಕೊಡಬೇಕು, ಎಂಬೀ ವಿಚಾರಗಳ ಬಗ್ಯೆ ತಮಗೆ ಬೇಕಾದವರಿಗೆ ಮಾತ್ರ ಶಿಫಾರಸ್ ಮಾಡಿ, ನ್ಯಾಯವಾಗಿ, ದಕ್ಷತೆಯಿಂದ ಕೆಲಸ ಮಾಡತಕ್ಕವರಿಗೆ ಯಾವ ಉತ್ತೇಜನವೂ ಸರಿಯಾಗಿ ದೊರೆಯುತ್ತಿಲ್ಲ. ಈ ಡಿ.ಎಸ್.ಪಿ.ಗಳಾದರೂ ನಿಷ್ಪಕ್ಷಪಾತವಾಗಿ ಯಾರ ದಕ್ಷರು, ಯಾರು ಚೆನ್ನಾಗಿ ಕೆಲಸ ಮಾಡುತ್ತಾರೆ, ನಿಸ್ಸ್ಪೃಹರು ಯಾರು ಎಂಬುದನ್ನು ತಿಳಿದುಕೊಳ್ಳದೆ ಕೇವಲ ಕೈಕೆಳಗಿನವರು ಹೇಳಿದ ವಿಷಯಗಳನ್ನೇ ಆಧಾರವಾಗಿಟ್ಟುಕೊಂಡು ಅದೇ ರೀತಿ ಜಿಲ್ಲಾ ಮುಖ್ಯಾಧಿಕಾರಿಗಳಿಗೆ ರಿಪೋರ್ಟು ಮಾಡಿಬಿಡುತ್ತಾರೆ. ಹೀಗೆ ಕೆಲವು ದಾಕ್ಷಿಣ್ಯಕ್ಕೊಳಗಾಗಿ ಕೆಲಸಗಳನ್ನು ಮಾಡುತ್ತಿರುವುದರಿಂದ ನಿಜವಾದ ದಕ್ಷತೆಯಿರತಕ್ಕವರಿಗೂ ಹುಮ್ಮಸ್ಸಿನಿಂದ ಅವರು ತಮ್ಮ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ನಾನು ನೋಡಿರುವಹಾಗೆ ಆ ಇಲಾಖೆಯಲ್ಲಿ ಅನೇಕರು ದಕ್ಷತೆಯುಳ್ಳವರೂ, ನಿಷ್ಪಕ್ಷಪಾತದಿಂದ ಕೆಲಸಮಾಡತಕ್ಕವರೂ ಇದ್ದಾರೆ. ಇತ್ತೀಚೆಗೆ ಹೊಸದಾಗಿ ಸೇರಿರುವ ಅನೇಕ ವಿದ್ಯಾವಂತರಲ್ಲಿ ಈ ಗುಣಗಳಿರುವುದು ಅನೇಕರಿಗೆ ಕಂಡು ಬರುತ್ತಿದೆ. ಆದರೆ ಕೆಲವು ಡಿ.ಎಸ್.ಪಿ.ಗಳು ಹೀಗೆ ಅನ್ಯಾಯ ಮಾಡುತ್ತಿರುವುದರಿಂದ...............

Mr. SPEAKER.—I do not think the Hon'ble Member can refer to any individual.

ಶ್ರೀ ಬಿ. ಎನ್. ಬೋರಣ್ಣಗೌಡರು.—I am not referring. ನಾನು ಹೇಳುತ್ತಿರುವುದು ಈ ಇಲಾಖಾ ಮೊಖ್ತೇಸರರು ಅಷ್ಟು ದಕ್ಷರಾಗಿಲ್ಲದಿರುವುದರಿಂದ ಯಾವುದನ್ನು ಹೇಗೆ ಸರಿಪಡಿಸಬೇಕೆಂಬುದನ್ನು ತಿಳಿಯದೆ ಸುಮ್ಮನೆ ಸಿಕ್ಕಿದಹಾಗೆ ಕೆಳದರ್ಜೆ ನೌಕರರನ್ನು ಎಂಟೆಂಟು ದಿನಗಳಿಗೇ ವರ್ಗಮಾಡತಕ್ಕದ್ದನ್ನು ಒಂದು ನೀತಿಯಾಗಿಟ್ಟುಕೊಂಡು ಇರುವಂತೆ ಕಾಣುತ್ತಿದೆ. ಹೀಗೆ ಪದೇಪದೇ ಕಡಿಮೆ ಕಾಲಾವಧಿಯಲ್ಲಿ ಅವರಿಗೆ ವರ್ಗ ಮಾಡುತ್ತಿರುವುದರಿಂದ ಅವರು ಎಲ್ಲಾ ಕಡೆಯೂ ಸುತ್ತಿಕೊಂಡು ಪುನಃ ಕೆಲವು ದಿವಸಗಳಲ್ಲೇ ಮೊದಲಿದ್ದ ಸ್ಥಳಕ್ಕೆ ಬಂದು ಬಿಡುತ್ತಾರೆ. ಹೀಗೆ ಚಾಡಿ ಮಾತುಗಳಮೇಲೆ ಅನೇಕರು ನೀಯತ್ತಿನಿಂದ ಕೆಲಸ ಮಾಡುತ್ತಿರುವವರಿಗೇ ಹೀಗೆಲ್ಲಾ ವರ್ಗವಾಗುತ್ತಿರುವುದರಿಂದ ಈಗ ಅವರೆಲ್ಲರೂ ಬಹಳ ಬೇಜಾರು ಪಟ್ಟುಕೊಂಡಿರುತ್ತಾರೆ. ಇದಕ್ಕೆಲ್ಲ ದಕ್ಷರಾಗಿರುವವರು ಮಾತ್ರ ಆ ಡಿ.ಎಸ್.ಪಿ. ಸ್ಥಾನದಲ್ಲಿದ್ದರೆ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಯುತ್ತವೆ. ನ್ಯಾಯ

ವಾಗಿ, ನಿಯತ್ತಿನಿಂದ ಕೆಲಸ ಮಾಡತಕ್ಕವರಿಗೆ, ಚಿಕ್ಕ ವಯಸ್ಸಿನವರಿಗೆ ಸಾಕಷ್ಟು ಉತ್ತೇಜನವನ್ನು ತಾವು ಕಲ್ಪಿಸಬೇಕು. ಹಾಗೆ ಮಾಡದೆ ಕೇವಲ ಶಿಫಾರಸ್ಸುಗಳಿಗೆ, ದಾಕ್ಷಿಣ್ಯಕ್ಕೆ, ಕಟ್ಟುಬಿದ್ದು ತಾವು ಇವುಗಳನ್ನೆಲ್ಲಾ ಮಾಡುತ್ತಾ ಹೋದರೆ ಇದರಲ್ಲಿ ದಕ್ಷತೆಯ ಮಾತನ್ನೇ ನಾವು ಮರೆತುಕೊಳ್ಳಬೇಕಾಗುತ್ತೆ. ಹೀಗೆ ಒಬ್ಬರ ಮೇಲೆ ಮತ್ತೊಬ್ಬರು ತಿಳಿಸುವ ಚಾಡಿಯ ವಿಷಯಗಳು ಸರಿಯೋ ಅಥವಾ ಅಲ್ಲವೇ ಎಂಬುದನ್ನು ವಿವೇಚನೆ ಮಾಡಿ ನೋಡದೆ ಅವರು ಹೇಳಿದ್ದೇ ಸರಿಯೆಂದು ಅವರಿಗೆ ಸಲ್ಲಬೇಕಾಗಿರುವ ಪ್ರಮೋಷನ್ ಇತ್ಯಾದಿಗಳನ್ನು ನಿಲ್ಲಿಸಿ ಬಿಡುವುದರಿಂದಲೂ, ಅವರಲ್ಲಿ ಅಸಮಾಧಾನ ಉಂಟಾಗಿ ಅವರ ದಕ್ಷತೆ ಕುಂದಿ ಹೋಗಲು ಒಂದು ಅವಕಾಶವಾಗಿರುತ್ತೆ. ಈ ನಾನಾ ಕಾರಣಗಳಿಂದ ದಕ್ಷರಾದ ಅಧಿಕಾರಿಗಳಿಗೂ ಮತ್ತು ನೌಕರರಿಗೂ ಅನೇಕ ರೀತಿಯಲ್ಲಿ ತೊಂದರೆಗಳಾಗಿರುತ್ತವೆ. ನಾನು ನೋಡಿದ ಹಾಗೆ ಒಂದು ದಿವಸ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರು ಭತ್ತದ ಲಾರಿಗಳು ಹೋಗುತ್ತಿದ್ದಾಗ ಅವುಗಳನ್ನು ಹಿಡಿಯಲು, ಅವುಗಳನ್ನು ಬಿಟ್ಟುಕೊಡಲು ಜಿಲ್ಲಾಧಿಕಾರಿಗಳು ಹುಕ್ಕುಂ ಮಾಡಿ ಬಿಟ್ಟರು. ಆಗಲಿ ಇನ್ಸ್‌ಪೆಕ್ಟರು, ನಾನು ಇಲ್ಲಿರುವುದೇ ಸರಿಯಾದುದಲ್ಲ, ಈ ಸ್ಥಳ ನನ್ನ ಯೋಗ್ಯತೆಗೆ ಸರಿಯಾದ್ದಲ್ಲ. ನಾನು ದಕ್ಷತೆಯಿಂದ ಕೆಲಸ ಮಾಡಲು ಸಾಧ್ಯವಿಲ್ಲವೆಂದು ಹೇಳಿ ಬೇರೆ ಕಡೆಗೆ ಹೋಗಿಬಿಟ್ಟರು. ಇಂಥಾ ಸನ್ನಿವೇಶಗಳು ಬೇಕಾದಷ್ಟಿವೆ. ಇದಕ್ಕೆಲ್ಲಾ ಕಾರಣ ದಕ್ಷರಾಗಿರುವ ಮೇಲಧಿಕಾರಿಗಳಿಲ್ಲದಿರುವುದೇ ಆಗಿರುತ್ತೆ. ಈ ಅವ್ಯವಸ್ಥೆಗಳನ್ನೆಲ್ಲಾ ತೊಡೆದು ಹಾಕಲು ದಕ್ಷರು ಅಧಿಕಾರಸ್ಥಾನದಲ್ಲಿದ್ದರೆ ಒಳ್ಳೆಯದು ಮತ್ತು ಎರಡನೆಯದಾಗಿ, ಅವರು ಒಂದು ತತ್ವ, ನೀತಿ ನಿಯಮಗಳನ್ನು ಇಟ್ಟುಕೊಂಡು ಕೆಲಸ ಮಾಡಬೇಕಾದುದು ಅತ್ಯಗತ್ಯ. ದಕ್ಷರಾಗಿರುವವರು ಇಂಥಾ ಹೆದರಿಕೆಗಳಿಗೆ ಅಂಜದಹಾಗೆ ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಬೇಕು ಎಂದು ತಿಳಿಸಿ ನಾನು ಈ ಸೂಚನೆಯನ್ನು ಸಮರ್ಥಿಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ಪೋಲೀಸ್ ಇಲಾಖೆಗೆ ದಕ್ಷತೆ ಎಷ್ಟರ ಮಟ್ಟಿಗಿರಬೇಕು ಮತ್ತು ಈಗ ಇರತಕ್ಕದ್ದು ಎಷ್ಟರ ಮಟ್ಟಿಗಿದೆ ಎಂಬ ವಿಚಾರದಲ್ಲಿ ಅಷ್ಟು ಹೆಚ್ಚು ವಾದ ಮಾಡಬೇಕಾದ್ದೇನೂ ಇಲ್ಲ. ಅದರಲ್ಲೂ ದೇಶಕ್ಕೆ ಇತ್ತೀಚೆಗೆ ಸ್ವಾತಂತ್ರ್ಯ ಬಂದ ಮೇಲೆ ಜನರ ನೆಮ್ಮದಿ ಮತ್ತು ಸ್ವಾತಂತ್ರ್ಯದ ಭದ್ರತೆಯನ್ನು ಎಷ್ಟರಮಟ್ಟಿಗೆ ಕಾಪಾಡಿಕೊಳ್ಳಬೇಕಾದ ಅಗತ್ಯವಿದೆಯೆಂಬ ಬಗ್ಗೆ ನಾನು ಅಷ್ಟು ಒತ್ತಿ ಹೇಳಬೇಕಾಗಿಲ್ಲ. ಇದುವರೆಗೂ ಪೋಲೀಸ್ ಇಲಾಖೆಯವರು ಕೆಲಸಮಾಡುತ್ತಿದ್ದುದಕ್ಕೂ, ಇನ್ನು ಮುಂದೆ ಮಾಡುತ್ತಿದ್ದ ನೀತಿಗೂ ಅಜಗಜಾಂತರ ವ್ಯತ್ಯಾಸವಿದೆ. ಪರಿಸ್ಥಿತಿ ಬದಲಾಯಿಸಿದೆ. ಆದ್ದರಿಂದ ಪೋಲೀಸ್ ಇಲಾಖೆಯ ರಚನೆ, ಅದು ಕೆಲಸ ಮಾಡತಕ್ಕ ರೀತಿನೀತಿಯನ್ನು ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡುವುದರ ಅವಶ್ಯಕತೆ ಬಹಳವಾಗಿದೆ. ಈಗ ನಮ್ಮ ಸ್ನೇಹಿತರು ಪೋಲೀಸ್ ಇಲಾಖೆಯಲ್ಲಿ ದಕ್ಷತೆಯ ಅಭಾವವಿರುವುದರಿಂದ ಏನೇನು ಅಚಾತುರ್ಯಗಳು ನಡೆಯುತ್ತಿವೆ ಎಂಬದನ್ನು ಹೇಳಿದ್ದಾರೆ. ಮೇಲಂದ ಹಿಡಿದು ಕೆಳದರ್ಜೆಯವರೆಗೂ ಬದಲಾವಣೆಯನ್ನು ಯಾವ ರೀತಿ ಮಾಡಬೇಕೆಂಬ ವಿಷಯದಲ್ಲಿಯೂ ಸಹ ಉಪಯುಕ್ತವಾದ ಸಲಹೆಗಳನ್ನೂ ಕೊಟ್ಟಿದ್ದಾರೆ. ಈ ಸಂಬಂಧದಲ್ಲಿ ನಾನು ನಾಲ್ಕಾರು ಮಾತುಗಳನ್ನು ಮಾತ್ರ ಹೇಳಬೇಕೆಂದಿದ್ದೇನೆ.

ಮೊದಲನೆಯದಾಗಿ, ಮಿಲಿಟರಿಗೇನು ಜವಾಬ್ದಾರಿ ಇದೆಯೋ, ಅದೇ ರೀತಿಯ ಜವಾಬ್ದಾರಿ ಸ್ವಲ್ಪ ಹೆಚ್ಚು ಕಡಿಮೆ ಪೋಲೀಸಿಗೂ ಇರಬೇಕು. ಒಂದು ದೇಶದ ಮೇಲೆ ಮತ್ತೊಂದು ದೇಶದವರು ಮಾಡುವ ಧಾಳಿಯನ್ನು ತಡೆಯಲು ಅಥವಾ, ದೇಶದಲ್ಲೆಲ್ಲಾ ಗಲಭೆ ಎದ್ದಾಗ ಶಾಂತಿಯನ್ನು ಕಾಪಾಡಲು ಮಿಲಿಟರಿ ಅವಶ್ಯಕತೆಯಿದೆ. ಸಾಧಾರಣ ಪರಿಸ್ಥಿತಿಯಲ್ಲಿ ಶಾಂತಿಯನ್ನು ಪಾಲಿಸುವುದಕ್ಕೆ ಪೋಲೀಸಿದೆ. ಇಂದಿನ ಪರಿಸ್ಥಿತಿ ಅಸಾಧಾರಣವಾದದ್ದು. ಗುಪ್ತವಾಗಿಯೂ ಪ್ರತ್ಯಕ್ಷವಾಗಿ ಎಷ್ಟೋ ದುಷ್ಟಶಕ್ತಿಗಳು ದೇಶದಲ್ಲಿ ಕೆಲಸ ಮಾಡುತ್ತಲಿವೆ. ಇವುಗಳನ್ನೆಲ್ಲಾ ಸಮರ್ಪಕವಾಗಿ ತಡೆಗಟ್ಟಿಕೊಂಡು ಕೆಲಸ ಮಾಡಬೇಕಾದರೆ ನಮ್ಮ ಪೋಲೀಸ್ ಇಲಾಖೆಯನ್ನು ಪುನರ್ರಚನೆ ಮಾಡಬೇಕಾದ್ದು ಅವಶ್ಯಕ. ಈಗ ಅವರಿಗೆ ಎಷ್ಟೋ ಮಹತ್ತರವಾದ ಕೆಲಸಗಳಿವೆ. ಒಂದು ವಿಧದಲ್ಲಿ ನೋಡಿದರೆ ನಮ್ಮ ಗೃಹ ಮಂತ್ರಿಗಳಿಗೆ ಪೋಲೀಸ್ ಪೋರ್ಟ್‌ಫೋಲಿಯೋ ಒಂದೇ ಇದ್ದರೆ ಉತ್ತಮವೆಂದು ಹೇಳುತ್ತೇನೆ. ಅವರಿಗೆ ಬೇಕಾದಷ್ಟು ಕೆಲಸವಿರುತ್ತದೆ. ಒಳಾಡಳಿತ ಸಚಿವರಿಗೆ ಪಬ್ಲಿಕ್ ವರ್ಕ್ಸ್, ವ್ಯವಸಾಯ, ಗ್ರಾಮಾಭಿವೃದ್ಧಿ ಇವೆಲ್ಲವನ್ನೂ ಹೊರಿಸಿದರೆ ಯಾವ ಇಲಾಖೆಯ ಕೆಲಸ ಕಾರ್ಯಗಳೂ ಸಮರ್ಪಕವಾಗಿ ನಡೆಯುವುದಿಲ್ಲ. ಇನ್ನು ಮುಂದೆ ಒಳಾಡಳಿತ ಮಂತ್ರಿಗಳು ಇನ್ನೂ ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡಬೇಕಾದ ಆವಶ್ಯಕತೆ ಇದೆ. ಇನ್ನು ಮೇಲೆ ಗೃಹ ಮಂತ್ರಿಗಳಿಗೆ ಬೇರೆ ಯಾವ ಕೆಲಸಗಳನ್ನೂ ಕೊಡಕೂಡದೆಂದು ಹೇಳಬಯಸುತ್ತೇನೆ.

ಈ ಇಲಾಖೆಯ ಮುಖ್ಯಾಧಿಕಾರಿಗಳು ಬಹಳ ದಕ್ಷರೂ ಗಟ್ಟಿಗರೂ ಆಗಿರಬೇಕು. ಅವರ ಹೆಸರನ್ನು ಕೇಳಿದ ಮಾತ್ರದಿಂದಲೇ ಸಮಾಜ ಘಾತುಕರೆಲ್ಲಾ ನಡಗುವಂತಿರಬೇಕು. ಅವರ ಹಿಂದಿನ ಚರಿತ್ರೆಯನ್ನು ಕೇಳಿದಾಕ್ಷಣ ಅವರಿಗೆಲ್ಲಾ ನಡುಕ ಹುಟ್ಟಬೇಕು. ಪುಂಸತ್ವವಿಲ್ಲದವರನ್ನಾಗಲಿ, ದಕ್ಷತೆಯ ಅಭಾವಕ್ಕೆ ಹೆಸರಾಂತವರನ್ನಾಗಲಿ ಈ ಕೆಲಸಕ್ಕೆ ನೇಮಿಸಿದರೆ ಆ ಇಲಾಖೆಯಲ್ಲಿ ಇದ್ದ ದಕ್ಷತೆಯೂ ಹಾಳಾಗಿ ಹೋಗುತ್ತದೆ. ನನ್ನ ಅಭಿಪ್ರಾಯದಲ್ಲಿ ಪೋಲೀಸ್ ಇಲಾಖೆಯಲ್ಲಿ ದಕ್ಷತೆಯು ಕೆಳಮಟ್ಟಕ್ಕೆ ಇಳಿದಿರುವುದಕ್ಕೆ ಇದೂ ಒಂದು ಕಾರಣ. ಎರಡನೆಯದಾಗಿ, ಸರ್ಕಾರದವರು ಅನುಸರಿಸುತ್ತಿರುವ ರಿಕ್ರೂಟ್‌ಮೆಂಟ್ ನೀತಿ ಸರಿಯಲ್ಲ. ಬ್ರಾಹ್ಮಣ ಬ್ರಾಹ್ಮಣೇತರ ಪ್ರಶ್ನೆ ಎತ್ತಿ, ಕುರುಬ, ಕುಂಬಾರ, ಲಂಗಾಯಿತ ಎಂದು ಲೆಕ್ಕಹಾಕಿದರೆ ದಕ್ಷನಾದ ಮನುಷ್ಯನೆಲ್ಲಿ ಸಿಕ್ಕಬೇಕು ? ಯಾವ ಮನುಷ್ಯನಲ್ಲಿ ದಕ್ಷತೆಯಿದೆಯೆಂದು ಕಂಡುಬರುತ್ತದೆಯೋ ಅವನು ಯಾವುದೇ ಜಾತಿಗೆ ಸೇರಿರಲಿ, ಆತನನ್ನು ಆರಿಸಬೇಕು ಹಿಂದಿನಿಂದ ಬಂದವರ ಪೈಕಿ ದಕ್ಷರಲ್ಲದವರಿದ್ದಾರೆ ಎಂದು ಹೇಳಬಹುದು. ಅಂಥವರಿದ್ದರೆ ಅವರನ್ನು ತಕ್ಷಣ ತೆಗೆದುಹಾಕಬೇಕು. ಏಕೆಂದರೆ ದಕ್ಷತೆಗೆ ಅಭಾವ ಇರುವವರೆಗೆ ಖಂಡಿತ ಆ ಇಲಾಖೆ ಉತ್ತಮಗೊಳ್ಳುವುದಿಲ್ಲ. ಬೇಕಾದರೆ ಹಾಗೆ ಈ ಇಲಾಖೆಗೆ ಅವರು ನಾಲಾಯಕ್ಕಾಗಿದ್ದರೆ ಹೆಚ್ಚು ಆಹಾರ ಬೆಳೆಯುವ ಇಲಾಖೆಗೆ ಕಳುಹಿಸಿ ಬಿಡಿ. ಅದರಿಂದ ಬಹಳ ಪ್ರಾಮುಖ್ಯವಾದ ವಿಷಯಕ್ಕೆ ಅನುಕೂಲವಾಗುತ್ತದೆ. ಈ ಇಲಾಖೆಯ ಅಧಿಕಾರಿಗಳು ತಪ್ಪುಮಾಡಿದರೆ ಕೋರ್ಟಿನಲ್ಲಿ ಕೇಸುಹಾಕುವ ನೀತಿಯನ್ನು ಬಿಟ್ಟುಬಿಡಬೇಕು. ಮಿಲಿಟರಿಯವರು ತಪ್ಪು ಮಾಡಿದರೆ ಅಥವಾ ಅವರಲ್ಲಿ ದಕ್ಷತೆಗೆ ಅಭಾವ ಕಂಡುಬಂದಾಗ ಅವರಿಗೆ ಯಾವ ರೀತಿ ಮಿಲಿಟರಿ ಶಿಕ್ಷೆ ಕೊಡುತ್ತಾರೆಯೋ ಹಾಗೆ ಹೆಚ್ಚಿನ ರೀತಿಯ ಶಿಕ್ಷೆ ಈ ಇಲಾಖೆಯವರಿಗೂ ಮಾಡಬೇಕು.

ಸಮಾಜ ಘಾತುಕರು ಕೇವಲ ಸಾರ್ವಜನಿಕರಲ್ಲಿ ಮಾತ್ರ ಇರುವುದಲ್ಲದೆ, ಪೋಲೀಸಿನವರಲ್ಲೂ ಇದ್ದಾರೆಂಬುದು ನಿರ್ವಿವಾದವಾದ ಅಂಶ. ಹಳ್ಳಿಗಾಡಿನಲ್ಲಿ ಪಾರ್ಟಿ

ಮುಂತಾದುವುಗಳು ಹೆಚ್ಚಾಗಿವೆ. ಕೆಟ್ಟ ಕೃತ್ಯಗಳು ನಡೆಯಬೇಕಾದರೆ ಪೋಲೀಸಿನವರ ಸಹಾಯದಿಂದಲೇ ಅನೇಕವು ನಡೆಯುತ್ತವೆಂದು ಹೇಳುವುದಕ್ಕೆ ಉದಾಹರಣೆಗಳು ಅನವಶ್ಯಕ. ನನ್ನ ಸಂಗಡ ಬಂದರೆ ಬೇಕಾದಷ್ಟು ತೋರಿಸುತ್ತೇನೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಮ್ಮ ಇಲಾಖೆಯಲ್ಲಿ ಹೆಚ್ಚಿನ ದಕ್ಷತೆಯಿದೆ ಎಂದು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಬದಲು, ಮುಂದೆ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಲೆಂದು ಆಶಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರೆಲ್ಲರೂ ಈ ವಿಚಾರದಲ್ಲಿ ಮಾತನಾಡಿದ್ದಾರೆ. ಈ ವಿಷಯದಲ್ಲಿ ಸರ್ಕಾರದ ಕರ್ತವ್ಯವೇನಿರಬೇಕೆಂಬ ಬಗ್ಗೆ ಒಂದು ಅಂಶವನ್ನು ತಿಳಿಸಬೇಕಾಗಿದೆ. ಸ್ವಾಮಿ, ಶಾಂತಿಭಂಗ ಬರುತ್ತದೆಂದು ಹೇಳಿ ಒಮ್ಮೆ ಮಾಗಡಿ ತಾಲ್ಲೂಕಿಗೆ ಒಂದು ರಿಸರ್ವ್ ಪೋಲೀಸ್ ದಳವನ್ನು ಕಳುಹಿಸಿ ಕೊಟ್ಟರು. ಅಲ್ಲಿ.........

ಶ್ರೀ ಟಿ. ಮರಿಯಪ್ಪನವರು.—ಅದು ಸಬ್‌ಜುಡಿಸ್ ವಿಷಯ.

ಶ್ರೀ ಬಿ. ಹುಚ್ಚೇಗೌಡರು.—ನಾನು ಸಬ್‌ಜುಡಿಸ್ ಆಗಿರುವ ವಿಚಾರವ್ಯಾವುದನ್ನೂ ಹೇಳುವುದಿಲ್ಲ. ಪೋಲೀಸ್ ಕಾರ್ಯಕ್ರಮ ಏನೆಂಬುದನ್ನು ಮಾತ್ರ ಹೇಳುತ್ತೇನೆ.

ಅಧ್ಯಕ್ಷರು.—ಪೋಲೀಸ್ ಕಾರ್ಯಕ್ರಮ ಸರಿಯೇ, ಅಲ್ಲವೇ ಎನ್ನುವುದನ್ನು ಕೋರ್ಟಿನವರು ತಿಳಿಸುತ್ತಾರೆ. ಸಬ್ ಜ್ಯುಡಿಸ್ ಆಗಿರುವುದರಿಂದ ನೀವು ಬಿಟ್ಟುಬಿಡಿ.

ಶ್ರೀ ಬಿ. ಹುಚ್ಚೇಗೌಡರು.—Action of police in the village ಎಂದು ಹೇಳುವುದಿಲ್ಲ. ಪೋಲೀಸಿನವರು ಮಾನಭಂಗ ಮಾಡಿರುವುದನ್ನು ಹೇಳುವುದಿಲ್ಲ.

ಅಧ್ಯಕ್ಷರು.—ಪೋಲೀಸಿನವರು ಅತ್ಯಾಚಾರ ಮಾಡಿದರೇ, ಇಲ್ಲವೇ ಎಂಬುದನ್ನು ಕೋರ್ಟಿನವರು ಹೇಳುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಅತ್ಯಾಚಾರದ ವಿಷಯ ಕೋರ್ಟಿಗೆ ಹೋಗಿಲ್ಲ.

Sri T. MARIAPPA.—There are cases and counter-cases pending in court.

ಅಧ್ಯಕ್ಷರು.—ಪೋಲೀಸಿನವರ ಹಿತದೃಷ್ಟಿಗೆ ಧಕ್ಕೆ ತಗುಲದ ಹಾಗೆ ಆಗುತ್ತದೆ. ಆದ್ದರಿಂದ ಇದರ ವಿಚಾರದಲ್ಲಿ ನೀವು ಮಾತನಾಡುವುದು sub-judice.

ಶ್ರೀ ಬಿ. ಹುಚ್ಚೇಗೌಡರು.—ಹೆಂಗಸಿನ ವಿಷಯ ಹೇಳುತ್ತೇನೆ......

ಅಧ್ಯಕ್ಷರು.—ಅದನ್ನೇ ನಾನು ಹೇಳಿದ್ದು. ತಾವು, ಪೋಲೀಸಿನವರು ಅತ್ಯಾಚಾರ ಮಾಡಿದರು ಎಂದು ಹೇಳಿ, ಆ ವಿಚಾರ ಕೋರ್ಟಿಗೆ ಗೊತ್ತಾದರೆ ಪೋಲೀಸಿನವರ ಮೇಲೆ ಅಸೂಯೆ ಉಂಟಾಗುತ್ತದೆ. ಆದ್ದರಿಂದ ಅದನ್ನು ಹೇಳುವುದು ಬೇಡ.

ಶ್ರೀ ಬಿ. ಹುಚ್ಚೇಗೌಡರು.—ಎಲ್ಲಿದ್ದರೂ ಪ್ರಜೆಗಳಿಗೆ ಶಾಂತಿಭಂಗ ಬರದಂತೆ ಪೋಲೀಸಿನವರು ಅವರ ಕರ್ತವ್ಯವನ್ನು ಮಾಡುವುದಕ್ಕೆ ಮೇಲಿನ ಅಧಿಕಾರಿಗಳು ಗಮನ ಕೊಡಬೇಕು. ಎಲ್ಲೆಲ್ಲಿ ಲೋಪ ಮಾಡಿದ್ದು ಕಂಡುಬಂದರೂ ತಕ್ಷಣ ವಿಚಾರಣೆ ನಡೆಸಿ ಅದನ್ನು ತಿಳಿಸುವುದು ಸರ್ಕಾರದವರ ಕರ್ತವ್ಯ. ಹಾಗಿಲ್ಲದೆ ಯಾರಾದರೂ ಹೇಳಿದ ವಿಚಾರ ಉತ್ಪ್ರೇಕ್ಷೆಯಿಂದ ಕೂಡಿದ್ದರೆ, ಅದನ್ನೂ ಹಾಗೆಂದು ತಿಳಿಸಿ, ಇನ್ನುಮುಂದೆ ಹಾಗೆ ತರಕೂಡದೆಂದು ಹೇಳುವುದೂ ಸರ್ಕಾರದವರ ಕರ್ತವ್ಯ. ಏಕೆಂದರೆ, ಪೋಲೀಸಿನವರ ಮೇಲೆ ಸುಮ್ಮನೆ ಉತ್ಪ್ರೇಕ್ಷೆಗಳಿಂದ ಕೂಡಿದ ದೂರುಗಳು ಬರುವುದೂ ನಿಜ ; ಆದ್ದರಿಂದ ಹಾಗೆ ಬಂದಾಗ ಅವು ಉತ್ಪ್ರೇಕ್ಷೆ, ಮುಂದೆ ಹಾಗೆ ಹೇಳಕೂಡದೆಂದು ಅವರಿಗೆ ತಿಳುವಳಿಕೆ ಕೊಟ್ಟರೆ, ಆ ತೆರದ ಆರೋಪಣೆಗಳು ಬರುವುದು ನಿಂತುಹೋಗುತ್ತವೆ. ಸಾಮಾನ್ಯವಾಗಿ ಶಾಂತಿಭಂಗ ಬರುವ ಸಂದರ್ಭಗಳಲ್ಲಿ ಎರಡು ಪಾರ್ಟಿಗಳಿದ್ದೇ ಇರುತ್ತವೆ. ಅಂಥ ಸಂದರ್ಭಗಳಲ್ಲಿ ಅಲ್ಲಿ ಜವಾಬ್ದಾರಿಯುತರಾದ ಅಧಿಕಾರಿಗಳ ಸಂಬಂಧೀಕರು ಯಾರ್ಯಾರಿರುತ್ತಾರೆಂಬುದನ್ನು ನೋಡಿಕೊಂಡು ಸರಿಯಾದ ವಿದ್ಯಮಾನಗಳನ್ನು ತಿಳಿದುಕೊಂಡರೆ ಮುಂದೆ ಸರಿಯಾಗಿ ಕೆಲಸ ನಡೆಯುತ್ತದೆ. ಈ ಇಲಾಖೆಯ ಮೇಲೆ ಆರೋಪಣೆಗಳೂ ಕಡಿಮೆಯಾಗುತ್ತವೆ.

ಶ್ರೀ ಕೆ. ಸುಬ್ಬರಾಯರು (ಬೆಂಗಳೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಮಾನ್ಯ ಸದಸ್ಯರು ತಮ್ಮ ಸ್ವಂತ ಅನುಭವಗಳನ್ನೆಲ್ಲಾ ಬಹಳ ಚೆನ್ನಾಗಿ ಹೇಳಿದ್ದಾರೆ. ಒಂದು ವಿಷಯದಲ್ಲಿ ಮಾತ್ರ ನಾನು ಸ್ವಲ್ಪ ಮಾತನಾಡಬೇಕೆಂಬ ಉದ್ದೇಶವುಳ್ಳವನಾಗಿದ್ದೇನೆ. ಇದು ಬಹಳ ಮುಖ್ಯವಾದ ವಿಷಯವೆಂದು ನನಗನ್ನಿಸುತ್ತದೆ. ಸಾಮಾನ್ಯವಾಗಿ ಪೋಲೀಸಿನವರ ಒಂದು ಮುಖ್ಯ ಕರ್ತವ್ಯವೇನೆಂದರೆ ಬಸ್ಸುಗಳು ಮತ್ತು ಲಾರಿಗಳನ್ನು ಹತೋಟಿಯಲ್ಲಿಡಬೇಕಾದ್ದು. ಇದರಲ್ಲಿ ಲೋಪ ದೋಷ ಬಹಳಮಟ್ಟಿಗೆ ನಡೆಯುತ್ತಿದೆಯೆಂದು ನಾನು ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಇದರಲ್ಲಿ ದೋಷ ಬರುವುದಕ್ಕೆ ಕಾರಣ ನನಗೆ ತೋರುವುದು, ಸ್ಥಳದ ಅಧಿಕಾರಿಗಳು ಅನೇಕವೇಳೆ ಬಸ್ಸುಗಳಲ್ಲಿ ದುಡ್ಡು ಕೊಡದೆ ಪ್ರಯಾಣ ಮಾಡುವುದು ಎಂದು. ಏಕೆಂದರೆ, ಸ್ವಲ್ಪ ಅವರ ದಾಕ್ಷಿಣ್ಯಕ್ಕೊಳಗಾದರೆ ಅವರನ್ನು ಹತೋಟಿಯಲ್ಲಿಡುವುದು ಕಷ್ಟವಾಗುತ್ತದೆ. ಆದ್ದರಿಂದ ಕೆಲವು ನೌಕರರ ಮನಸ್ಸೂ ಕೂಡ ಮನೆಯ ಯಜಮಾನ ಯಾವರೀತಿ ಮಾಡುತ್ತಾನೆಯೋ ಅದೇ ರೀತಿಯಲ್ಲಿ ಹೋಗುವುದು ಸಹಜ. ಈಗ ಮುಖ್ಯವಾಗಿ ಸರ್ಕಾರದವರು ಅನೇಕ ಬಾಬುಗಳಲ್ಲಿ ಹತೋಟಿ ಇಟ್ಟಿದ್ದಾರೆ. ಈ ಹತೋಟಿ ಸಾಮಾನುಗಳನ್ನು ಅನೇಕ ಸಂದರ್ಭಗಳಲ್ಲಿ ನಿರ್ಭಯದಿಂದ ಸುಖವಾಗಿ ಸಾಗಿಸಿಕೊಂಡು ಹೋಗುತ್ತಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದರ ಜೊತೆಗೆ ಗಡಿ ಪ್ರದೇಶಗಳಲ್ಲಿ ಬಹುಮಟ್ಟಿಗೆ ಸಾಗುವಿಕೆ ಹೆಚ್ಚಿದೆ. ಸಾಕಷ್ಟು ಅಧಿಕಾರಿಗಳಿಲ್ಲದಿರುವುದರಿಂದ ಅನೇಕವೇಳೆ ಬಹಳ ತೊಂದರೆಯಾಗುತ್ತದೆ. ಈ ವಿಷಯದಲ್ಲಿ ಕಾನೂನು ಬಹುಮಟ್ಟಿಗೆ ಉಲ್ಲಂಘನೆಯಾಗುತ್ತಿದೆಯೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಲಾರಿಗಳಲ್ಲಿ ಜನರನ್ನು ತುಂಬಿಕೊಂಡು ಹೋಗಕೂಡದೆಂದು ಕಾನೂನಿದೆ ; ಆದರೂ ಹಾಗೆ ತುಂಬಿಕೊಂಡು ಹೋಗುತ್ತಿದ್ದಾರೆ. ಪೋಲೀಸಿನವರು ಎದುರಿಗೇ ಇರುತ್ತಾರೆ. ಆದರೆ ಅದನ್ನು ಕಣ್ಣಲ್ಲಿ ಸಹ ನೋಡುವುದಿಲ್ಲ. ಮುಖ್ಯವಾಗಿ ವಿಶೇಷ ಲಂಚ ಸಂಪಾದನೆಯೇ ಇದಕ್ಕೆ ಕಾರಣ. ದಕ್ಷತೆ ಇರಬಹುದು. ಇರುವ ದಕ್ಷತೆ ತೋರಿಸದೇ ಇರುವುದಕ್ಕೆ ಲಂಚವೇ ಕಾರಣ. ಕೈ ಒಡ್ಡುವ ಒಂದು ದುಷ್ಟ ಪದ್ಧತಿಗೆ ಸಿಕ್ಕಿ ಅನೇಕ ಸಂದರ್ಭಗಳಲ್ಲಿ ಅದರಿಂದ ಕೆಟ್ಟ ಪರಿಣಾಮವಾಗುತ್ತದೆ.

ಇನ್ನೊಂದು ವಿಚಾರವನ್ನು ಬಹು ಸಂಕಟದಿಂದ ಹೇಳಬೇಕಾಗಿದೆ. ರೈತರನ್ನು ಬಸ್ಸಿನ ಮಾಲೀಕರು ಮೃಗಗಳಿಗಿಂತಲೂ ಕಡೆಯಾಗಿ ಕಾಣುತ್ತಾರೆ. 20 ಜನರು ಕೂಡುವ ಕಡೆ 40 ಜನರನ್ನು, ಪ್ರಾಣಿಗಳನ್ನು ಕೂಡುವಹಾಗೆ ತುಂಬಿ, ಅದೂ ಸಾಲದೆ, ಬಸ್ಸಿನ ಮೇಲೂ ಸಹ ಹಾಕಿಕೊಂಡು ಬರುತ್ತಾರೆ. ಅದನ್ನು ಹಿಡಿದು

ನಿಲ್ಲಿಸಬೇಕು. ಹೊಳೆನರಸೀಪುರದಲ್ಲಿ ಹೀಗೆ ನಡೆಯುತ್ತೆಂದು ಕೇಳಿದ್ದೇನೆ. ಇದಕ್ಕೆ ಗಮನ ಕೊಡಬೇಕು. ಇದು ಅನುಭವದ ಮಾತು. ಇದರಿಂದ ದುಷ್ಟ ಪರಿಣಾಮವಿದೆ, ರುಜುವಾತು ಮಾಡುವುದಕ್ಕೆ ಪ್ರಯತ್ನಪಟ್ಟರೂ ಪೋಲೀಸಿನವರು ಬಂದು ಪರೀಕ್ಷೆ ಮಾಡುವುದಿಲ್ಲ. ಪೋಲೀಸ್ ಸ್ಟೇಷನ್‌ಗಳ ಬಳಿ ನಿಲ್ಲಿಸಿ ರುಜು ಹಾಕಬೇಕೆಂದಿದ್ದರೂ ಸ್ಟೇಷನ್‌ಗೆ 25 ಗಜ ದೂರದಲ್ಲಿ ಬಸ್ಸನ್ನು ನಿಲ್ಲಿಸಿ ಕಂಡಕ್ಟರು ಹೋಗಿ ರುಜು ಹಾಕಿ ಪುಸ್ತಕದ ಕೆಳಗೆ ಇಟ್ಟುಬರುತ್ತಾನೆ. ಇದರಿಂದ ಪೋಲೀಸಿನವರು ಸ್ಟೇಷನ್‌ನಿಂದ ಹೊರಗೆ ಬಂದು ಬಸ್ಸನ್ನು ತನಿಖೆ ಮಾಡುವುದೇ ಇಲ್ಲ; ಈ ಮನೋಭಾವ ಬದಲಾಯಿಸಬೇಕು. ಉದಾಹರಣೆಗೆ ನಾನು ಒಂದುದಿನ ಬಸ್ಸಿನಲ್ಲಿ ಪ್ರಯಾಣ ಮಾಡಿದಾಗ 29 ಜನ ಕೂತುಕೊಳ್ಳುವ ಜಾಗದಲ್ಲಿ 52 ಜನರನ್ನು ಭರ್ತಿಮಾಡಿದ್ದರು. ಆಗ ಒಬ್ಬ ಅಧಿಕಾರಿಗಳು ಬಹಳ ಜಬರುದಸ್ತಿನಿಂದ ಬಂದರು. ಅವರು ಆಫೀಸರೋ ಏನೋ ಗೊತ್ತಿಲ್ಲ. ಕಂಡಕ್ಟರನ್ನೂ, ಡ್ರೈವರನ್ನೂ ಕರೆಸಿ ಹಾಗೆ ಮಾಡುತ್ತೇನೆ, ಹೀಗೆ ಮಾಡುತ್ತೇನೆ ಎಂದು ಬೆದರಿಸಿದರು. ಆಗ ಏಕಪ್ಪ ತಪ್ಪುಮಾಡುತ್ತೀರಿ ಎಂದು ನಾನು ಬಸ್ಸಿನವರನ್ನು ಪ್ರಶ್ನೆಮಾಡಲು ಕಂಡಕ್ಟರು ಸ್ವಲ್ಪ ನೋಡುತ್ತಿರಿ, 5 ರೂಪಾಯಿ ಕೊಟ್ಟು ಸರಿಮಾಡಿಕೊಳ್ಳುತ್ತೇನೆ ಎಂದು ಹೇಳಿದ. ಆಮೇಲೆ 15 ರೂಪಾಯಿ ನೋಟು ಕೊಟ್ಟು ಸರಿಮಾಡಿಕೊಂಡ. ಆಗ ಆ ಆಫೀಸರು ಈ ದಿವಸ ಹೋಗಲಿ, ಮುಂದೆ ಹೀಗೆ ಮಾಡಬೇಡಿ ಎಂದು ಹೇಳಿದರು. ಇದು ಸರಿಯಲ್ಲ.

ಇನ್ನೊಂದು ಉದಾಹರಣೆ ಕೊಡುತ್ತೇನೆ. ಬಸ್ಸಿಗೆ ಪರ್ಮಿಟ್ಟೇ ತೆಗೆದುಕೊಳ್ಳುವುದಿಲ್ಲ. ಕಂಡಕ್ಟರುಗಳ ಮತ್ತು ಡ್ರೈವರುಗಳ ಹತ್ತಿರ ಪರ್ಮಿಟ್ಟೇ ಇರುವುದಿಲ್ಲ. ಬಸ್ಸಿನ ನಂಬರು, ತಪಶೀಲು ಬೇಕಾದರೆ ಕೊಡಬಹುದು. ಆದರೆ ಸಭೆಯಲ್ಲಿ ವ್ಯಕ್ತಿಯ ಹೆಸರು ವಗೈರೆ ಹೇಳಲು ಇಷ್ಟಪಡುವುದಿಲ್ಲ. ಪೋಲೀಸಿನವರು ಸಂಪಾದನೆಯಿರುವುದರಿಂದ ಅದನ್ನು ತನಿಖೆ ಮಾಡುವುದೇ ಇಲ್ಲ. ಹೀಗಾಗಿ ಎರಡು ಕಡೆಯೂ ಸಂಪಾದನೆಯಾಗುತ್ತಿದೆ. ಸರ್ಕಾರದ ಗಮನಕ್ಕೆ ಇದು ಬಂದಿರುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಇನ್‌ಸ್ಪೆಕ್ಟರು ಯಾರು ಎಂಬುದನ್ನು ಬೇಕಾದರೂ ಹೇಳಬಹುದು.

ಹೀಗೆ ಬೇಕಾದಷ್ಟು ಲೋಪದೋಷಗಳಿವೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಬಸ್ಸುಗಳಿಗೆ ಉತ್ಪತ್ತಿಯಿರುವುದು ರೈತರಿಂದ. ಅವರಿಗೆ ಕಷ್ಟವಿರುವಾಗ ಸರ್ಕಾರದವರು ಖಂಡಿತ ಅದನ್ನು ತಪ್ಪಿಸಬೇಕು. ಇಂಥ ನ್ಯೂನತೆಗಳಿಗೆ ಖಂಡಿತ ಶಿಕ್ಷೆಯಾಗಬೇಕು. ಈ ಬಾಬಿನಲ್ಲಿ ಮಾನ್ಯ ಮಂತ್ರಿಗಳು ಅಗತ್ಯವಾಗಿ ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಒಂದು ತಿಂಗಳಿಗೆ 500 ರೂಪಾಯಿ ಖರ್ಚಾದರೂ ಚಿಂತೆಯಿಲ್ಲ. ಒಬ್ಬರು ನಿತ್ಯವೂ ತನಿಖೆ ನಡೆಸಿದರೆ ಇಂಥ ಅಕ್ರಮಗಳನ್ನು ಬೇಕಾದಷ್ಟು ಕಂಡುಹಿಡಿದು ಸರಿಪಡಿಸಬಹುದು. ಪ್ರತಿದಿನವೂ ಈ ರೀತಿ ನಡೆಯುತ್ತಾ ಇದೆ. ಇದನ್ನು ಕಂಡುಹಿಡಿದು ರೈತರಿಗೆ ಅನುಕೂಲ ಮಾಡಿಕೊಡಬೇಕು. ಇರುವ ಲೋಪದೋಷಗಳನ್ನು ಸರಿಪಡಿಸಬೇಕು.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಪೋಲೀಸ್ ಇಲಾಖೆಯಲ್ಲಿರುವ ಎಲ್ಲಾ ಅಧಿಕಾರಿಗಳಲ್ಲೂ ಕೂಡ ದಕ್ಷತೆಗೆ ಲೋಪ ಬಂದಿದೆಯೆಂದು ಹೇಳಿ ದಕ್ಷರಾಗಿರುವ ಅಧಿಕಾರಿಗಳಿಗೆ ನಿರುತ್ಸಾಹವನ್ನುಂಟುಮಾಡಲು ನಾನು ತಯಾರಿಲ್ಲ. ಅಲ್ಲಲ್ಲಿ ದಕ್ಷರೂ ಇದ್ದಾರೆ; ದಕ್ಷತೆಯಿಲ್ಲದವರೂ ಇದ್ದಾರೆ. ಹೀಗೆ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಈ ಇಲಾಖೆಯ ನೌಕರರಲ್ಲಿ ಹಿಂದಿನಿಂದಲೂ ತಮ್ಮ ನೌಕರಿಯ ಬಡ್ತಿಯ ಕಡೆಗೆ ದೃಷ್ಟಿಯಿದೆಯೇ ಹೊರತು ದೇಶಸೇವೆ ಮಾಡಬೇಕೆಂಬ ಮನೋಭಾವ ಬೆಳೆದು ಬಂದಿಲ್ಲ. ಇದು ಸರಿಹೋಗಬೇಕಾದರೆ ಪೋಲೀಸ್ ಇಲಾಖೆಯು ಬಿಗಿಯಾಗಬೇಕು. ಮೇಲಿನ ಅಧಿಕಾರಿಗಳ ಹೆದರಿಕೆ ಹೆಚ್ಚಾಗಿರಬೇಕು. ಶ್ರೀ ಪುಟ್ಟಸ್ವಾಮಿಯವರು ಹೇಳಿದ ಹಾಗೆ ಪ್ರಮೋಷನ್ ಮತ್ತು ರಿಕ್ರೂಟ್‌ಮೆಂಟ್ ಒಂದೇ ವಿಧವಾದ ತತ್ವದ ಮೇಲೆ ಇರಬೇಕು. ಹಾಗಾದರೆ ಇಲಾಖೆಯಲ್ಲಿ ತೃಪ್ತಿಯಿರಲು ಅವಕಾಶವಾಗುತ್ತದೆ. ಅದಿಲ್ಲದೆ ಪ್ರಮೋಷನ್ ಮತ್ತು ರಿಕ್ರೂಟ್‌ಮೆಂಟ್ ವಿಚಾರದಲ್ಲಿ ಒಂದೊಂದು ಸಾರಿ ಒಂದೊಂದು ತತ್ವವನ್ನನುಸರಿಸಿದಲ್ಲಿ ನೌಕರರಲ್ಲಿ ಅಶಾಂತಿಯುಂಟಾಗುತ್ತದೆ. ಇಲಾಖೆಯಲ್ಲಿ ಸರಿಯಾದ ಆಡಳಿತ ವ್ಯವಸ್ಥೆಯಿರುವುದಿಲ್ಲ.

ಎರಡನೆಯದಾಗಿ, ಇಲಾಖೆಯಲ್ಲಿ ಹಳೇ ಹೆಗ್ಗಣಗಳು ಬಹಳವಾಗಿವೆ. ಸಿಮೆಂಟ್ ಕಾಂಕ್ರೀಟ್ ಹಾಕಿ ಭದ್ರಪಡಿಸಿದರೂ, ಕೊರೆಯುವ ಮನೋಭಾವ ಹೋಗಿಲ್ಲ. ನನ್ನ ಅನುಭವದಲ್ಲಿ ಹೊಸಬರೇ ಮೇಲು. ಗ್ರಾಜುಯೇಟುಗಳನ್ನು ನೇಮಕ ಮಾಡಿಕೊಳ್ಳುವುದೇ ಮೇಲು. ಆದ್ದರಿಂದ ಇಲಾಖೆಯಲ್ಲಿರುವ ಹಳೇ ಹೆಗ್ಗಣಗಳನ್ನು ಆದಷ್ಟು ಬೇಗ ಓಡಿಸುವುದಕ್ಕೆ ಪ್ರಯತ್ನ ಮಾಡಬೇಕು.

Sri K. PUTTASWAMI.—Sir, on a point of personal explanation. My friend has misunderstood me. ಹಳಬರನ್ನೂ ಹಾಕಬೇಕೆಂದು ನಾನು ಹೇಳಿದ್ದೇನೆ. ಮತ್ತು ಗ್ರಾಜುಯೇಟ್ ಸಬ್ ಇನ್‌ಸ್ಪೆಕ್ಟರುಗಳನ್ನು ರಿಕ್ರೂಟ್ ಮಾಡಿದ ಮೇಲೆ ಅವರಿಗೆ ಮುಂದೆ ಸರಿಯಾದ ಪ್ರಾಸ್‌ಪೆಕ್ಟ್ಸ್ ಇರಬೇಕೆಂದೂ ಹೇಳಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಒಂದೇ ತತ್ವ ಅನುಸರಿಸಿದಲ್ಲಿ ಇಲಾಖೆಯಲ್ಲಿ ಅಶಾಂತಿ, ನಿರುತ್ಸಾಹವಿರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಪೋಲೀಸಿನವರು ಏನು ಹೇಳಿದರೂ "ಪ್ರಜಾ ಸರ್ಕಾರ ನಿಮ್ಮದೇ" ಎಂದು ಹೇಳುತ್ತಾರೆ. ಸರ್ಕಾರದಲ್ಲಿ ಅನೇಕ ಕೆಲಸಗಳಾಗಬೇಕಾಗಿವೆ. ಹೀಗಿರುವಾಗ ಪ್ರತಿಯೊಂದಕ್ಕೂ ಪ್ರಜಾ ಸರ್ಕಾರ ಎಂದು ಹೇಳುತ್ತಿದ್ದರೆ ಇಲಾಖೆ ನಡೆಯುವುದು, ಆಡಳಿತ ನಡೆಯುವುದು ಕಷ್ಟ. ಆಡಳಿತದಲ್ಲಿ ಹೆಚ್ಚಿನ ವ್ಯವಸ್ಥೆ ಮತ್ತು ಬಹಳ ಬಿಗಿ ಇರಬೇಕು. ಮೇಲ್ಪಟ್ಟ ಅಧಿಕಾರಿಗಳ ಹೆದರಿಕೆ ಇರಬೇಕು. ಇಲ್ಲದಿದ್ದರೆ ಸಾಧ್ಯವಿಲ್ಲ. ಸರ್ಕಾರಿ ಅಧಿಕಾರಿಗಳಿಗೆ ಸ್ವಾತಂತ್ರ್ಯ ಯಾವಾಗ್ಯೂ ಇರಬಾರದು. ಯಾವ ಸರ್ಕಾರವೇ ಬರಲಿ, ಸರಿಯಾಗಿ ನಡೆಸಿಕೊಂಡು ಹೋಗಬೇಕಾದ್ದು ಅವರ ಕರ್ತವ್ಯ ಎಂದು ಹೇಳಿ ಈ ಖೋತಾ ಸೂಚನೆಯನ್ನು ಸಮರ್ಥಿಸುತ್ತೇನೆ.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಪೋಲೀಸ್ ಇಲಾಖೆಯಲ್ಲಿ ದಕ್ಷತೆಯಿಲ್ಲ. ಆದ್ದರಿಂದ ಅನೇಕ ಅನಾಹುತ, ಅನ್ಯಾಯ ಮುಂತಾದ್ದೂ ನಡೆಯುತ್ತಿವೆ ಎಂದು ನಮ್ಮ ಮಿತ್ರರು ಹೇಳಿದ್ದಾರೆ. ಆದರೆ ನನಗೆ ಕಾಣುವಂತೆ ದಕ್ಷತೆಯಿದ್ದರೂ ಅದು ಸ್ವಾರ್ಥಪರತೆಯಿಂದ ಅಭಾವವಾಗಿದೆ. ಸಾಮಾನ್ಯವಾಗಿ ದಕ್ಷತೆಯು ಪೋಲೀಸು ಇಲಾಖೆಯಲ್ಲಿ ಕಾಣುತ್ತಿದೆ. ಆದರೆ ಅದನ್ನು ಉಪಯೋಗಿಸುವಾಗ ತಮ್ಮ ಸ್ವಾರ್ಥತೆಯಿಂದ, ಹಣಕಾಸಿನ ದುರಾಸೆಯಿಂದ, ಲಂಚದ ಆಸೆಯಿಂದ ಅವರು ಹಿಂತೆಗೆಯುತ್ತಾರೆ. ಅವರು ಇರುವ ದಕ್ಷತೆಯನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ ಎನ್ನುವುದು ನನ್ನ ಅಭಿಪ್ರಾಯ.

ಕುದುರೆ ಸವಾರಿ ಮಾಡತಕ್ಕವನು ಬಲವಾಗಿ ಲಗಾಮು ಚಾವಟಿ ಹಿಡಿದುಕೊಂಡು ನಡೆಸಿದರೆ ಸರಿಯಾಗಿ ನಡೆಯುತ್ತದೆ. ಈಗ ಮೇಲೆ ಕುಳಿತು ನಡೆಸುವವರು ಸರಿಯಾಗಿಲ್ಲ, ಆದರಿಂದ ಅದು ಸರಿಯಾಗಿ ಚಲಸುತ್ತಿಲ್ಲ. ಇದರ ಫಲವನ್ನು ಅನುಭವಿಸುವ ದೌರ್ಭಾಗ್ಯ ಜನರಿಗೆ ಬಂದಿದೆ. ನಮ್ಮ ತಾಲ್ಲೂಕಿನ ಮೂರು ಹೋಬಳಿಗಳು ಬೆಟ್ಟ, ಕಾಡು ಪ್ರದೇಶಗಳು, ಮದರಾಸು ಪ್ರಾಂತದ ನೆರೆ ಪ್ರದೇಶಗಳು. ಈ ಮೂರು ಹೋಬಳಿಗಳ ಪೈಕಿ ಎರಡು ಹೋಬಳಿಗಳಲ್ಲಿ ಪೋಲೀಸು ಉಸ್ತುವಾರಿಯೇ ಇಲ್ಲ. ಮದರಾಸಿನಲ್ಲಿ ಪಾನ ನಿರೋಧ ಜಾರಿಯಲ್ಲಿರುವುದರಿಂದ ಅಲ್ಲಿಯವರಿಗೆ ಕುಡಿಯುವುದಕ್ಕೆ ಸಿಕ್ಕುವುದಿಲ್ಲ, ಅದಕ್ಕಾಗಿ ಇಲ್ಲಿಗೆ ಬರುತ್ತಾರೆ. ಹೀಗೆ ಬರುವವರು ಕಳ್ಳ ಕಾಕರು ಮತ್ತು ದರೋಡೆಕೋರರು. ಅವರು ಇಲ್ಲಿ ದರೋಡೆ ಮಾಡಿ ಅಲ್ಲಿಗೆ ಓಡಿ ಹೋಗುತ್ತಾರೆ. ಇಂತಹ ಅನೇಕ ಘಟನೆಗಳು ನಡೆದರೂಕೂಡ ನಮ್ಮ ಹೋಬಳಿಗೆ ಸಂಬಂಧಪಟ್ಟ ಪೋಲೀಸ್ ಸಬ್ ಇನ್ಸ್ಪೆಕ್ಟರ್ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಕೊನೆಗೆ ಕಳುವಾದ ಪದಾರ್ಥಗಳು ಅಲ್ಲಿ ಸಿಕ್ಕಿದ ಮೇಲೆ ಅವರು ತಿಳಿಸಿದ ಮೇಲೆ ಇನ್ಸ್ಪೆಕ್ಟರು ಅಲ್ಲಿಗೆ ಹೋಗಿ ಮುಂದಿನ ಕ್ರಮ ನಡೆಸಿದರು. ಇಂತಹ ಅಧಿಕಾರಿಗಳು ಎರಡು ಮೂರು ವರ್ಷಗಳಿಂದ ಅಲ್ಲೇ ಇದ್ದುಕೊಂಡು ಎರಡು ಮೂರು ಸಾರಿ ಬೇರೆ ಕಡೆ ವರ್ಗ ಮಾಡಿದರೂ ಕೂಡ ಹೋಗದೆ ಆತನು ಕಾಯ್ಯೋಮಾರ್ಶ್ಯೋ ಎಂದರೆ, ಆತನನ್ನು ಅಲ್ಲೇ ಇಟ್ಟರೆ ಇದು ಶಿಸ್ತಲ್ಲ, ಶಿಸ್ತಿನ ಅಭಾವವೆಂದು ಹೇಳಬೇಕಾಗಿದೆ. ಒಂದು ಸಾರಿ ಒಬ್ಬ ಪೋಲೀಸ್ ಕಾನ್ಸ್ಟೇಬಲ್ಲು ಒಬ್ಬ ಕಳ್ಳನನ್ನು ಹಿಡಿದುಕೊಂಡು ಬಂದು ಅವನು ಕನ್ನಗತ್ತರಿಯನ್ನು ಇಟ್ಟುಕೊಂಡು ಮಲಗಿದ್ದನೆಂಬುದನ್ನು ತೋರಿಸಿ ಹೇಳಿದರೆ ಅವನನ್ನು ಸಬ್‌ಇನ್ಸ್ಪೆಕ್ಟರ್ ‘ನೀನು ನೋಡಿದೆಯಾ’ ಎಂದು ಗದರಿಸಿ ಕಳುಹಿಸಿದ ಸಂಗತಿಯೊಂದು ನಡೆಯಿತು. ಈ ಅಧಿಕಾರಿ ಯಾರಾದರೂ ಗುದ್ದಾಡಿಕೊಂಡು ಹೋದರೆ ಅಥವಾ ಕಳ್ಳತನವಾದುದನ್ನು ಹೋಗಿ ಹೇಳಿದರೆ ಏನೂ ಮಾಡುವುದಿಲ್ಲ. ಕೊಟ್ಟ ದೂರನ್ನು ಒಂದೆರಡು ದಿವಸ ಹಾಗೆಯೇ ಇಟ್ಟುಕೊಂಡಿದ್ದು ‘ಬಿ’ ಷೀಟ್ ಹಾಕಿ ಬಿಡುತ್ತಾರೆ. ಒಂದು ಸಾರಿ ಕಾನಕಾನಹಳ್ಳಿಯ ರೂರಲ್ ಎಜುಕೇಷನ್ ಸೊಸೈಟಿಯ ಸರ್ವೆ ಮರಗಳು ಕಳುವಾಗಿ ಕಳ್ಳತನ ಮಾಡಿದವನನ್ನೂ ಹಿಡಿದು ಕೊಟ್ಟರೂ ಕೂಡ, ಎರಡು ಮೂರು ದಿವಸ ತನಿಖೆ ಶಾಸ್ತ್ರ ಮಾಡಿದ ಹಾಗೆ ಮಾಡಿ, ಕೊನೆಗೆ ನಾವು ಏನು ಮಾಡುವುದಕ್ಕೂ ಆಗುವುದಿಲ್ಲ, ನೀವು ಬೇಕಾದರೆ ಪ್ರೈವೇಟ್ ಕೇಸ್ ಹಾಕಿ ಎಂದು ಹೇಳಿಬಿಟ್ಟರು. ಹೀಗೆ ಕೆಲವು ಅಧಿಕಾರಿಗಳು ಜನರ ಸೌಕರ್ಯದ ಕಡೆ ಗಮನವನ್ನೇ ಕೊಡದೆ ಕಾಲವನ್ನೂ ಸಂದರ್ಭಗಳನ್ನೂ ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಂಡು, ಬಂದಷ್ಟು, ಸಿಕ್ಕಿದಷ್ಟು ದೋಚಿಕೊಂಡು ಹೋಗೋಣ ಎಂಬ ಮನೋಭಾವದಿಂದ ಕೆಲಸ ಮಾಡುತ್ತಾರೆ. ಸಂಬಳ ಸಾರಿಗೆಗಳು, prospects ಸರಿಯಾಗಿಲ್ಲ, ಆದುದರಿಂದ ದಕ್ಷತೆಯಿಲ್ಲವೆಂದು ಹಿಂದೆ ಮಾತನಾಡಿದ ಮಾನ್ಯ ಮಿತ್ರರು ಹೇಳಿದರು. ಇಂತಹ ದೃಷ್ಟಿ ಇರಬಾರದು. ತನಗೆ ಸರಿಯಾದ ಸಂಬಳ ಗ್ರೇಡು ಇಲ್ಲ, ಆದರಿಂದ ತಾನು ಸರಿಯಾಗಿ ಕೆಲಸ ಮಾಡುವುದಿಲ್ಲವೆಂಬ ಮನೋಧರ್ಮವುಳ್ಳ ಅಧಿಕಾರಿಗಳನ್ನು ಏಕೆ ಇಟ್ಟುಕೊಂಡಿರಬೇಕು ! ಏನೋ ಕಾರಣದಿಂದ ದಕ್ಷತೆ ಇಲ್ಲದಿದ್ದರೂ ಇಲಾಖೆಯಲ್ಲಿದ್ದರೆ ಅಂಥವರನ್ನು ಇಟ್ಟುಕೊಂಡಿರುವುದು ಅನ್ಯಾಯ. ಹೀಗೆ ಇಟ್ಟುಕೊಂಡಿರುವುದು ಮೇಲಿನವರಲ್ಲಿರುವ ದಕ್ಷತೆಯ ಅಭಾವವನ್ನು ತೋರಿಸುತ್ತದೆಯೇ ಹೊರತು ಮತ್ತೇನೂ ಅಲ್ಲ. ಇಂತಹ ಪರಿಸ್ಥಿತಿ ಒಂದು ಸ್ಥಳದಲ್ಲೇ ಅಲ್ಲ, ಸಾರ್ವತ್ರಿಕವಾಗಿ ದೇಶದ ಎಲ್ಲಾ ಕಡೆಯಲ್ಲೂ ಕಾಣುತ್ತಿರುವುದು ದಿನಚರಿಯ ಅನುಭವವಾಗಿ ಹೋಗಿದೆ. ಆದಕಾರಣ ನಮ್ಮ ಮಿತ್ರರೊಬ್ಬರು ಹೇಳುವ ಹಾಗೆ ಅಧಿಕಾರ ಸ್ಥಾನಗಳಿಗೆ ದಕ್ಷರನ್ನು ಹಾಕಬೇಕು. ಹಣಕಾಸಿನ ದುರಾಸೆಯಿಂದ ಕೇಸುಗಳನ್ನು ಬಿಟ್ಟು ಬಿಟ್ಟು ಬಿಡುವವರನ್ನೂ ಪೂಟ್‌ಲಾಯರುಗಳಿಗೆ ಪ್ರೋತ್ಸಾಹ ಕೊಡುವವರನ್ನೂ ಮನೆಗೆ ಕಳುಹಿಸುವುದು ಉತ್ತಮ. ಅಂಥವರ ಮೇಲೆ ಉಗ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದು ನನ್ನ ಅಭಿಪ್ರಾಯ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಪೋಲೀಸ್ ಇಲಾಖೆ ಎಂದರೆ ಗಂಡು ಇಲಾಖೆ ಎಂದು ಜನರು ತಿಳಿದುಕೊಂಡಿದ್ದಾರೆ. ಇದು quasi-military ಇಲಾಖೆ. ಈ ಇಲಾಖೆಗೆ ದೃಢ ಮನಸ್ಸಿನಿಂದ, ಜಬರದಸ್ತಿನಿಂದ ಕೆಲಸ ಮಾಡುವವರು ಬೇಕು. ಹೀಗಿರುವಾಗ ಅನೇಕ ಕಡ್ಡಿ ಪೈಲ್ವಾನರು ಇದರಲ್ಲಿರುವುದು ಬಹಳ ಶೋಚನೀಯ. ಅಂಥವರನ್ನು ದಯೆಯಿಟ್ಟು ಯಾವುದಾದರೂ ಕಚೇರಿಯಲ್ಲಿ ಕೆಲಸಕ್ಕೆ ಹಾಕಿಕೊಂಡರೆ ಉತ್ತಮ. ಇನ್ನೊಂದು ವಿಷಯವೇನೆಂದರೆ, ಈ ಇಲಾಖೆಯಲ್ಲಿ ಅಧಿಕಾರಿಗಳು ಸರಿಯಾಗಿ ಮೀಸೆ ಬಿಟ್ಟುಕೊಂಡು ಜಬರ್ದಸ್ತಿನಿಂದ ಇರುವುದೇ ಕಡಮೆಯಾಗಿದೆ. ಇದಕ್ಕೆ ತಕ್ಕ ಏರ್ಪಾಡು ಮಾಡಬೇಕು (ನಗು!). ನಾನು ಹೆಗ್ಗಡದೇವನಕೋಟೆಗೆ ಹೋಗಿದ್ದಾಗ ಅಲ್ಲಿ ಪೋಲೀಸ್ ಇನ್ಸ್ಪೆಕ್ಟರು ಯಾರೆಂದು ನೋಡಲಾಗಿ ಕೈಯೆಣ್ಣ ಮುಖ ನೋಡಬೇಕಾಯಿತು. ಇಂಥವರ ಮಾತನ್ನು ಯಾರೂ ಕೇಳುವುದಿಲ್ಲ. ಎಷ್ಟೋ ಜನ ಈ ಇಲಾಖೆಯಲ್ಲಿ ನಾಲಾಯಕ್ಕಾದವರಿದ್ದಾರೆ. ಇದನ್ನು ತಪ್ಪಿಸಬೇಕು. ಬಹುಶಃ ಇದಕ್ಕೆ ಕಾರಣವೇನೆಂದರೆ, ಬೇರೆ ಇಲಾಖೆಗಳಲ್ಲಿದ್ದು ಅಲ್ಲಿ ನಾಲಾಯಕ್ಕು ಎನ್ನಿಸಿಕೊಂಡವರು ಕಾರಣಾಂತರಗಳಿಂದ ಇಲ್ಲಿಗೆ ಬಂದು ದೊಡ್ಡ ಕೆಲಸಗಳಿಗೆ ಏರಿದ್ದಾರೆಂದು ಕಾಣುತ್ತದೆ. ಇದನ್ನು ತಪ್ಪಿಸಬೇಕು.

ಮೂರನೆಯದಾಗಿ, ಅಧಿಕಾರಿಗಳು ಅನೇಕ ಜನ ಪೋಲೀಸ್ ಕಾನ್ಸ್ಟೇಬಲುಗಳನ್ನು ತಮ್ಮ ಮನೆಗಳಲ್ಲಿ ಹಾಕಿಕೊಂಡು ತಮ್ಮ ಮಕ್ಕಳನ್ನಾಡಿಸುವುದು, ತರಕಾರಿ ತರುವುದು, ಅಡಿಗೆ ಮಾಡುವುದು—ಇಂಥಾ ಕೆಲಸಗಳಿಗೆ ಹಾಕಿಕೊಂಡಿದ್ದಾರೆ. ಇದನ್ನು ತಪ್ಪಿಸಬೇಕು. ಅವರಿಗೆ ಬೇಕಾದರೆ ಬೇರೆ ಆಳುಗಳನ್ನು ಕೊಡಿ. ಪೋಲೀಸ್ ಕಾನ್ಸ್ಟೇಬಲ್ ಆದವನು ಬರಿಯ ಚಡ್ಡಿ ಹಾಕಿಕೊಂಡು ಓಡಾಡಿದರೆ, ಅವನ ಕೆಲಸಕ್ಕೇನು ಗೌರವ ಬರುತ್ತದೆ ! ಕಾನ್ಸ್ಟೇಬಲ್‌ಗಳಲ್ಲಿ ಡ್ರೈವರ್ ಕೆಲಸ ಮಾಕೊಂಡಿರುವವರೂ ಇದ್ದಾರೆ. ಹೀಗೆಲ್ಲಾ ಮಾಡಬಾರದು.

ದಕ್ಷತೆಗೆ ಕುಂದು ಬಂದಿರುವುದು ಮತ್ತೊಂದು ಕಡೆ. ಎಲ್ಲಿ ಎಂದರೆ, ಕೆಲವು ಊರುಗಳಲ್ಲಿ ಕೆಲವರು informants ಎಂದು ಇಟ್ಟುಕೊಂಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ಇವರುಗಳಿಂದ ಹಾನಿಯಾಗುತ್ತದೆ. ಇವರು ಆಗಾಗ ಮೇಲ್ಪಟ್ಟ ಅಧಿಕಾರಿಗಳ ಹತ್ತಿರ ತಿರುಗಾಡುತ್ತಿರುತ್ತಾರೆ. ಇವರ ಪೂರ್ವೋತ್ತರವೇನೆಂಬುದನ್ನು ಮೇಲ್ಪಟ್ಟ ಅಧಿಕಾರಿಗಳು ಸರಿಯಾಗಿ ತಿಳಿದು ಇವರನ್ನು ಎಷ್ಟು ದೂರ ಇಡಬೇಕೋ ಅಷ್ಟು ದೂರ ಇಡುವಂತೆ ಏರ್ಪಾಡು ಮಾಡಬೇಕು.

ಮತ್ತೊಂದು ವಿಚಾರ, ಬಸ್ಸುಗಳಲ್ಲಿ ಯಾವಾಗಲೂ ಪೋಲೀಸ್ ಅಧಿಕಾರಿಗಳು ಮುಂದಿನ ಸೀಟುಗಳಲ್ಲಿ

ಪ್ರಯಾಣಮಾಡುತ್ತಿರುತ್ತಾರೆ. ಎಷ್ಟೋಸಾರಿ ಯಾರದು ಆ ಸೀಟು ಎಂದು ಕೇಳಿದರೆ, ಭರ್ತಿಯಾಗಿದೆಯೆಂದು ಕಂಡಕ್ಟರು ಹೇಳುತ್ತಾನೆ. ಆ ಮೇಲೆ ಪೋಲೀಸ್ ಇನ್ಸ್‌ಪೆಕ್ಟರೋ, ಸಬ್-ಇನ್ಸ್‌ಪೆಕ್ಟರೋ ಬರುತ್ತಾರೆ. ಅನೇಕ ಖಾಸಗೀ ದೊಡ್ಡ ಮನುಷ್ಯರು ಅನಾನುಕೂಲ ಪಟ್ಟುಕೊಂಡು ಪ್ರಯಾಣ ಮಾಡುತ್ತಿದ್ದರೂ ಒಬ್ಬ ಪೋಲೀಸ್ ಅಧಿಕಾರಿ ಜಬರ್‌ದಸ್ತಿನಿಂದ ಮುಂದಿನ ಸೀಟಿಗೇ ಹೋಗುತ್ತಾನೆ. ಇದನ್ನು ತಪ್ಪಿಸಬೇಕು. ಇನ್ನು ಮೇಲೆ ಪೋಲೀಸ್ ಅಧಿಕಾರಿಗಳು ಮುಂದಿನ ಸೀಟುಗಳಲ್ಲಿ ಹೋಗಕೂಡದು. ಮಧ್ಯದಲ್ಲೋ, ಕೊನೆಯಲ್ಲೋ ಕುಳಿತು ಪ್ರಯಾಣ ಮಾಡಬೇಕೆಂದು ಸೂಚನೆ ಕೊಡಬೇಕು. ಅನೇಕ ಸಂದರ್ಭಗಳಲ್ಲಿ ಬಸ್ಸು ಹೊರಡಲು ಹತ್ತು ಇಪ್ಪತ್ತು ನಿಮಿಷ ತಡವಾಗಿದ್ದರೂ ಹೊರಡದೆ ಪೋಲೀಸ್ ಅಧಿಕಾರಿಯ ಮನೆಗೆ ಹೋಗಿ ಅವರನ್ನು ಕರೆದುಕೊಂಡು ಹೋಗಬೇಕು. ಇದನ್ನೆಲ್ಲಾ ತಪ್ಪಿಸಬೇಕು.

ಇನ್ನೊಂದು ವಿಷಯ. ಪೋಲೀಸ್ ಇಲಾಖೆಯಲ್ಲಿ ಬಹಳ ಶೌರ್ಯಸಾಹಸಗಳನ್ನು ತೋರಿಸಿ ಕೆಲಸ ಮಾಡತಕ್ಕವರಿಗೆ 'ರಿವಾರ್ಡು' ಅಥವಾ ಬಹುಮಾನ ಕೊಡುವ ಪದ್ಧತಿ ಇದೆ. ಇದು ಸಾಲದು, ಒಬ್ಬನು ಜೂನಿಯರ್ ಆಗಿದ್ದರೂ, ಅವನು ಶೌರ್ಯಸಾಹಸಗಳನ್ನು ತೋರಿಸಿ ಕೆಲಸ ಮಾಡಿದರೆ ಆತನಿಗೆ ಸರಿಯಾದ ಬಡ್ತಿ ಕೊಟ್ಟು ಮೇಲಿನ ಕೆಲಸಕ್ಕೆ ಹಾಕಬೇಕು. ಹೀಗೆ ಮಾಡಿದರೆ ಅವನ ದಕ್ಷತೆ ಹೆಚ್ಚುತ್ತದೆ. ಅನೇಕ ಜನರು ಬೇರೆಬೇರೆ ಕಡೆಗಳಲ್ಲಿ ದಕ್ಷತೆಯಿಂದ ನಿಪುಣರಾಗಿ ಕೆಲಸ ಮಾಡಿದ್ದರೂ ಬಡ್ತಿಯಿಲ್ಲದೇಯಿರುತ್ತಾರೆ. ಅಂತಹವರನ್ನು ಮೇಲಿನ ಕೆಲಸಗಳಿಗೆ ನೇಮಿಸಿ, ಬರೀ ಬಹುಮಾನವೊಂದನ್ನು ಕೊಟ್ಟರೆ ಸಾಲದು.

ಮತ್ತೊಂದು ವಿಷಯ. ಕೆಲವು ಪೋಲೀಸ್ ಅಧಿಕಾರಿಗಳು ಲಾಯರ್ ಕೆಲಸ ಮಾಡುತ್ತಾರೆ. ದೂರು ಕೊಡಲು ಹೋದವರಲ್ಲಿ ಅಸಭ್ಯರೀತಿಯಲ್ಲಿ ವರ್ತಿಸುತ್ತಾರೆ. ನನ್ನ ಅನುಭವಕ್ಕೂ ಬಂದಿದೆ. ಒಂದು ಸಾರಿ ಹಸುವನ್ನು ಕಳ್ಳತನದಿಂದ ಹೊಡೆದುಕೊಂಡು ಹೋಗುತ್ತಿದ್ದ ಕಳ್ಳನೊಬ್ಬನನ್ನು ನಾವು ಹಿಡಿದುಕೊಂಡು ಹೋದೆವು. ಆ ಹಸುವನ್ನು ನಮ್ಮ ಮನೆಗೆ ಹೊಡೆದುಕೊಂಡು ಹೋಗಿ ಕಟ್ಟಿದೆ. ಹಿಡಿದುಕೊಂಡು ಹೋಗಿದ್ದ ಆಸಾಮಿಯನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದರು. ನಾನು ಲಾಯರು, ನನಗೇ ಆ ಸಬ್-ಇನ್ಸ್‌ಪೆಕ್ಟರು ಈ ರೀತಿ ಹೇಳಿದರು: 'ಎಲ್ಲಿ ಸ್ವಾಮಿ, ನಿಮ್ಮ ಕೇಸು ರುಜುವಾಗುತ್ತದೆ? ಆ ತರಹ ಹಸು ಇನ್ನೊಂದು ಬೇರೆ ಇರುವುದಿಲ್ಲವೇ! ಆ ರೀತಿ ಇನ್ನೊಬ್ಬರ ಹಸುವನ್ನು ಕಟ್ಟಿಕೊಂಡದ್ದು ನಿಮ್ಮದು ತಪ್ಪಲ್ಲವೇ' ಎಂದನು. ಅದಕ್ಕೆ ನಾನು ಹಸುವನ್ನು ಬಿಟ್ಟು ಬಿಡೋಣ, ಯಾರ ಮನೆಗೆ ಹೋಗುತ್ತದೆಯೋ, ಕದ್ದವನ ಮನೆಗೆ ಹೋಗುತ್ತದೆಯೋ ನೋಡೋಣ, ಎಂದು ಹೇಳಿದೆ. ಅಂತೂ ಆ ರೀತಿ ಯಾವುದಾದರೂ ಒಂದು ವಿಧದಲ್ಲಿ ರಾಜಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಮೊದಲು ಅದನ್ನು ತಪ್ಪಿಸಬೇಕು. ದೂರು ಕೊಡತಕ್ಕ ಕಾಲದಲ್ಲಿ ದೂರು ಕೊಡುವುದಕ್ಕೆ ಹೋಗುವವರಿಗೆ ಆಗತಕ್ಕ ಅವಮಾನ ಪೋಲೀಸ ಸ್ಟೇಷನ್ನಲ್ಲಿ ಆಗುವಷ್ಟು ಬೇರೆ ಎಲ್ಲೂ ಆಗುವುದಿಲ್ಲ. ಅವರ ಮುಂದೆ ನಿಂತುಕೊಂಡು ದೂರು ಕೊಡಬೇಕಾಗುತ್ತದೆ. ದೂರು ಕೊಡಲು ಹೋಗುವವರಿಗೆ ಸರಿಯಾದ ಮಾನ್ಯತೆ ಕೊಡಬೇಕು. ಅನೇಕ ಕಡೆ ಬೆಂಚುಗಳೇ ಇರುವುದಿಲ್ಲ. ಇವುಗಳನ್ನು ದಯವಿಟ್ಟು ಸರಿಪಡಿಸಬೇಕೆಂದು ಹೇಳುತ್ತೇನೆ.

ರಾಜಮಂತ್ರ ಪ್ರವೀಣ ಎಚ್. ಬಿ. ಗುಂಡಪ್ಪ ಗೌಡರು (ಹಾಸನ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಪೋಲೀಸ್ ಇಲಾಖೆ ಬಹಳ ಮುಖ್ಯವಾದದ್ದು. ಇದು ದೇಶಕ್ಕೆ ಒಂದು ಬಲವೇ ಎಂದು ಹೇಳಿದರೂ ಹೇಳಬಹುದು. ಖುಷ್ಕಿ, ಬಾಗಾಯ್ತು. ತರಿ ಎಂಬುದಾಗಿ ಸಾಧಾರಣವಾಗಿ ಹಳ್ಳಿಗಳಲ್ಲಿ ಹೇಳುವುದುಂಟು. ಇಲಾಖೆಗಳನ್ನು ಹಂಚಿದರೆ ಇದು ಬಾಗಾಯ್ತಿಗೆ ಸೇರಿದ್ದು. ಇತ್ತೀಚೆಗೆ ಈ ಇಲಾಖೆಯಲ್ಲಿ ಗ್ರ್ಯಾಜುಯೇಟುಗಳನ್ನು ರಿಕ್ರೂಟ್ ಮಾಡಿಕೊಂಡಿರುವುದರಿಂದ ಇದರ ಸ್ಟ್ಯಾಂಡರ್ಡ್ ಜಾಸ್ತಿಯಾಗಿದೆ. ದಕ್ಷರಾದ ಆಫೀಸರುಗಳು ಇದ್ದಾರೆ. ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇದು ಸೆಮಿ-ಮಿಲಿಟರಿ ಎಂದು ಹೇಳಿದರು. ಆದರೆ ಮಿಲಿಟರಿಯಲ್ಲಿ ಶಿಸ್ತನ್ನು ಕಾಪಾಡಲು ಯಾವಯಾವ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತಾರೋ ಅದೇ ಕಾರ್ಯಕ್ರಮಗಳನ್ನು ಇಲ್ಲೂ ಸಹ ಕೈಕೊಳ್ಳಬೇಕು. ಇಲ್ಲದೇ ಇದ್ದರೆ ದಕ್ಷತೆ ಹೆಚ್ಚುವುದಿಲ್ಲ. ದಕ್ಷತೆಯ ಕಡೆ ನಿಗಾ ಕೊಡದಿದ್ದರೆ ಕೆಲಸ ಮಾಡುವುದಕ್ಕೆ ಉತ್ತೇಜನವಿರುವುದಿಲ್ಲ. ಇತ್ತೀಚೆಗೆ ಕೆಲವು ಟಾರ್ಚರ್ ಕೇಸುಗಳು ಬರುತ್ತಾ ಇವೆ. ಹಳ್ಳಿಗಾಡಿನಲ್ಲಿ ಇಂತಹ ಕೇಸುಗಳು ಅನೇಕವು ನಮ್ಮ ಗಮನಕ್ಕೆ ಬಂದಿವೆ. ಇದು ಬಹಳ ವ್ಯಥೆಯನ್ನುಂಟು ಮಾಡತಕ್ಕ ವಿಷಯ. ತನಿಖೆ ಮಾಡುವ ಕಾಲದಲ್ಲಿ ಪೋಲೀಸ್‌ನವರು ಅನೇಕ ವಿಧವಾದ ಹಿಂಸೆ ಕೊಟ್ಟಿದ್ದಾರೆ. ಅದನ್ನು ಕೋರ್ಟಿನಲ್ಲಿ ಹಾಕಿ ನ್ಯಾಯವಾಗಿ ತೀರ್ಮಾನ ಮಾಡುತ್ತೇವೆ ಎಂದರೆ ಆಗುವುದಿಲ್ಲ. ಸಂದರ್ಭಾನುಸಾರ ಇಲಾಖೆಯ ನಮ್ಮ ರಿಪ್ರೊಸೀಜರ್ ಇಟ್ಟುಕೊಂಡು ನಿರ್ಧರಿಸಬೇಕು. ಆ ರೀತಿ ಹಿಂಸೆ ಮಾಡುವುದನ್ನು ತಡೆಗಟ್ಟಿದರೆ ಪ್ರಯೋಜನವಾಗುತ್ತದೆಯೇ ಹೊರತು ಪೋಲೀಸ್ ಕೇಸು ಹಾಕಿದರೆ ಅದು ಕಾಗ್ನೈಜಬಲ್ ತಕ್ಸೀರು ಹೌದೇ, ಅಲ್ಲವೇ ಎಂಬುದನ್ನು ತೀರ್ಮಾನಮಾಡಬೇಕಾಗುತ್ತದೆ. ಸರಿ, ಸಾಕ್ಷಿಗಳನ್ನು ಕರೆಸಬೇಕು, ಅವರು ಏನು ಹೇಳುತ್ತಾರೋ ಅದರ ಮೇಲೆ ಹೋಗುತ್ತದೆ. ಆ ಸಂದರ್ಭದಲ್ಲಿ ಪೋಲೀಸಿನವರ ಕೈವಾಡ ಇಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಈ ರೀತಿ ಆಗುವುದು ಬಹಳ ತಪ್ಪು. ಹೀಗಾಗದಂತೆ ನೋಡಿಕೊಳ್ಳಬೇಕು. ಪಟ್ಟಣಗಳಲ್ಲಾದರೆ ತಕ್ಷಣ ಲಾಯರುಗಳ ಸಹಾಯ ಪಡೆದು ಸರ್ಕಾರದವರ ಗಮನಕ್ಕೆ ತರುತ್ತಾರೆ. ಗ್ರಾಮಾಂತರಗಳಲ್ಲಿ ಈ ಟಾರ್ಚರ್ ಕೇಸುಗಳಿಂದ ತಿಳುವಳಿಕೆ ಇಲ್ಲದ ಜನರು ಬಹಳ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾರೆ. ಅದನ್ನು ಗಮನಿಸಿಯೂ ಕೋರ್ಟುಗಳಲ್ಲಿ ತೀರ್ಮಾನ ಮಾಡುತ್ತೇವೆ ಎಂದರೆ ಅದು ಭ್ರಾಂತಿಯ ಸ್ಥಿತಿ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ.

ಪೋಲೀಸ್ ಇಲಾಖೆಯ ಸ್ಟ್ಯಾಂಡರ್ಡ್ ಕಡಿಮೆ ಆಗುವುದಕ್ಕೆ ಕಾರಣವಿದೆ. ಲಕ್ಷಾಂತರ ರೂಪಾಯಿ ಹಣ ದುರುಪಯೋಗವಾಗಿರುವ ಸಂದರ್ಭ ಗೊತ್ತಾಗಿದೆ. ಅದರಲ್ಲಿ ದೊಡ್ಡ ಆಫೀಸರುಗಳು ಸೇರಿದ್ದಾರೆ. ಸಿ.ಐ.ಡಿ. ಇಲಾಖೆಯಲ್ಲಿ ಹಣ ದುರುಪಯೋಗವಾಗಿದೆ. ರಿಜರ್ವ್ ಪೋಲೀಸ್ ಇಲಾಖೆಯಲ್ಲಿ........................

Sri T. MARIAPPA.—It is much better the Hon'ble Member avoids such cases, because they are all under investigation.

Sri H. B. GUNDAPPA GOWDA.—Are they under judicial investigation?

Sri T. MARIAPPA.—They are under investigation by the Anti-Corruption Department.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇರಲಿ; ಅದನ್ನು ಹೆಚ್ಚಾಗಿ ಹೇಳುವುದಿಲ್ಲ. ಶಿಸ್ತನ್ನು ಕಾಪಾಡುವ ವಿಚಾರದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಸಾವಿರಾರು ರೂಪಾಯಿ ದುರುಪಯೋಗವಾಗಿರುವ ಸಂದರ್ಭದಲ್ಲಿ ಸಂಬಂಧಪಟ್ಟ ಆಫೀಸರನ್ನು ಸರ್ಕಾರದವರು ಎಷ್ಟೇ ದೊಡ್ಡ ಆಫೀಸರು ಆಗಿರಲಿ ಒತ್ತಾಯವಾಗಿ ರಜಾ ಕೊಟ್ಟು ಮನೆಗೆ ಕಳುಹಿಸಬೇಕು. ಅಥವಾ ತಕ್ಷಣ ಸಸ್‌ಪೆನ್ಷನ್‌ನಲ್ಲಿ ಇಡಬೇಕು. ಆ ರೀತಿ ಮಾಡದೇ ಇಲಾಖೆಯಲ್ಲೇ ಇಟ್ಟುಕೊಂಡು ವಿಚಾರಣೆ ನಡೆಸುತ್ತೇವೆ ಎಂದರೆ ಅದು ಸಾಧುವೇ ಎಂಬುದನ್ನು ಸ್ವಲ್ಪ ಆಲೋಚನೆ ಮಾಡಬೇಕಾಗುತ್ತದೆ.

Sri T. MARIAPPA.—It is not so.

Sri H. B. GUNDAPPA GOWDA.—Well, Sir, I know how it was done. ಮಾನ್ಯ ಮಂತ್ರಿಗಳು ಇದನ್ನು ಪ್ರಶ್ನಿಸುವುದಾದರೆ ಅನೇಕ ನಿದರ್ಶನಗಳನ್ನು ಕೊಡಬಹುದು. ಇಂಥಾ ಸಂದರ್ಭಗಳು ಸರ್ಕಾರದವರ ಗಮನಕ್ಕೆ ಬಂದು ಎಷ್ಟು ದಿನ ಆದ ಮೇಲೆ ಸಂಬಂಧಪಟ್ಟವರಿಗೆ ಜಾ ಕೊಟ್ಟಿರಿ ?

Sri T. MARIAPPA.—As early as the matter was brought to the notice of the Government.

Sri H. B. GUNDAPPA GOWDA.—How many months had lapsed ?

Sri T. MARIAPPA.—I cannot give the time off-hand.

Sri H. B. GUNDAPPA GOWDA.—I can say not les than 6 to 8 months. I may be right or I may be wrong, That is my information and I think I am correct. In fact I have suggested to some of the responsible members in the Government to take immediate action. The Hon'ble Minister knows it.

ಏಕೆ ಹೇಳುತ್ತೇನೆ ಎಂದರೆ ಪೋಲೀಸ್ ಇಲಾಖೆಯಲ್ಲೇ ಅಂಥ ಪ್ರಸಂಗ ನಡೆದರೆ ಬೇಲಿಯೇ ಎದ್ದು ಹೊಲ ಮೇಯ್ದರೆ ಯಾರು ತಾನೆ ಏನು ಮಾಡುವುದಕ್ಕೆ ಸಾಧ್ಯ? ಆದ್ದರಿಂದ ಇದು ಸೆಮಿ ಮಿಲಟರಿ ಇಲಾಖೆ ಎಂದು ಹೇಳಿದ ಮೇಲೆ ತೀವ್ರವಾಗಿ ಶಿಕ್ಷೆ ಮಾಡಿದ ಹೊರತು ಆಗುವುದಿಲ್ಲ. ಇಂತಹ ಆಪಾದನೆಗಳು ಬಂದ ಸಂದರ್ಭದಲ್ಲಿ ಅವರು ಸಬ್ ಇನ್‌ಸ್ಪೆಕ್ಟರಾಗಲೀ, ಇನ್‌ಸ್ಪೆಕ್ಟರಾಗಲೀ, ಯಾರೇ ಆಗಲೀ, ಅವರನ್ನು ಸಸ್‌ಪೆನ್ಷನ್‌ನಲ್ಲಿ ಇಡಿ. ವಿಚಾರಣೆ ಆದ ಮೇಲೆ ಪರಿಹಾರ ಅಥವಾ ಏನು ಬೇಕೊ ಅದನ್ನು ಕೊಡಿ. ಇಂಥ ಸಂದರ್ಭಗಳಲ್ಲಿ ಮಿಲಟರಿಯಲ್ಲಿ ಏನು ಮಾಡುತ್ತಾರೆ? ಕೋರ್ಟ್ ಮಾರ್ಷಲ್ ಮಾಡುತ್ತಾರೆ. ಆ ರೀತಿ ತೀವ್ರವಾದ ಶಿಕ್ಷೆಗೆ ಒಳಪಡಿಸದಿದ್ದರೆ ಅಧಿಕಾರಿಗಳಲ್ಲಿ ಶಿಸ್ತು ಜಾಸ್ತಿಯಾಗುವುದಿಲ್ಲ. ಆದ್ದರಿಂದ ಪೋಲೀಸ್ ಇಲಾಖೆಯಲ್ಲಿ ಶಿಸ್ತು ಜಾಸ್ತಿಯಾಗಿರಬೇಕೆಂಬ ಅಂಶವನ್ನು ಹೇಳುವುದಕ್ಕೆ ಈ ಸಂದರ್ಭವನ್ನು ಉಪಯೋಗಿಸಿಕೊಂಡಿದ್ದೇನೆ.

ಇನ್ನು ಬಸ್ಸುಗಳ ವಿಚಾರ, ಹೆಚ್ಚಾಗಿ ಹೇಳಬೇಕಾಗಿಲ್ಲ. ಹಾಸನದ ಡಿಸ್ಟ್ರಿಕ್ಟ್‌ನಲ್ಲಿ ಅನಾಹುತ ನಡೆದಿದ್ದನ್ನು ನೋಡಿದರೆ ಎಂಥವರಿಗಾದರೂ ವ್ಯಾಕುಲವಾಗುತ್ತದೆ. 5–6 ಜನ ಹೊಳೇನರಸೀಪುರದ ಹತ್ತಿರ ಈ ಅನಾಹುತದಿಂದ ಸತ್ತರು. ಆ ಬಸ್ಸಿನಲ್ಲಿ 80–85 ಜನ ಇದ್ದರು ಎಂದು ಹೇಳುತ್ತಾರೆ. ಬಸ್ಸುಗಳಲ್ಲಿ ಓವರ್‌ಲೋಡ್ ಮಾಡುವುದನ್ನು ಹತೋಟಿಗೆ ತಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಸರ್ಕಾರಿ ಬಸ್ಸುಗಳಲ್ಲಿ ಪತ್ತೇದಾರರು ಹೋಗುವುದಕ್ಕೆ ಯಾವ ತೊಂದರೆಯೂ ಇರುವುದಿಲ್ಲ. ಅವರನ್ನು ಕಳುಹಿಸಿದರೆ ದಾರಿ ಉದ್ದಕ್ಕೂ ಬೇಕಾದಷ್ಟು ಇಂತಹ ಓವರ್‌ಲೋಡಿಂಗ್ ಕೇಸುಗಳು ಸಿಕ್ಕುತ್ತವೆ. ಒಬ್ಬ ಶಿಸ್ತಿನಿಂದ ಕೆಲಸ ಮಾಡತಕ್ಕ ಅಧಿಕಾರಿಯನ್ನು ಹಾಕಿಕೊಂಡು ಓವರ್‌ಲೋಡ್ ಮಾಡುವುದನ್ನು ತಪ್ಪಿಸಿದ ಹೊರತು, ಇಂತಹ ಅನಾಹುತಗಳಾಗುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಬಸ್ಸುಗಳವರು ಪ್ರಯಾಣಿಕರಿಗೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಓವರ್‌ಲೋಡ್ ಮಾಡಬಹುದು. ಆ ರೀತಿ ಮಾಡಬಾರದು. ಹಿಂದಿನ ಸರ್ಕಾರದವರು ಒಂದು ಮೆಮೋ ಇಷ್ಯೂ ಮಾಡಿದ್ದು ನನಗೆ ಜ್ಞಾಪಕ ಇದೆ. ಅದು ಪೋಲೀಸ್ ಇಲಾಖೆಯವರಿಗೆ ಸಂಬಂಧಪಟ್ಟದ್ದು. ಪೋಲೀಸ್ ಇಲಾಖೆಯವರು ಬಸ್ಸುಗಳಲ್ಲಿ ಬಿಟ್ಟಿ ಪ್ರಯಾಣ ಮಾಡಕೂಡದೆಂಬುದು ಸಂಬಂಧಪಟ್ಟದ್ದಕ್ಕೆ. ಅದು ಎಷ್ಟರಮಟ್ಟಿಗೆ ಜಾರಿಯಲ್ಲಿದೆ ಎಂಬುದನ್ನು ತನಿಖೆ ಮಾಡಬೇಕು. ಈಗ ಟೌಟ್‌ಗಳನ್ನು ಹತೋಟಿಯಲ್ಲಿಟ್ಟು ಶಿಕ್ಷೆ ಮಾಡಬೇಕು. ಎಂದು ಒಂದು ಆಕ್ಟ್ ಇದೆ. ಆದರೆ ಅದು ಜಾರಿಯಲ್ಲಿದೆಯೋ! ಅವರಿಂದ ಎಷ್ಟು ತೊಂದರೆ ಎಂಬುದು ಪ್ರತಿಯೊಬ್ಬರಿಗೂ ಗೊತ್ತಿದೆ. ಸಾಧಾರಣವಾಗಿ ಈಗಲೂ ಕೂಡ ಈ ಬಸ್ಸುಗಳನ್ನು ಸಬ್‌ಇನ್‌ಸ್ಪೆಕ್ಟರು, ಇನ್‌ಸ್ಪೆಕ್ಟರು ಇವರುಗಳ ಮನೆಯ ಹತ್ತಿರಕ್ಕೇ ತೆಗೆದುಕೊಂಡು ಹೋಗುವುದು, ಅವರ ಮನೆ ಮುಂದೆ ಕಾಯುವುದು, ಇದೆಲ್ಲಾ ಇನ್ನೂ ತಪ್ಪಿಲ್ಲ. ಈ ರೀತಿ ಇರಬಾರದು. ಪೋಲೀಸ್ ಇಲಾಖೆಯವರ ಒಂದು ಶಿಸ್ತನ್ನು ಕಾಪಾಡುವವರಾಗಿರುವುದರಿಂದು ಅವರಲ್ಲಿ ಹೆಚ್ಚಿನ ಸ್ಟ್ಯಾಂಡರ್ಡ್ ಇರಬೇಕಾದ್ದು ಧರ್ಮ ಮತ್ತು ನ್ಯಾಯ. ಪೋಲೀಸ್‌ನವರು ನೋಡಿಕೊಂಡು ಜನರು ಪಾಠ ಕಲಿಯ ಬೇಕೇ ಹೊರತು, ಅವರಿಂದ ಜನ ಕೆಟ್ಟ ಗುಣ ಕಲಿಯುವಂತಾಗಬಾರದು. ಆ ರೀತಿ ಅವರಲ್ಲಿ ಒಳ್ಳೆಯ ನಡತೆ, ಒಳ್ಳೆಯ ಗುಣ, ಶಿಸ್ತು ಇವುಗಳನ್ನುಂಟು ಮಾಡಲು ಪೋಲೀಸ್ ಟ್ರೈನಿಂಗ್ ಸ್ಕೂಲ್‌ನಲ್ಲಿ ಸರಿಯಾದ ಶಿಕ್ಷಣ ಕೊಡಬೇಕು. ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲೂ ಒಂದೊಂದು ಟ್ರೈನಿಂಗ್ ಸ್ಕೂಲನ್ನು ಏರ್ಪಡಿಸಿ ಅಲ್ಲಿ ಕಾನ್‌ಸ್ಟೇಬಲ್‌ಗಳಿಗೆ ನಿಮ್ಮ ಜವಾಬ್ದಾರಿ ಇದು, ಈ ರೀತಿ ಕೆಲಸ ಮಾಡಬೇಕು, ಎಂಬ ತಿಳುವಳಿಕೆಯನ್ನು ಕೊಟ್ಟರೆ ಅನುಕೂಲವಾಗುತ್ತದೆ.

ಇನ್ನೊಂದು ವಿಚಾರವೇನೆಂದರೆ, ಈ ತನಿಖೆ ಮಾಡತಕ್ಕದ್ದು ಹಾಗಿರಲಿ, ಹಲವಾರು ಕಡೆ ನಡೆಯುವಂಥ ಗಲಭೆಗಳ ವಿಷಯ ಪೋಲೀಸನವರಿಗೆ ಗೊತ್ತಿಲ್ಲದೆ ಇರುವುದಿಲ್ಲ. ಹಾಗೆ ಅವರಿಗೆ ಗೊತ್ತಾಗಿದ್ದರೂ ಅವರು ಆ ಬಗ್ಗೆ ಅವುಗಳನ್ನು ತಡೆಗಟ್ಟಲು ಯಾವ ಪ್ರಯತ್ನಗಳನ್ನೂ ಮಾಡದೆ, ಅಕೃತ್ಯಗಳೆಲ್ಲಾ ಮುಗಿದನಂತರ ಅಲ್ಲಿಗೆ ತಾವು ಮಹಜರ್ ಕ್ರಮ ನಡೆಸಲು ಹೋಗುತ್ತಾರೆ. ಹಾಗೆ ಮಹಜರ್ ಮಾಡುವುದಕ್ಕೆ ಪ್ರತಿಯಾಗಿ ಅದನ್ನು ತಡೆಗಟ್ಟುವುದಕ್ಕೆ ಅವರು ಏಕೆ ಪ್ರಯತ್ನ ಮಾಡಬಾರದು ?' Prevention is better than cure or detection. ಸರ್ಕಾರದವರು ಇದನ್ನೆಲ್ಲ ಕೂಡಲೇ ತಪ್ಪಿಸಿ ಅವರಿಗೆ ಅಗತ್ಯ

ವಾಗಿ ಬೇಕಾಗಿರುವ ಸಹಾಯಗಳನ್ನು ನೀಡಿ, ಅವರನ್ನು ವಿದ್ಯಾವಂತರನ್ನಾಗಿ ಮಾಡಿ ದೇಶಕ್ಕೆ ತಮ್ಮ ಸೇವೆ ಸಲ್ಲಿಸಲು ಅನುಕೂಲವಾಗುವ ರೀತಿ ಏರ್ಪಾಡು ಮಾಡ ಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಿ ಹೇಳುತ್ತೇನೆ.

* ಶ್ರೀ ಟಿ. ಮರಿಯಪ್ಪನವರು.—ಮಾನ್ಯ ಅಧ್ಯಕ್ಷರೇ, ಈ ಖೋತಾ ನಿರ್ಣಯದಮೇಲೆ ವಿಪುಲವಾದ ಚರ್ಚೆಗಳು ನಡೆದಿವೆ. ಇದನ್ನು ಮಂಡಿಸಿರತಕ್ಕ ಶ್ರೀಮಾನ್ ಎಲ್. ಸಿದ್ದಪ್ಪನವರು ಬಹಳ ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ. ಅನೇಕ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದಕ್ಕಾಗಿ ನಾನು ತಮೆಲ್ಲರಿಗೂ ತುಂಬಾ ಕೃತಜ್ಞನಾಗಿದ್ದೇನೆ. ಆದರ ಬಗ್ಗೆ ನಾನು ತಮ್ಮೆಲ್ಲರಿಗೂ ಇಷ್ಟು ಮಾತ್ರ ಭರವಸೆ ಕೊಡ ಬಲ್ಲೆ. ಈ ಪೋಲೀಸ್ ಇಲಾಖೆಯಲ್ಲಿರುವವರೆಲ್ಲರೂ ಬಹಳ ಚೆನ್ನಾಗಿ, ದಕ್ಷತೆಯಿಂದ ಕೆಲಸಮಾಡಬೇಕಾದುದು ಬಹಳ ಅತ್ಯಗತ್ಯ. ಅದರಲ್ಲಿಯೂ ಜವಾಬ್ದಾರಿ ಸರ್ಕಾರ ಬಂದ ಮೇಲೆ ಇಲ್ಲಿನ ಆಡಳಿತವನ್ನು ನಮ್ಮದಿಯಿಂದ ಮತ್ತು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ನಮಗೆ ದಕ್ಷತೆಯಿಂದೊಡಗೂಡಿದ ಒಂದು ಪೋಲೀಸ್ ತಂಡ ಇರಲೇಬೇಕು. ಇದು ಬಹಳ ಅಗತ್ಯವಾದ ಅಂಶ. ಹಾಗೆ ಪೋಲೀಸಿನಲ್ಲಿ ಈಗ ಕಂಡುಬರುತ್ತಿರುವ ಲೋಪದೋಷಗಳಿಗೆ ಅನೇಕ ಕಾರಣಗಳೂ ಇವೆ. ಮಾನ್ಯ ಸದಸ್ಯರು ತಿಳಿಸಿವಂತೆ ದಕ್ಷರಾದ ಅಧಿಕಾರಿಗಳೂ ಇದ್ದಾರೆ; ದಕ್ಷರಲ್ಲದವರೂ ಕೆಲವರಿರಬಹುದು. ಆದರೆ ಅದೆಲ್ಲವನ್ನೂ ನಾವು ಇತ್ತೀಚೆಗೆ ವಿಮರ್ಶೆ ಮಾಡುತ್ತಿದ್ದೇವೆ. ಆ ಬಗ್ಗೆ ಎಲ್ಲಾ ಕಾರ್ಯಕ್ರಮವನ್ನು ಈಗಾಗಲೇ ಕೈಗೊಳ್ಳ ರಾಗಿದೆ. ಅದರೆ ಅನೇಕರು ಬಹಳ ದಿವಸಗಳಿಂದಲೂ ಇದರಲ್ಲಿ ಕೆಲಸ ಮಾಡಿಕೊಂಡು ಬಂದವರಾಗಿದ್ದಾರೆ. ಅಂಥವರನ್ನೆಲ್ಲಾ ಈಗ ಏಕಾ ಏಕಿ ಇಲಾಖೆಯನ್ನು ಬಿಟ್ಟುಹೋಗಿ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅವರನ್ನು ಶ್ರದ್ಧೆಯಿಂದ, ನಿಷ್ಪಕ್ಷಪಾತವಾಗಿ, ದಕ್ಷತೆಯಿಂದ ಕೆಲಸ ಮಾಡುವಂತೆ ಮಾಪಾರ್ಡು ಮಾಡಬೇಕೆಂಬ ವಾದವನ್ನು ನಾನು ಒಪ್ಪಿಕೊಳ್ಳುತ್ತೇನೆ. ಪೋಲೀಸಿನವರು ದಕ್ಷತೆಯಿಂದ ಕೆಲಸ ಮಾಡಬೇಕು, ಈ ಇಲಾಖೆಯನ್ನು ಪುನರ್ರಚನೆ ಮಾಡಬೇಕು ಎಂಬುದು ನ್ಯಾಯವಾದದ್ದು. ಈಗ ಸಮಾಜ ಘಾತುಕ ವ್ಯಕ್ತಿಗಳು ಎಲ್ಲೆಲ್ಲಿಯೂ ಹೆಚ್ಚಾಗುತ್ತಿದ್ದಾರೆಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಈ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಬಹಳ ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ. ಈ ಬಗ್ಗೆ ಒಂದು ಹೊಸ ವ್ಯವಸ್ಥೆಯನ್ನೇ ಜಾರಿಗೆ ತರಲು, ಈಗಿರುವಂಥ ಅನಕ್ಷರತೆಯನ್ನು ನೀಗಲು, ಅನಕ್ಷರಸ್ಥರಾದ ಪೋಲೀಸ್ ಕಾನ್‌ಸ್ಟೇಬಲ್ ಮತ್ತು ಧಫೇದಾರ್‌ಗಳಿಗೆ ಕೇವಲ ಇಲ್ಲಿಯತನಕ ಮೈಸೂರಿನಲ್ಲಿ ಮಾತ್ರ ಒಂದೇ ಒಂದು ಟ್ರೈನಿಂಗ್ ಸ್ಕೂಲಿತ್ತು, ಈಗ ಅಂಥಾ ಶಿಕ್ಷಣಶಾಲೆಗಳನ್ನು ಹೆಚ್ಚಿಸಿದ್ದೇವೆ. ಈ ಇಲಾಖೆಯಲ್ಲಿ ಸಾಧಾರಣ ಮಟ್ಟಿಗಾದರೂ ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಿ, ಸಾರ್ವಜನಿಕರಲ್ಲಿ ಸಹಕರಿಸಿ ಬೆರೆತು, ಸ್ನೇಹ ಭಾವದಿಂದ ವರ್ತಿಸಲು ಅನುಕೂಲವಾಗುವಂತೆ ಅವರಿಗೆ ಶಿಕ್ಷಣ ಕೊಡಲಾಗುತ್ತಿದೆ. ಈಗ ದೇಶದಲ್ಲಿರುವ ಪ್ರಜೆಗಳಿಗೆಲ್ಲ ಅಧಿಕಾರ ಬಂದಿರುವಾಗ, ಪ್ರತಿಯೊಬ್ಬ ಪೌರನಿಗೂ ಏನೇನು ಹಕ್ಕುಗಳುಂಟಾಗಿವೆ ಎಂಬ ವಿಚಾರಗಳನ್ನೂ ಸಹ ಸಿವಿಕ್ ಪಾಠದ ಮೂಲಕ ಅವರಿಗೆ ಈಗ ಶಿಕ್ಷಣ ಕೊಡಲಾಗುತ್ತಿದೆ. ಇಷ್ಟೆಲ್ಲದರ ಜೊತೆಗೆ ಆಳುತನವೂ ಕೂಡ ಇರಬೇಕೆಂಬುದನ್ನು ನಾನು ಒಪ್ಪುತ್ತೇನೆ. ಅಗತ್ಯವಾಗಿ ಇರಬೇಕಾದ ಅಂಶಗಳಲ್ಲಿ ಅದೂ ಒಂದಾಗಿದೆ. ಈ ಅಂಶಗಳನ್ನೆಲ್ಲಾ ಸರ್ಕಾರದವರು ತಮ್ಮ ಗಮನದಲ್ಲಿಟ್ಟುಕೊಂಡು ಆದಷ್ಟುಮಟ್ಟಿಗೆ ಅವುಗಳನ್ನೆಲ್ಲಾ ಬೇಗ ಸರಿಪಡಿಸಲಾಗುತ್ತದೆಯೆಂಬ ಭರವಸೆಯನ್ನು ನಾನು ತಮಗೆ ನೀಡುತ್ತೇನೆ.

ಇನ್ನು ಶ್ರೀಮಾನ್ ಬೋರಣ್ಣಗೌಡರು ಒಂದು ಅಂಶವನ್ನು ಸೂಚಿಸಿದ್ದಾರೆ. Process of weeding out has begun. In our anxeity to weed out, no honest man and efficient officer should suffer. ಆ ರೀತಿಯ ಒಂದು ಗುರಿ ಇಟ್ಟುಕೊಂಡು ವಾಸ್ತವಾಂಶಗಳನ್ನು ಪರಿಶೀಲಿಸಿ ಮಾಡುವಂತೆ ಮಾಡಬೇಕೆಂಬುದೇ ಸರ್ಕಾರದವರ ಉದ್ದೇಶವೂ ಆಗಿದೆ.

ಶ್ರೀಮಾನ್ ಎಲ್. ಸಿದ್ದಪ್ಪನವರು ಬಹಳ ಬಿಕ್ಕಟ್ಟಿನಿಂದ ಮಾತನಾಡಿದ್ದಾರೆ. ಆದರೆ ಅದನ್ನು ನಾನು ಈಗ ಬಿಡಿಸಿ ಹೇಳುವುದಿಲ್ಲ. ಅವರು ತಿಳಿಸಿರುವಂತೆ ಚೆನ್ನಗಿರಿ ತಾಲ್ಲೂಕಿನಲ್ಲಿ ಬಹಳ ವೈಮನಸ್ಸಿರುವಂಥ ಕೆಲವು ಪಾರ್ಟಿಗಳಿವೆ. ಮತ್ತೆ ಕೆಲವುಕಡೆ ಖೂನಿ, ದರೋಡೆ ಇತ್ಯಾದಿ ಸಮಾಜ ಘಾತುಕ ಕೆಲಸಗಳನ್ನು ಮಾಡತಕ್ಕಂಥ ವ್ಯಕ್ತಿಗಳೂ ಇರುವುದು ನಮ್ಮ ದುರ್ದೈವ. ಹೀಗೆ ವಿಪರೀತ ಕ್ರೋಧಾವೇಶಗಳನ್ನಿಟ್ಟುಕೊಂಡಿರುವ ಪಾರ್ಟಿಗಳು ಅಲ್ಲಲ್ಲೇ ಇವೆ. ಈ ಪಾರ್ಟಿಗಳು ಒಬ್ಬರ ಮೇಲೊಬ್ಬರು ಮಸೆಯುತ್ತಲೇ ಇದ್ದಾರೆ. ಈ ಅಂಶಗಳನ್ನೆಲ್ಲಾ ಸರ್ಕಾರದವರು ತಮ್ಮ ಗಮನಕ್ಕೆ ತೆಗೆದುಕೊಂಡಿದ್ದಾರೆ. ಆ ಬಗ್ಗೆ ಎಲ್ಲಾ ಎಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸ್ಥಳೀಯ ಅಧಿಕಾರಿಗಳಿಗೆ ಆಜ್ಞಾಪಿಸಲಾಗಿದೆ. ಆ ಬಗ್ಗೆ ಹಿಂದೆ ಕೆಲವು ಸಂದರ್ಭಗಳಲ್ಲಿ ಅಂಥ ಅಚಾತುರ್ಯಗಳ ವಿಷಯ ತಿಳಿದುಬಂದ ತಕ್ಷಣವೇ ನಾವು ಎಲ್ಲಾ ಕಾರ್ಯಕ್ರಮಗಳನ್ನೂ ಆ ಕೂಡಲೆ ಕೈಗೊಂಡು ಬೆಂಗಳೂರಿನಿಂದಲೇ ಸ್ಪೆಷಲ್ ಪೋಲೀಸ್ ಮತ್ತು ಸಿ. ಐ. ಡಿ. ಗಳನ್ನು ಅಲ್ಲಿಗೆ ಕಳುಹಿಸಿ, ಅಲ್ಲಿದ್ದ ಸಬ್-ಇನ್ಸ್‌ಪೆಕ್ಟರನ್ನು ಆ ಕೂಡಲೇ ಬೇರೆ ಕಡೆಗೆ ವರ್ಗಮಾಡಿ ಆ ಬಗ್ಗೆ ಎಲ್ಲಾ ಎಚ್ಚರಿಕೆಗಳನ್ನು ಕೂಡಲೇ ಸ್ಥಳದಲ್ಲೇ ಇದ್ದು ಕೈಗೊಳ್ಳಬೇಕೆಂದು ವೈರ್‌ಲೆಸ್ ಮೂಲಕ ಅಲ್ಲಿಯ ಡಿ. ಎಸ್. ಪಿ. ಗೆ ಎಚ್ಚರಿಕೆಗಳನ್ನು ಕೊಡಲಾಗಿದೆ. ಇಷ್ಟೆಲ್ಲಾ ಮಾಡಿದ್ದಾಗ್ಯೂ ಕೆಲವು ಘಟನೆಗಳು ಅಕಸ್ಮಾತ್ತಾಗಿ ನಡೆದುಹೋಗುತ್ತವೆ. ಆದರೆ ಅವುಗಳನ್ನು ಆದಷ್ಟೂ ನಡೆಯದಂತೆ ತಡೆಗಟ್ಟುವುದು ಪೋಲೀಸಿನವರ ಕರ್ತವ್ಯ. ಆ ಬಗ್ಗೆ ಸರ್ಕಾರದವರು ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ. ನಮ್ಮ ದೇಶದ ವಾತಾವರಣ ತಿಳಿದುಕೊಂಡು ದೇಶದಲ್ಲಿ ಶಾಂತಿ ಸೌಹಾರ್ದಗಳು ನೆಲೆಸುವಂತೆ ಆಗಬೇಕಾಗಿದ್ದರೆ ನಮಗೆ ಸಾರ್ವಜನಿಕರ ಸಹಾಯ ಅತ್ಯಗತ್ಯ. ಈಗ ತಾವೇನು ಸಲಹೆಗಳನ್ನು ಕೊಟ್ಟಿದ್ದೀರೋ ಅವುಗಳಿಗೆಲ್ಲ ಸಂಪೂರ್ಣ ಬೆಲೆ ಕೊಟ್ಟು, ನಾವು ಎಲ್ಲಾ ಕಾರ್ಯಕ್ರಮಗಳನ್ನೂ ತಕ್ಷಣ ಕೈಗೊಳ್ಳುತ್ತೇವೆ. ಕೆಲವುವೇಳೆ ಏಷ್ಟೋ ಲಾರಿಗಳು ನನ್ನ ಕೈಗೆ ಸಿಕ್ಕಿಹಾಕಿಕೊಂಡಾಗ, ಅಂಥಾ ಲಾರಿ, ಬಸ್ಸು ಇತ್ಯಾದಿಗಳ ಲೈಸೆನ್ಸನ್ನು ಸಸ್ಪೆಂಡ್ ಮಾಡಿ, ಕೆಲವರಿಗೆ ಲೈಸನ್ನೇ ಕಿತ್ತುಹಾಕಲಾಗಿದೆ. ಈ ಬಗ್ಗೆ ಒಂದೆರಡು ಅಂಕಿ ಅಂಶಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

1948–49ರಲ್ಲಿ ವರದಿಯಾದ ಹೀನಸ್ ಅಫೆನ್ಸಸ್‌ಗಳ (ದೊಡ್ಡ ಅಪರಾಧಗಳ) ಸಂಖ್ಯೆ 583. 1947–48 ರಲ್ಲಿ ವರದಿಯಾದದ್ದು 383, ಕೋರ್ಟ್

ನಲ್ಲ ವಿಚಾರಣೆ ಬಗ್ಗೆ ಪೆಂಡಿಂಗ್ ಇರತಕ್ಕದ್ದು 498. ಮ್ಯಾಜಿಸ್ಟ್ರೇಟರಿಂದ ಹೊಡೆದುಹಾಕಲಾದ ಕೇಸುಗಳ ಸಂಖ್ಯೆ 114, ತೀರ್ಮಾನವಾಗಿರತಕ್ಕದ್ದು 3,54. ಆದರೆ ನನ್ನಲ್ಲಿ ಜಿಲ್ಲಾವಾರು ಅಂಕಿ ಅಂಶಗಳಿಲ್ಲ. ಒಟ್ಟು ಅಂಕಿ ಅಂಶಗಳು ಮಾತ್ರ ಇರುತ್ತೆ.

ಇನ್ನು ಸಣ್ಣಪುಟ್ಟ ಅಪರಾಧಗಳ (petty cases) ಬಗ್ಗೆ 1946– 7ರಲ್ಲಿ 10 ಲಕ್ಷ 23 ಸಾವಿರ ರೂಪಾಯಿಗಳ ಬೆಲೆ ಬಾಳುವ ಆಸ್ತಿ ಕಳುವಾಗಿದ್ದು, ಆ ಪೈಕಿ 4 ಲಕ್ಷ 28 ಸಾವಿರ ರೂಪಾಯಿಗಳ ಆಸ್ತಿ ಪತ್ತೆ ಹಚ್ಚಲಾಗಿದೆ. 47–48ರಲ್ಲಿ 12 ಲಕ್ಷ 31 ಸಾವಿರ ರೂಪಾಯಿಗಳ ಆಸ್ತಿ ಕಳುವಾಗಿದ್ದುದರ ಪೈಕಿ 4 ಲಕ್ಷ 16 ಸಾವಿರ ರೂಪಾಯಿಗಳ ಬೆಲೆಯುಳ್ಳ ವಸ್ತುಗಳನ್ನು ಪತ್ತೆ ಹಚ್ಚಲಾಗಿದೆ. 48–49ರಲ್ಲಿ 16 ಲಕ್ಷ ಚಿಲ್ಲರೆ ಕಳುವಾಗಿದ್ದ ಆಸ್ತಿಯ ಪೈಕಿ 5 ಲಕ್ಷ 52 ಸಾವಿರದ 282 ರೂಪಾಯಿಗಳ ಬೆಲೆಯುಳ್ಳ ಆಸ್ತಿಯನ್ನು ವಶಪಡಿಸಿಕೊಳ್ಳಲಾಗಿದೆ. ಹೀಗೆ ವಶಪಡಿಸಿಕೊಳ್ಳಲಾದ ಆಸ್ತಿಗಳ ಶೇಕಡಾವಾರು ಸಂಖ್ಯೆ ಈ ರೀತಿ ಇದೆ:

1947–48ರಲ್ಲಿ 33% ಮತ್ತು 48–49ರಲ್ಲಿ 34·25%. ಹೀಗೆ............

Sri H. B. GUNDAPPA GOWDA.—There is an increase in theft and such other things.

Sri T. MARIAPPA.—Tere is a slight increase in the number of thefts.

ಶ್ರೀ ಎಲ್. ಸಿದ್ದಪ್ಪನವರು.—12ರಿಂದ 16ಕ್ಕೆ ಏರಿದ್ದರೆ ಅದು ಸ್ವಲ್ಪ ಮಟ್ಟಿಗೆ ಮಾತ್ರ ಹೆಚ್ಚಿದ ಹಾಗೆ ಆಯಿತೆ ?

ಒಬ್ಬ ಮಾನ್ಯ ಸದಸ್ಯರು.—ವರದಿಯಾಗದೆ ಇರುವ ಕೇಸುಗಳ ಸಂಖ್ಯೆ ಎಷ್ಟು ?

ಶ್ರೀ ಟಿ. ಮರಿಯಪ್ಪನವರು.—ನಮ್ಮ ಗಮನಕ್ಕೆ ಅಂಥ ಕೇಸುಗಳು ಬರುವುದಿಲ್ಲ. ಅದಕ್ಕೆ ಬದಲಾಗಿ ಪತ್ತೆಯಾಗದ ಕೇಸುಗಳ ಸಂಖ್ಯೆ ಎಷ್ಟೆಂದು ಕೇಳಬಹುದು.

ಶ್ರೀಮಾನ್ ಎಸ್. ಕರಿಯಪ್ಪನವರು.—ಈ ವಿಚಾರಗಳನ್ನೆಲ್ಲಾ ಬಹಳ ಸ್ವಾರಸ್ಯವಾಗಿ ಹೇಳಿದ್ದಾರೆ. ಕೆಲವು ಸ್ವಾರ್ಥಿಗಳಾಗಿರತಕ್ಕವರು ಸರಿಯಾಗಿ ಕೆಲಸಮಾಡುತ್ತಿಲ್ಲ. ಎಲ್ಲೆಲ್ಲಿ ಆ ರೀತಿ ಕೆಲಸಮಾಡುತ್ತಿದ್ದಾರೋ ಅಲ್ಲೆಲ್ಲಾ ಅಗತ್ಯವಾದ ಉಗ್ರ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ ಏರ್ಪಾಡು ಮಾಡಲಾಗುತ್ತದೆ ಎಂಬ ಭರವಸೆಯನ್ನು ನಾನೀಗ ತಮಗೆಲ್ಲ ಕೊಡುತ್ತೇನೆ. ನಿಜವಾಗಿಯೂ ಸಮಾಜದ ರಕ್ಷಣೆಗಾಗಿಯೇ ಈ ಪೋಲೀಸ್ ಇರತಕ್ಕದ್ದು. ಇವರಲ್ಲಿ ಹೆಚ್ಚಿನ ಅರ್ಹತೆ ಇರಬೇಕೆಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಈ ನ್ಯೂನಾತಿರಿಕ್ತಗಳನ್ನು ಸರಿಪಡಿಸಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತದೆ. ಅಷ್ಟೇ ಅಲ್ಲದೆ ಆಯಾಯ ತಾಲ್ಲೂಕಿನ ಮುಖ್ಯಸ್ಥರ ಸಹಕಾರ ಕೊಡಬೇಕೆಂಬುದಾಗಿ ತಮ್ಮೆಲ್ಲರನ್ನೂ ಕೋರುತ್ತೇನೆ. ಈ ಭರವಸೆಗಳ ಮೇಲೆ ಮಾನ್ಯ ಸದಸ್ಯರು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಅದೇ ರೀತಿಯಲ್ಲಿ ಬಾಕಿ ಮಾನ್ಯ ಸದಸ್ಯರೂ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅವನ್ನೆಲ್ಲಾ ಗುರುತು ಹಾಕಿಕೊಂಡು ನ್ಯಾಯವಾದ ಸಂದರ್ಭಗಳಲ್ಲಿ ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳುತ್ತೇನೆಂದು ನಾನು ಭರವಸೆ ಕೊಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಗ್ರಾಮಾಂತರಗಳಲ್ಲಿ ರೈತರಿಗೆ ನಾನಾ ಬಾಧೆಗಳನ್ನು ಕೊಟ್ಟು ಹಗೇವಿನಲ್ಲಿರುವ ದವಸಗಳನ್ನು ಕಳ್ಳತನದಿಂದ ತೆಗೆದುಕೊಂಡು ಹೋಗುವುದು ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಬಹಳ ಜಾಸ್ತಿಯಾಗಿದೆ. ಅದಕ್ಕೇನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಲ್. ಸಿದ್ದಪ್ಪನವರು.—ಡಿಸ್ಟ್ರಿಕ್ಟ್ ಆಫೀಸರುಗಳು ಇಂಥ ಸಂದರ್ಭಗಳಲ್ಲೆಲ್ಲಾ ನೇರವಾಗಿ, ಯಾವ ರೀತಿಯ ದಯಾದಾಕ್ಷಿಣ್ಯವಿಲ್ಲದೆ ನಿರ್ಭಯವಾಗಿ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದು ತಿಳಿವಳಿಕೆ ಕೊಡಬೇಕು.

ಶ್ರೀ ಟಿ. ಮರಿಯಪ್ಪನವರು.—ಹಾಗೆ ತಿಳಿವಳಿಕೆಗಳನ್ನು ಖಂಡಿತವಾಗಿ ಕೊಟ್ಟಿದ್ದೇನೆ. ಯಾವ ದಯಾದಾಕ್ಷಿಣ್ಯವೂ ಇಲ್ಲದೆ ನಿರ್ಭಯವಾಗಿ ಕಾರ್ಯಕ್ರಮ ಕೈಕೊಳ್ಳಬೇಕೆಂದು ತಿಳಿಸಿದ್ದೇನೆ. ಇಷ್ಟು ಭರವಸೆಯ ಮೇಲೆ ಮಾನ್ಯ ಸದಸ್ಯರು ತಮ್ಮ ಖೋತಾ ಸೂಚನೆಯನ್ನು ವಾಪಸ್ಸು ತಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಎಲ್. ಸಿದ್ದಪ್ಪನವರು.—ಸಚಿವರ ಭರವಸೆ ಮೇಲೆ ಸಭೆಯವರು ಇದನ್ನು ವಾಪಸ್ಸು ತೆಗೆದುಕೊಳ್ಳಲು ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

The cut motion was, by leave of the Assembly, withdrawn.

Steps to protect Harijans from social injustice, ill-treatment etc.

Sri M. MADIAH (Mysore District—Depressed Class).—Sir, I beg to move:

"That the demand under the head '20 Police.—3. Police Force' for Rs. 55,13,100 be reduced by Re. 1 (to urge upon the Government to take immediate steps to protect Harijans from social injustice, ill-treatment and all forms of exploitation in the State in general and in the Districts of Mysore and Mandya in particular)."

ಸ್ವಾಮಿ, ಈ ಖೋತಾ ಸೂಚನೆಯ ಮೇಲೆ ನಾನು ಹೇಳತಕ್ಕ ಪ್ರತಿಯೊಂದು ಮಾತೂ ಮತ್ತು ಅದರಲ್ಲಿ ಅಡಗಿರುವ ಪ್ರತಿಯೊಂದು ವಿಷಯವೂ ಸಹ ಸಮಾಜದ ಭದ್ರತೆಗೆ ಅಂದರೆ ನಮ್ಮ Secular Stateನ ಭದ್ರತೆಗೆ ಸಹಾಯಕವಾಗಿರುವ ರೀತಿಯಲ್ಲಿರಬೇಕೆಂಬ ವಿಷಯವನ್ನು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಸಮಾಜ ಭದ್ರತೆಯ ವಿಚಾರದಲ್ಲಿ ದೇಶದಲ್ಲಿ ಒಂದು ಸೌಹಾರ್ದ ಭಾವನೆಯುಂಟಾಗುವ ವಿಚಾರದಲ್ಲಿ ಸಹಕರಿಸಲು ನಿಮ್ನ ತರಗತಿಯವರು ಅದರಲ್ಲೂ ಹರಿಜನರು ಬಹಳ ಕುತೂಹಲರಾಗಿದ್ದಾರೆಂಬ ವಿಚಾರವನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಹಾಗೆ ವ್ಯಕ್ತಪಡಿಸಿ ಇಂಥಾ ಮಾನ್ಯ ಸಭೆಯಲ್ಲಿ ಇಂಥಾ ಸಮಯದಲ್ಲಿ ಆ ಸಮಾಜ ಭದ್ರತೆಗೇನಾದರೂ ಸಹ ಕುಂದಕ ಬರುವ ರೀತಿಯಲ್ಲಿ ಸಂಭವಿಸುವುದಾಗಿದ್ದರೆ ಅದಕ್ಕೆ ರಚನಾತ್ಮಕವಾದ ಕೆಲವು ಸಲಹೆಗಳನ್ನು ಕೊಟ್ಟು, ಆ ಭದ್ರತೆಗೆ ಭಂಗ ಬಾರದಂತೆ ಮಾಡುವ ಉದ್ದೇಶದಿಂದ ಮಾತ್ರ ನಾನು ಈ ವಿಷಯವನ್ನು ಈ ಸಭೆಯ ಮುಂದೆ ಪ್ರಸ್ತಾಪಿಸಲು ಎದ್ದು ನಿಂತಿದ್ದೇನೆಂದು ಹೇಳುತ್ತೇನೆ. ಸ್ವಾಮಿ, ಇದೇ ರೀತಿ

ನಿಮ್ನ ತರಗತಿಯವರು ಮೈಸೂರು ದೇಶದಲ್ಲಿದ್ದಾರೆಂಬುದಕ್ಕೆ ನಾನು ಒಂದು ನಿದರ್ಶನ ಕೊಟ್ಟರೆ ಸಾಕಾಗಿದೆ. ಮಾನ್ಯ ಮಂತ್ರಿಗಳು ದಯವಿಟ್ಟು ಅದನ್ನು ಗಮನಿಸಬೇಕೆಂದು ಈ ಸಂದರ್ಭದಲ್ಲಿ ಅವರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

ಸಮಾಜದಲ್ಲಿ ಭದ್ರತೆಯುಂಟಾಗುವುದಕ್ಕೆ ನಾವುಗಳೆಲ್ಲರೂ ನಮ್ಮ ಸಹಕಾರ ಮತ್ತು ನೆರವನ್ನು ನೀಡಬೇಕೆಂದಿದ್ದೇವೆ. ಅದಕ್ಕೆ ನಿದರ್ಶನವಾಗಿ ಹೇಳುವುದಾದರೆ ಇದೇ ಕಳೆದ 1950ನೆಯ ಜನವರಿ 4ನೆಯ ತಾರೀಖಿನಲ್ಲಿ ನಮ್ಮ ಮೈಸೂರು ಸಂಸ್ಥಾನಕ್ಕೆ ಇಂಡಿಯಾ ಸರ್ಕಾರದ ಕಾರ್ಮಿಕ ಸಚಿವರಾದ ಜಗಜೀವನರಾಂರವರು ಇಲ್ಲಿಗೆ ಬಂದಿದ್ದಾಗ ಮೈಸೂರು ಸಂಸ್ಥಾನದ ನಿಮ್ನ ತರಗತಿಯವರು ಒಂದು ಮಾನಪತ್ರವನ್ನು ಅವರಿಗೆ ಅರ್ಪಿಸಿದಾಗ, ನಮ್ಮ ಮೈಸೂರು ಮಾದರಿ ದೇಶವು, ಇತರರಿಗೆ ಯಾರಿಗೂ ಕಡಿಮೆಯಿಲ್ಲವೆಂದು ವ್ಯಕ್ತಪಡಿಸುವ ರೀತಿಯಲ್ಲಿ ವರ್ತಿಸಿದ್ದೇವೆ. ನಿಮ್ನ ತರಗತಿಯವರ ಪರವಾಗಿ ಒಂದು ಸ್ವಾಗತ ಸಮಿತಿಯನ್ನು ಏರ್ಪಡಿಸಿ ಆ ಸ್ವಾಗತ ಸಮಿತಿಯನ್ನು ಏರ್ಪಡಿಸಿ ಆ ಸ್ವಾಗತ ಸಮಿತಿಯ ಅಧ್ಯಕ್ಷನಾಗಿ ನಾನು ಹೇಳಿದ ಮಾತುಗಳನ್ನು ತಮಗೆ ಓದಿ ಹೇಳಿದರೆ ನಮ್ಮ ಮನೋಭಿಪ್ರಾಯವೇನಿದೆಯೆಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳುವುದಕ್ಕೆ ಸಹಾಯವಾಗುತ್ತದೆ. ನಮ್ಮ ಮೈಸೂರಿನಲ್ಲಿ ನಮ್ಮ ನಮ್ಮಲ್ಲಿ ಎಷ್ಟು ಸೌಹಾರ್ದ ಭಾವನೆಯಿದೆಯೆಂಬುದನ್ನು ಅವರಿಗೆ ಮನವರಿಕೆ ಮಾಡಿದ್ದೇನೆ. ಅಲ್ಲಿ ನಾನು ಹೇಳಿದ್ದು ಹೀಗಿದೆ:

"We have great pleasure in bringing to your notice the very cordial relations that have always subsisted between different sections of the communities in Mysore. We, on our part, have always realised that we are an integral part of the community and we have always been striving to keep the most friendly relations with brethren realising that our welfare is the welfare of the Nation and the welfare of our brethren is our welfare. We have no doubt that all other sections of the community will also reciprocate our warm feelings and will help us in achieving our common goal of national advancement and that, together, we will be able to bear the great responsibilities which the freedom of India has thrown on our shoulders." ಎಂದು.

ಸ್ವಾಮಿ, ಈ ವಾಕ್ಯಗಳನ್ನು ಅವರಿಗೆ ಹೇಳಿದ್ದೇನೆ. ಇಡೀ ಭಾರತದಲ್ಲಿ ನಮ್ಮ ಮನಸ್ಸಿನಲ್ಲಿ ಯಾವ ರೀತಿಯಿದೆ, ಈ ದೇಶದಲ್ಲಿ ನಮ್ಮ ಸಮಾಜದಲ್ಲಿ ಎಷ್ಟು ಸೌಹಾರ್ದಭಾವನೆ ಇದೆಯೆಂಬ ವಿಚಾರದಲ್ಲಿ ನಾವು ಯಾರಿಗೂ ಹಿಂದೆ ಬಿದ್ದಿಲ್ಲವೆಂದು ಹೇಳಿದ್ದೇನೆ. ಈ ಮಾತುಗಳನ್ನು ಕಳೆದ ಸುಮಾರು ಮೂರು ತಿಂಗಳಲ್ಲಿ ಹೇಳಿ, ಈಗ ಈ ರೀತಿಯಾಗಿ ಹೇಳಬೇಕಾದ ಒಂದು ಪ್ರಮೇಯ ಬಂದಿದೆಯಲ್ಲಾ ಎಂದು ವಿಷಾದಪಡುತ್ತೇನೆ. ಈ ಕಾಲದಲ್ಲಿ ಸಮಾಜದಲ್ಲಿ ಭದ್ರತೆಗೆ ಧಕ್ಕೆ ಬರುವಂಥಾ ಘಟನೆಗಳ ಯಾವ ವಿವರಗಳಿಗೂ ಹೆಚ್ಚಿಗೆ ಹೋಗದೆ ಕೆಲವು ರಚನಾತ್ಮಕ ಸಲಹೆಗಳನ್ನು ಮಾತ್ರ ತಿಳಿಸಲಿಚ್ಛಿಸುತ್ತೇನೆ. ಇದರಿಂದ ಹರಿಜನರಿಗೆ ಉಂಟಾಗಿರತಕ್ಕ ಕೆಲವು ತೊಂದರೆಗಳನ್ನು ತಮ್ಮಗಳ ಗಮನಕ್ಕೆ ತರಲಿಚ್ಛಿಸುತ್ತೇನೆ.

ಒಬ್ಬ ಸದಸ್ಯರು.—ಪೋಲೀಸಿನವರ ದಕ್ಷತೆಗೂ ಇದಕ್ಕೂ ಏನು ಸಂಬಂಧ?

ಶ್ರೀ ಎಂ. ಮಾದಯ್ಯನವರು.—ನಮಗುಂಟಾಗಿರುವ ತೊಂದರೆಗಳೇನು ಎಂಬುದನ್ನೂ ಮತ್ತು ಸಮಾನಾವಕಾಶ ಕೊಡಬೇಕೆಂದು ಸರ್ಕಾರದವರು ಈಗ ಯಾವ ಒಂದು ಹಕ್ಕನ್ನು ಉಂಟುಮಾಡಿದ್ದಾರೋ ಅದನ್ನು ಅನುಭವಿಸುವುದಕ್ಕೆ ಕೂಡ ಅವಕಾಶ ಕೊಡದಿರುವುದನ್ನು ನಾನು ಹೇಳುವುದಕ್ಕೂ ಮತ್ತು ಈ ವಿಚಾರದಲ್ಲಿ ಪೋಲೀಸ್ ಇಲಾಖೆಯವರು ಸಾಕಷ್ಟು ರಕ್ಷಣೆ ಕೊಡಬೇಕಾಗಿರುವುದನ್ನೂ ಪ್ರಸ್ತಾಪಿಸುತ್ತೇನೆ. ಕೆಲವು ಅನರ್ಹತೆಗಳೇನೋ ಹೋಗಿವೆ. ಶಾಸನಗಳನ್ನೂ ಮಾಡಿದ್ದಾರೆ. ಆದರೆ ಕೊಟ್ಟಿರುವ ಸೌಕರ್ಯಗಳನ್ನು ಅನುಭವಿಸುವುದಕ್ಕೆ ಕೆಲವು ತೊಡಕುಗಳು, ಆತಂಕಗಳು ಇವೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಪೋಲೀಸಿನವರಿಂದಲೇ?

ಶ್ರೀ ಎಂ. ಮಾದಯ್ಯನವರು.—ಕೆಲವು ಸಾರ್ವಜನಿಕರಿಂದ. ಒಂದು ವೇಳೆ ಕಾನೂನು ಬಲದಿಂದ ಮತ್ತು ತಮ್ಮಂಥ ಕೆಲವು ಮುಖಂಡರ ಸಹಕಾರದಿಂದ ಕೆಲವು ಕಡೆ ಅವನ್ನು ಅನುಭವಿಸಿದರೂ ಕೆಲವರು ಸ್ವಾರ್ಥಸಾಧಕರ ದೆಸೆಯಿಂದ ಇಂಥಾ ಕಷ್ಟಗಳುಂಟಾಗುತ್ತವೆ. ಈಗ ಸರಿಯಾದ ನಡೆವಳಿಕೆ ಇಲ್ಲ. ಸುಲಿಗೆ ಆಗುತ್ತಿದೆ. ಒಂದು ವಿಧವಾದ ಅಶಾಂತಿ ಮತ್ತು ನೋವು ಉಂಟಾಗಿದೆ. ಈ ವಿಚಾರದಲ್ಲಿ ಕೆಲವು ರಚನಾತ್ಮಕ ಸಲಹೆ ಮಾಡುವುದಾದರೆ ಜಿಲ್ಲಾಧಿಕಾರಿಗಳಿಗೆ ಮತ್ತು ಡಿಸ್ಟ್ರಿಕ್ಟು ಪೋಲೀಸು ಸೂಪರಿಂಟೆಂಡೆಂಟರಿಗೆ ಸರಿಯಾದ ತಿಳಿವಳಿಕೆಯನ್ನು ಕೊಡಬೇಕು. ಅಗತ್ಯಬಿದ್ದರೆ ಸಣ್ಣ ಟ್ರಿಬ್ಯೂನಲ್ ತರಹ ವಿಚಾರಣಾ ಸಮಿತಿಯೊಂದನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಏರ್ಪಾಡುಮಾಡಿ ಎಲ್ಲಿ ತೊಂದರೆಗಳಿವೆಯೋ, ಎಲ್ಲಿ ಕಿರುಕುಳ ಮತ್ತು ಸುಲಿಗೆ ಆಗುತ್ತದೆಯೋ ಅದನ್ನು ವಿಚಾರ ಮಾಡಿ ಕೂಡಲೇ ಹೋಗಿ ಆಯಾ ತಾಲ್ಲೂಕು ಸಮಿತಿ ಮತ್ತು ಜಿಲ್ಲಾ ಸಮಿತಿಗಳ ಮಾನ್ಯ ಸದಸ್ಯರ ಸಹಾಯ ಪಡೆದು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಪೋಲೀಸಿನವರು ಏನು ಮಾಡಬೇಕೆಂಬುದನ್ನು ಹೇಳಿ.

ಶ್ರೀ ಎಂ. ಮಾದಯ್ಯನವರು.—ಪೋಲೀಸು ಸೂಪರಿಂಟೆಂಡೆಂಟರು ಸ್ಥಳೀಯ ಪ್ರಜಾಮುಖಂಡರ ಸಹಕಾರದಿಂದ ಸ್ಥಳಕ್ಕೆ ಹೋಗಿ ಇರುವ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಲು ಸರ್ವಪ್ರಯತ್ನವನ್ನೂ ಮಾಡಬೇಕು. ಹಾಗೆ ಮಾಡಿದರೆ ಆಗುತ್ತಿರುವ ದಾಂಧಲೆ, ಅನ್ಯಾಯ, ಕಿರುಕುಳ ಮತ್ತು ಸುಲಿಗೆ ಹೋಗುತ್ತದೆ ಎಂದು ಅಭಿಪ್ರಾಯ ಪಡುತ್ತೇನೆ.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—On a point of information, Sir. ಈಗ ಇದಕ್ಕೆ ಸಂಬಂಧಪಟ್ಟ ಕಾನೂನನ್ನು ಮಾಡಿದ್ದಾರೆ. ಈ ಕಾನೂನು ಪ್ರಕಾರ ನಡೆಯದೇ ಇದ್ದರೆ, ಇದಕ್ಕೇನಾದರೂ ಲೋಪವಾದರೆ, ಆಗ ಪೋಲೀಸಿನವರ ಗಮನಕ್ಕೆ ತಂದರೆ ಅವರು ಸಹಕರಿಸಬೇಕೆಂದು ಇದ್ದೇ ಇದೆ.

ಶ್ರೀ ಎಂ. ಮಾದಯ್ಯನವರು.—ನಾನು ಯಾರಾದರೂ ಒಬ್ಬ ವ್ಯಕ್ತಿಯನ್ನು ಉದ್ದೇಶಿಸಿ ಹೇಳುತ್ತಿಲ್ಲ. ಸಮಾಜದಲ್ಲಿ ಹರಿಜನರಿಗಿರುವ ತೊಂದರೆಗಳನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಅಂಥ ತೊಂದರೆ ಬಂದಾಗ ಪೋಲೀಸಿನವರು ಸಹಾಯ ಮಾಡಬೇಕೆಂದು ಬೇಕಾದರೆ ಕೇಳಿ.

ಶ್ರೀ ಎಂ. ಮಾದಯ್ಯನವರು.—ಅಂಥ ಸಂದರ್ಭಗಳಲ್ಲೆಲ್ಲಾ ಅಂದರೆ ಈಗ ತೊಂದರೆ ಇರುವ ಕಡೆ ಪೋಲೀಸಿನವರಿಗೆ ಎಷ್ಟೋ ಅರ್ಜಿ ಹಾಕಿದ್ದಾರೆ. ಆದರೆ ಏಕೆ ಅವರು ಸಕಾಲದಲ್ಲಿ ಕ್ರಮ ತೆಗೆದುಕೊಂಡಿಲ್ಲವೆಂಬುದನ್ನು ಹೇಳು

ತ್ತಿದ್ವೆ. ಏನಾದರೂ ತೊಂದರೆಯಾಗುವಂತೆ ಇದ್ದರೆ ವಾತಾವರಣ ನೋಡಿ ಹಾಗೆ ಆಗದಂತೆ ಏಕೆ ಕಾರ್ಯಕ್ರಮ ಕೈಗೊಳ್ಳಬಾರದು ? ಹಾಗೆ ಮಾಡುವುದಾದರೆ ಎಷ್ಟೋ ಅನರ್ಥ ತಪ್ಪುತ್ತದೆ. ಈ ರೀತಿ ಆಗುತ್ತಿರುವುದನ್ನು ನೋಡಿದರೆ ಪೋಲೀಸಿನವರು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಹೇಳಬೇಕಾಗುತ್ತದೆ. ಆದ್ದರಿಂದ ಪೋಲೀಸು ಇಲಾಖೆಯವರು ಸಾರ್ವಜನಿಕರ ಸಹಾಯ ಪಡೆದು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದರೆ ಅನರ್ಥಗಳೂ ತಪ್ಪುತ್ತವೆ; ಜನರಲ್ಲಿ ನಂಬಿಕೆ, ವಿಶ್ವಾಸಗಳೂ ಇರುತ್ತವೆ. ಈ ವಿಚಾರದಲ್ಲಿ ಯಾವ ವಿಧವಾದ ಭಿನ್ನಭಾವನೆಯನ್ನೂ ಇಟ್ಟುಕೊಳ್ಳದೆ ಎಲ್ಲಿ ಅಕೃತ್ಯ ನಡೆದಿದೆಯೆಂದು ಸಮಾಚಾರ ಬರುತ್ತದೆಯೋ ಅಲ್ಲಿಗೆ ಕೂಡಲೇ ಸ್ಥಳೀಯ ಪೋಲೀಸು ಅಧಿಕಾರಿಗಳು ಹೋಗಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವಂತೆ ಸರ್ಕಾರದವರು ಸರಿಯಾದ ತಿಳಿವಳಿಕೆ ಕೊಡಬೇಕು. ಹಾಗೆ ಮಾಡುವುದರಿಂದ ಇನ್ನು ಮೇಲೆ ಇಂಥ ಅನರ್ಥಗಳುಂಟಾಗುವುದೂ ತಪ್ಪುತ್ತದೆ; ಸಮಾಜಕ್ಕೂ ಕ್ಷೇಮ. ಆದ್ದರಿಂದ ಆ ರೀತಿ ಏರ್ಪಡಿಸಿ ನಮ್ಮ ಸೆಕ್ಯೂಲರ್ ಸ್ಟೇಟ್ ಆದ ಭಾರತವು ಭದ್ರವಾದ ತಳಹದಿಯ ಮೇಲೆ ನಿಲ್ಲುವಂತೆ ವ್ಯವಸ್ಥೆ ಮಾಡಬೇಕು.

Mr. SPEAKER.—Cut motion moved:

"That the demand under the head '20. Police 3. Police Force for Rs. 55,13,100 be reduced by Re. 1."

ಶ್ರೀ ಗೋವಿಂದದಾಸ್‌ರವರು (ಹಾಸನ ಜಿಲ್ಲೆ—ನಿಮ್ನ ಪಂಗಡ).—ಬಹಳ ದಿವಸದ ಹಿಂದೆ 'To serve Harijans is to serve the nation' ಎಂಬ ತತ್ವವನ್ನು ತಿಳಿದಿದ್ದವರು ಬಹು ಕಡಿಮೆ ಇದ್ದರು. ಈಗ ಅವರ ಸಂಖ್ಯೆ ಬರಬರುತ್ತ ಹೆಚ್ಚುತ್ತಿದೆ. ಆದ್ದರಿಂದ ಹರಿಜನರ ಕಷ್ಟ ಸ್ವಲ್ಪ ಕಡಿಮೆಯಾಗುತ್ತಿದೆ. ಆಮೇಲೆ ಕಾಲಕ್ರಮಕ್ಕನುಗುಣವಾಗಿ ಬುದ್ಧಿಯೂ ಬದಲಾವಣೆಯಾಗುತ್ತದೆಂದು ಮಹಾತ್ಮ ಗಾಂಧಿಯವರು ಒಂದು ಸಂದರ್ಭದಲ್ಲಿ ಹೇಳಿದ್ದರು. ಹಾಗೆ ಕಾಲಕ್ಕನುಗುಣವಾಗಿ ಹಿಂದೂ ಸಮಾಜದವರು ತಮ್ಮ ಮನೋಭಾವನೆಯನ್ನು ಬದಲಾಯಿಸುತ್ತಿದ್ದಾರೆ. ಅದರಲ್ಲೂ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಬಂದಿತೆಂದು ಹರಿಜನರಾದ ನಾವೆಲ್ಲರೂ ಬಹಳ ಸಂತೋಷಪಟ್ಟೆವು. ಆದರೆ ಹರಿಜನರಿಗೆ ಪೂರ್ತಿಯಾಗಿ ಸ್ವಾತಂತ್ರ್ಯ ಬರಲಿಲ್ಲವೆಂದು ವಿಷಾದ ಪಡಬೇಕಾಗಿದೆ.

ಅಧ್ಯಕ್ಷರು.—ಆದರೆ ಪೋಲೀಸು ಇಲಾಖೆಗೆ ಇದರ ಸಂಬಂಧವೇನು ?

ಶ್ರೀ ಗೋವಿಂದದಾಸ್‌ರವರು.—ಅನೇಕ ಹಳ್ಳಿಗಳಲ್ಲಿ ಸಾಧಾರಣವಾಗಿ ಕಿರುಕುಳ ಹೆಚ್ಚಾಗಿದೆ. ಉದಾಹರಣೆಗೆ ಹಾಸನ ಜಿಲ್ಲೆ ಹಿರಳ್ಳಿ ಗ್ರಾಮದ ಬಳಿ ದೊಡ್ಡ ಊರನ್ನು ಕಟ್ಟಬೇಕೆಂದು ಏರ್ಪಾಡು ಮಾಡಿ ಸರ್ಕಾರ ಮತ್ತು ಸಾರ್ವಜನಿಕರ ಸಹಾಯ ದೊರೆತಾಗ ಆ ಗುಡಿಸಲುಗಳಿಗೆ ಬೆಂಕಿ ಹಚ್ಚಿ ಎರಡು ಸಾವಿರ ರೂಪಾಯಿಗಳ ನಷ್ಟವಾಯಿತು. ಪೋಲೀಸಿನವರ ನಿಗಾ ಬೀಳದೇ ಹೋದುದರಿಂದ ಹೀಗೆ ಬಹಳ ತೊಂದರೆಯಾಯಿತು ಎಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಹಾಸನ ಜಿಲ್ಲೆ ದುದ್ದದ ಹತ್ತಿರ ಕೋಡಿಹಳ್ಳಿಯಲ್ಲಿ ಸರ್ಕಾರದವರು ಕೊಟ್ಟಿರುವ ಜಮೀನನ್ನು ಉಳುವಾಗ ನಿಮ್ನ ವರ್ಗದವರನ್ನು ಹೊಡೆದು ಅನಾನುಕೂಲ ಮಾಡಿದರು. ಅದನ್ನು ಸರ್ಕಾರಕ್ಕೆ ತಿಳಿಸಿದರೂ ಪೋಲೀಸಿನವರು ಅಷ್ಟು ನಿಗಾ ತೆಗೆದುಕೊಂಡಿಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಸಾರ್ವಜನಿಕರ ಸೇವೆಗಿಂತ ಹೆಚ್ಚಾದುದು ಯಾವುದೂ ಇಲ್ಲ, ಕಷ್ಟ ನಷ್ಟಗಳನ್ನು ಪರಿಹಾರ ಮಾಡುವುದರಲ್ಲಿ ಪೋಲೀಸಿನವರ ಜವಾಬ್ದಾರಿ ಬಹಳವಾಗಿದೆ ಎಂದು ಹೇಳುತ್ತೇನೆ. ಹೆಚ್ಚು ಅನುಕೂಲವಾಡುವ ಬಹುಭಾಗ ಮಾನ್ಯ ಸದಸ್ಯರ ಮೇಲೆ ಬಿದ್ದಿದೆ. ಆದ್ದರಿಂದ ಈ ವಿಚಾರದಲ್ಲಿ ನನಗಿಂತಲೂ ಹೆಚ್ಚಾಗಿ ಮಾನ್ಯ ಸದಸ್ಯರು ನಮ್ಮ ಪರವಾಗಿ ಭಾಷಣ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

***Sri T. MARIAPPA**—Sir, it is more a social question than one coming in a cut motion under '20. Police'. Nevertheless, I would like to assure Hon'ble Members, the two previous speakers, that the Police would do their best in giving protection wherever protection is needed. To cite a few instances: during 1948, in two villages of Hassan District, complaints of ill-treatment to Harijans were received. In the case of complaint received from Muddahosahalli, a case has been filed and the same is pending. In the case of complaint received from Kattegere, the parties have compromised at the instance of the Police and with the help of the local leaders. During 1949-50 complaints of ill-treatment were made by some members of the Harijan community in certain villages of Mandya and Mysore Districts. At Kurubarasettihalli, Mandya District, acute differences arose between two parties and luckily the parties compromised at the instance of the Police. At Yedaganahalli in the same district, both parties were properly advised by the Police with the help of the local leaders and the differences were made up. In the Mysore District complaints of ill-treatment wese made in the villages of Thaloor, Dhura, Thandre and Kuppe. In Bokkahalli of Nanjangud Taluk and Haralahalli of T.-Narsipur Taluk and Kuppe of Krishnarajanagar Taluk, the Police repaired to the spot immediately and took action to protect the Harijans. As regards Bokkahalli particularly there is a case pending before the court and I do not want to deal with it. In Haralahalli, when the Harijans were obstructed from taking water from a Government tank, suitable action was taken and the Police afforded all protection. Therefore, from all these, it can be seen that wherever necessary, where specific cases were brought to the notice of the

Police, they have taken action, But in all these cases, I request the Hon'ble Member to appeal to the social conscience of the people. Given the goodwill, these mutual differences will straighten out themselves ere long and we hope that the equality that has been enjoined on the public by the Constitution will be enjoyed by the people.

Sri M. MADIAH.—On the satisfactory reply by the Home Minister, I beg to withdraw the cut motion.

The cut motion was, by leave of the Assembly, withdrawn.

Mr. SPEAKER.—The question is:

"That a sum not exceeding Rs. 80,50,000 be granted to the Government to defray the charges which will come in course of 'payment during the year ending 31st day of March 1951, in respect of 'Police'."

The motion was adopted.

Demand No. 15—21. Medical.

Sri T. SIDDALINGIAH (Minister for Education and Public Health).—Sir, on the recommendation of His Highness the Maharaja, I beg to move:

"That a sum not exceeding Rs. 72,89,000 be granted to defray the charges which will come in course of payment during the year ending 31st day of March 1951, in respect of 'Medical'."

Mr. SPEAKER.—Motion moved:

"That a sum not exceeding Rs. 72 89,000 be granted to defray the charges which will come in course of payment during the year ending 31st day of March 1951, in respect of 'Medical'."

Encouragement to Ayurvedic and Unani Systems of Medicine.

Janab SYED ABDUR RAHMAN (Chikmagalur *cum* Shimoga—Muslim). —Sir, I beg to move:

"That the demand under the head '21. Medical, 6. Department of Indian Medicine' for Rs. 2,27,600 be reduced by Rs. 100 (to urge upon the Government to encourage Ayurvedic and Unani Medical Systems)."

(Mr. Deputy Speaker Sri L. H. Thimma Boyi occupied the Chair at this stage.)

Sir, the only object of tabling this cut motion is to bring quicker relief and medical aid to the suffering humanity which consists mostly of villagers who have no access to the allopathic system of medicine. The provision that has been made with regard to allopathic system of medicine is about Rs. 72,89,000, whereas the provision in respect of ayurvedic and unani systems of medicine is only about 2,27,000. Sir, you are aware that the vast masses of the people still believe in the unani and ayurvedic systems of medicine and in India and specially in Mysore, we have still people who have got faith and belief in these systems of medicine. I have got nothing to say against the allopathic system. That is an advanced science and people may have belief in that system also. Very recently the Government of India had constituted a committee known as the Chopra Committee which went about in the country to collect facts and after collecting all the facts they have submitted their recommendations to the Government of India. One of the recommendations of the Committee was that there must be a synthesis between the unani and ayurvedic systems and the allopathic system. Some such device has got to be found to satisfy the needs of the people, because in the allopathic system of medicine, it is not possible to give effective and urgent medical aid to the people particularly those residing in villages. Sir, in this connection I may be allowed to mention that the present Public Health Minister is one who has got a sympathetic and soft corner for this particular system of medicine. Very recently he has been pleased to inaugurate Unani Conference that was presided over by one of the Professors of the Hyderabad Unani College. This Conference has fostered brotherhood between the two native systems and all the resolutions passed by the Conference have been placed in the hands of the Public Health Minister and I hope they will receive his sympathetic consideration. In the speech which he delivered he created a high impression that great encouragement would be given to the

ayurvedic pandits and hakims who have been doing a lot to the suffering humanity, by allotting more funds for the improvement of this system of medicine. I do not want to take the time of the House, but I must say that these pandits and hakims have been rendering very good service in the villages where the service of allopathic doctors cannot be had. I only request the Government to devote more attention to the spread of this indigenous system of medicine and thereby help the rural population to get sufficient medical aid in times of distress. With these few remarks I move the cut motion.

Mr. DEPUTY SPEAKER.—Cut motion moved :

"That the demand under the head '21. Medical, 6. Department of Indian Medicine' for Rs. 2,27,600 be reduced by Rs. 100."

ರಾಜಮಂತ್ರ ಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಈ ಖೋತಾ ಸೂಚನೆಯ ಮೇಲೆ ಮಾತನಾಡುವಾಗ ಕೆಲವು ವಿಚಾರಗಳನ್ನು ಹೇಳಬೇಕೆಂಬ ಆಸೆಯಿದೆ. ಆಯುರ್ವೇದ ಮತ್ತು ಯುನಾನಿ ಪದ್ಧತಿ ನಮಗೆ ಪೂರ್ವದಿಂದಲೂ ಬಂದಿರುವುದು ಪಿತರಾರ್ಜಿತವೆಂದೂ ಹೇಳಬಹುದು. ಈಗ ಪರಿಸ್ಥಿತಿ ಏನಾಗಿದೆಯೆಂದರೆ, ಮಧ್ಯೆ ಯಾರೋ ಸೇರಿಕೊಂಡು ಈ ಆಸ್ತಿಗೆ ಮೋಸ ಮಾಡುವ ಹಾಗಾಗಿದೆ. ನೂರೈವತ್ತು ವರ್ಷಗಳಿಂದೀಚೆಗೆ ಅಲೋಪತಿಕ್ ಪದ್ಧತಿ ನಮ್ಮ ದೇಶಕ್ಕೆ ಬಂದದ್ದು. ಇದನ್ನು ಕಳಪೆ ಎಂದೇನೂ ನಾನು ಹೇಳುವುದಿಲ್ಲ. ಇದನ್ನೂ ಉಪಯೋಗಿಸೋಣ. ಆದರೆ ಆಯುರ್ವೇದ ಮತ್ತು ಯುನಾನಿ ನಮಗೆ ಪೂರ್ವದಿಂದ ಬಂದದ್ದು. ಇದರಲ್ಲಿ ಏನೇನು ಗುಣಾವಗುಣಗಳಿವೆಯೆಂಬುದನ್ನು ಕಂಡು ಹಿಡಿದು ಉಪಯೋಗಿಸಿಕೊಂಡು ಇದಕ್ಕೆ ಪ್ರಗತಿದಾಯಕವಾದ ಸಹಾಯವನ್ನು ಕೊಡಬಹುದು. ಒಟ್ಟಿನಲ್ಲಿ ನಮ್ಮ ಬಡದೇಶಕ್ಕೆ ಅಲೋಪತಿಯಿಂದ ಹೆಚ್ಚಿನ ಪ್ರಯೋಜನವಾಗುತ್ತದೆಂದು ನಾವು ನಂಬುವ ಹಾಗಿಲ್ಲ. ಒಂದು ವೇಳೆ ಅಲೋಪತಿ ಮೂಲಕ ಸಹಾಯ ಮಾಡಬೇಕಾದರೆ ಎಷ್ಟು ವರ್ಷ ಕಾಲವಾಗುತ್ತದೋ ಗೊತ್ತಿಲ್ಲ. ಏಕೆಂದರೆ ಇಂಡಿಯಾ ಸರ್ಕಾರದವರು ಜನಾರೋಗ್ಯದ ವಿಚಾರದಲ್ಲಿ ಒಂದು ಸಮಿತಿಯನ್ನು ನೇಮಕಮಾಡಿ ವರದಿಯನ್ನೊಪ್ಪಿಸಬೇಕೆಂದು ಸೂಚಿಸಿದರು, ಅವರ ವರದಿಯನ್ನು ನೋಡಿದರೆ, ಮೈಸೂರು ದೇಶದಲ್ಲಿ ಎಲ್ಲರಿಗೂ ವೈದ್ಯ ಸಹಾಯ ಸರಿಯಾಗಿ ದೊರೆಯಬೇಕಾದರೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಬೇಕಾಗುತ್ತದೆಂದು ತೋರುತ್ತಿದೆ. ಸ್ವಾಮಿ, ಈ ವಿಚಾರವನ್ನು ನಮ್ಮ ಅನುಭವದಿಂದ ಯೋಚನೆ ಮಾಡಬೇಕು. ಹಿಂದಿನ ಕಾಲದಲ್ಲಿ ಸಣ್ಣ ಸಣ್ಣ ಗಿಡ ಮೂಲಿಕೆಗಳಿಂದ ಎಂತೆಂಥ ಖಾಯಿಲೆಗಳೋ ಗುಣವಾಗಿವೆ. ಸಾಮಾನ್ಯ ಜನರು ಮಿತಿಮೀರಿದ ಖಾಯಿಲೆಗಳಿಗೆ ನಿರ್ವಾಹವಿಲ್ಲದೆ ಆಸ್ಪತ್ರೆಗಳಿಗೆ ಹೋಗುತ್ತಾರೆಯೇ ವಿನಾ ಸಾಮಾನ್ಯ ರೋಗಗಳನ್ನು ತಾವೇ ಗಿಡಮೂಲಿಕೆಗಳಿಂದಾದ ಸಣ್ಣ ಸಣ್ಣ ಔಷಧಗಳಿಂದ ಗುಣಪಡಿಸಿಕೊಳ್ಳುತ್ತಾರೆ.

ಒಂದು ಸಂದರ್ಭದಲ್ಲಿ ಬೇರೆ ಬೇರೆ ಪದ್ಧತಿಯ ಔಷಧಗಳಿಗೆ ತಗಲುವ ಖರ್ಚನ್ನು ಲೆಕ್ಕ ಹಾಕಬೇಕಾಗಿ ಬಂತು. ಅದರಲ್ಲಿ ವ್ಯಕ್ತಪಟ್ಟ ಪ್ರಕಾರ ಆಯುರ್ವೇದದ ಆಸ್ಪತ್ರೆಯಲ್ಲಿ ಒಬ್ಬ ರೋಗಿಯ ಔಷಧಕ್ಕೆ ನಾಲ್ಕು ಕಾಸು ಬಿದ್ದರೆ ಅಲೋಪತಿ ಔಷಧಕ್ಕೆ ಹನ್ನೆರಡಾಣೆ ಬೀಳುತ್ತದೆ. ನಾನು ಆಗಿನ ಕಾಲದಲ್ಲಿ ಹಾಕಿದ ಲೆಕ್ಕ ಇದು.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಒಂದು ದಿವಸದ ಔಷಧಕ್ಕೋ ಅಥವಾ ಒಂದು ಹೊತ್ತಿನ ಔಷಧಕ್ಕೋ ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅದೇನೋ ಇರಬಹುದು, ಒಬ್ಬ ರೋಗಿಗೆ ಎಂದು ಕಾಣುತ್ತೆ, ಸರಿಯಾಗಿ ಜ್ಞಾಪಕವಿಲ್ಲ. ಆಗ ಎಲ್ಲವನ್ನೂ ಲೆಕ್ಕ ಹಾಕಿದ್ದೆವು.

ನಾಲ್ಕು ಕಾಸಲ್ಲ, ಒಂದಾಣೆಯೆಂದೇ ಇಟ್ಟುಕೊಳ್ಳೋಣ, ಆದರೆ ಇಂಗ್ಲೀಷ್ ಔಷಧಕ್ಕೆ ಹನ್ನೆರಡಾಣೆ ಎಂದರೆ ಎಷ್ಟು ಹೆಚ್ಚಾಯಿತು ! ಪೂರ್ವಿಕರು ನಮಗೆ ಇಟ್ಟಿದ್ದುದನ್ನು ನಾವು ಬಿಟ್ಟುಬಿಡಬಾರದು. ಈಗಿನ ಕಾಲದಲ್ಲಿ ರೋಗಿಗಳೇ ಆಸ್ಪತ್ರೆಗೆ ಹೋಗಿ ಸ್ವಾಮಿ ನನಗೆ ಇಂಜಕ್ಷನ್ ಕೊಡಿ ಎಂದು ಕೇಳುತ್ತಾರೆ. ಕೆಲವರು ಡಾಕ್ಟರುಗಳು, ಅತಿ ಬುದ್ಧಿವಂತರಾಗಿರುವವರು water injection or milk injection ಕೊಟ್ಟು ಕಳುಹಿಸುತ್ತಾರೆ. ನಾನು ಔಷಧಗಳು ಅಪ್ರಯೋಜಕವೆಂದು ಹೇಳುತ್ತಿಲ್ಲ, ಕೆಲವು ಜನ ಮಾಡುತ್ತಿರುವುದನ್ನು ಹೇಳಿದೆ. ಈಗ ನಮಗೆ ಸ್ವರಾಜ್ಯ ಬಂದಿದೆ. ನಮ್ಮಲ್ಲಿ ಏನೇನು ಗುಣಗಳಿರಬೇಕು ಎಂಬುದನ್ನೆಲ್ಲಾ ಯೋಚನೆ ಮಾಡುವ ಕಾಲ ಬಂದಿದೆ. ನಮ್ಮ ದೇಶೀಯ ಪದ್ಧತಿ ಯಾವುದು, ನಮ್ಮ ಪೂರ್ವಾಚಾರ ಏನಿದೆ ಎಂಬುದನ್ನೆಲ್ಲಾ ಯೋಚಿಸಿ, ಇದಕ್ಕನುಸಾರವಾಗಿ ಕೆಲಸ ಮಾಡದೇ ಹೋದರೆ ಸರಿಯಾಗುತ್ತದೆಯೇ ಎಂಬುದನ್ನು ನೋಡಬೇಕು. ಪರದೇಶದ್ದನ್ನು ತಂದು graft ಮಾಡಿದರೆ ಸರಿಯಾಗುತ್ತದೆಯೇ ಎಂಬುದನ್ನು ಯೋಚಿಸಬೇಕು. ಹಿಂದೆ ಹೊರಗಿನಿಂದ ತಂದು ಸೇಬುಗಳನ್ನು ಬೆಳೆಯುತ್ತಿದ್ದರು. ಈಗ ಕಡಿಮೆಯಾಗಿದೆ. ಹಾಗೆ ಹೊರದೇಶದಿಂದ ಬಂದದ್ದು ಹೆಚ್ಚು ದಿನ ಇರುವುದಿಲ್ಲವೆಂದು ನಾನು ಹೇಳುವುದು.

ನಮ್ಮ ದೇಶದಲ್ಲಿ ನಮಗೆ ಬೇಕಾದ್ದನ್ನು ನಾವು ಮಾಡಿಕೊಳ್ಳಬೇಕೇ ಹೊರತು ಆಸ್ಟ್ರೇಲಿಯಾದಲ್ಲಿ, ಅಮೇರಿಕಾದಲ್ಲಿ ಆಗುತ್ತದೆ ಎಂದರೆ ಇಲ್ಲಿ ಆಗುವುದಿಲ್ಲ. ನಮ್ಮ ವಾಯುಗುಣಕ್ಕೆ ಯಾವ ರೀತಿ ಆಹಾರ ಸರಿಹೋಗುತ್ತದೆಯೋ ಅದನ್ನು ನೋಡಿಕೊಂಡು ನಮ್ಮ ಹಿಂದಿನ ಕಾಲದವರು ಆಹಾರದಲ್ಲೇ ಹೆಚ್ಚು ಕಡಿಮೆಯಾಗದಂತೆ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುತ್ತಿದ್ದರು. ನಮ್ಮ ದೇಶದವರಿಗೆ ಅಲೋಪತಿಕ್ ಔಷಧಿಗಳನ್ನು ಹೆಚ್ಚಾಗಿ ಉಪಯೋಗಿಸಲು ಸಾಧ್ಯವಿಲ್ಲ. ನಮ್ಮ ಯೋಗ್ಯತೆ ಮೀರಿ ಹಣ ಖರ್ಚು ಮಾಡುವುದಕ್ಕೆ ಶಕ್ತಿ ಸಾಲದು. ಆದ್ದರಿಂದ ನಮ್ಮ ಡಾಕ್ಟರುಗಳಿಗೆ ಆಯುರ್ವೇದ ಔಷಧಿಗಳ ವಿಷಯದಲ್ಲಿ ಉತ್ತಮವಾದ ಶಿಕ್ಷಣ ಕೊಡಿ. ಈಗ ಆಯುರ್ವೇದ ಕಾಲೇಜು ಇದೆ. ಅದನ್ನು ವಿದ್ಯಾನಿಲಯಕ್ಕೆ ಸೇರಿಸಿಕೊಂಡು ಒಂದು ಮಾನ್ಯತೆ ಕೊಟ್ಟು, ಅದು ಯಾವ ವಿಧದಲ್ಲೂ ಕೀಳು ಮಟ್ಟದ್ದಲ್ಲ ಎಂಬ ಭಾವನೆಯನ್ನುಂಟುಮಾಡಿ ಡಾಕ್ಟರುಗಳನ್ನು ತಯಾರು ಮಾಡಿದರೆ, ಎಷ್ಟು ಅನುಕೂಲವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ನಾವು ಆಯುರ್ವೇದ ಮತ್ತು ಯುನಾನಿಯ ವಿಷಯದಲ್ಲಿ ತೀವ್ರ ಕಾರ್ಯಕ್ರಮವನ್ನು ತೆಗೆದುಕೊಂಡಾಗ ಅದು ನಾಲ್ಕಾರು ವರ್ಷಗಳಲ್ಲೇ ಫಲದಾಯಕವಾಗುತ್ತದೆ. ನಾವೇ ಎಲ್ಲಾ ಔಷಧಿಗಳನ್ನು ತಯಾರುಮಾಡಬಹುದು.

ಅಷ್ಟೇ ಅಲ್ಲದೆ ಹೊರಗಿನಿಂದಲೂ ಸಹ ದುಡ್ಡು ಸಂಪಾದಿಸಬಹುದೆಂದು ತಿಳಿದುಕೊಂಡಿದ್ದೇವು. ಕೊಚ್ಚಿನ್‌ನಲ್ಲಿ ಆ ರೀತಿ ಮಾಡುತ್ತಾ ಇದ್ದಾರೆ. ಲಕ್ಷಾಂತರ ರೂಪಾಯಿ ಸಂಪಾದಿಸುತ್ತಾ ಇದ್ದಾರೆ. ನಮ್ಮ ದೇಶದಲ್ಲೂ ಕೂಡ ಅನೇಕ ಸೌಲಭ್ಯಗಳಿವೆ. ಅನೇಕರಿಗೆ ಗೊತ್ತಿರಬಹುದು, ಬಾಬಾಬುಡನ್ ಗಿರಿಯಲ್ಲಿ ಸಿಕ್ಕತಕ್ಕ ಕೆಲವು ಗಿಡ, ಮೂಲಿಕೆಗಳನ್ನು ತೆಗೆದುಕೊಂಡು ಬಂದು ಹಿಮಾಲಯದ್ದು ಎಂದು ಹೇಳಿ ಔಷಧಿ ಮಾಡಿ ಕಳುಹಿಸುತ್ತಾ ಇದ್ದಾರೆ. ಅದನ್ನು ನಾನು ಚಿಕ್ಕಮಗಳೂರಿಗೆ ಹೋಗಿದ್ದಾಗ ವಿಚಾರಿಸಿದೆ. ನಂದಿ ಬೆಟ್ಟ, ಬಾಬಾ ಬುಡನ್ ಗಿರಿ ಈ ಪ್ರದೇಶಗಳಲ್ಲಿ ನಮ್ಮ ಔಷಧಿಗೆ ಬೇಕಾದಷ್ಟು ಗಿಡಮೂಲಿಕೆಗಳು ಸಿಕ್ಕುತ್ತವೆ. ನಮ್ಮ ಪೂರ್ವಿಕರು ಯಾವ ರೀತಿ ಅವುಗಳಿಂದ ಔಷಧಿಗಳನ್ನು ತಯಾರು ಮಾಡುತ್ತಿದ್ದರು ಎಂಬುದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕು. ಆದ್ದರಿಂದ ನಾವು ಔಷಧಿಗಳನ್ನು ತಯಾರುಮಾಡುವುದಕ್ಕೆ ನಮ್ಮಲ್ಲೇ ಒಂದು ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ ಮತ್ತು ರಿಸರ್ಚ್ ಇನ್ಸ್ಟಿಟ್ಯೂಟ್ ಇಟ್ಟುಕೊಂಡು ಔಷಧಿಗಳನ್ನು ತಯಾರುಮಾಡಿ ಹೊರಗಡೆಗೆ ಕಳುಹಿಸಿದರೆ ಅತ್ತ ಕಡೆ ದುಡ್ಡು ಬರುತ್ತದೆ. ವಿದೇಶೀಯ ಔಷಧಿಗಳ ಮೇಲೆ ನಂಬಿ ಕೊಂಡು ಇರಬೇಕಾಗಿಯೂ ಇಲ್ಲ. ಅಕಸ್ಮಾತ್ ಯುದ್ಧವಾದರೆ ಡಾಕ್ಟರುಗಳಿಲ್ಲ, ವಿದೇಶೀಯ ಔಷಧಿಗಳೂ ಸಿಕ್ಕುವುದಿಲ್ಲ. ಹೀಗಾಗಿ ನಾವು ಅಸಹಾಯಕರಾಗುತ್ತೇವೆ. ಹಿಂದೆ ಯುದ್ಧಕಾಲದಲ್ಲಿ ಔಷಧಿಗಳಿಲ್ಲದೆ ಎಷ್ಟು ಕಷ್ಟಪಟ್ಟಿದ್ದಾರೆ ಎಂಬುದು ಎಲ್ಲರಿಗೂ ಗೊತ್ತು, ಹೊರದೇಶಗಳಿಂದ ಹಡಗುಗಳಲ್ಲಿ ಔಷಧಿ ಬರಬೇಕು. ಒಂದು ವೇಳೆ ಅದೇನಾದರೂ ಮಧ್ಯದಲ್ಲಿ ಮುಳುಗಿ ಹೋದರೆ ಮುಗಿದೇ ಹೋಯಿತು. ಹಿಂದೆ ನಮಗೆ ಕ್ವಿನೈನ್ ಒಂದು ಕನ್ಸೈನ್‌ಮೆಂಟ್ ಬಂದಿತ್ತು. ಅದನ್ನು ತರುತ್ತಿದ್ದ ಹಡಗು ಸಬ್‌ಮೆರೀನ್‌ನ ಹೊಡೆತಕ್ಕೆ ಸಿಕ್ಕಿ ಮುಳುಗಿಹೋಯಿತು. ಈ ರೀತಿ ಎಷ್ಟು ವರ್ಷ ನಾವು ಪರದೇಶಗಳವರನ್ನು ನಂಬಿಕೊಂಡಿರುವುದಕ್ಕಾಗುತ್ತದೆ? ನಮ್ಮ ದೇಶದಲ್ಲಿ ಅಲೋಪತಿಕ್ ಪದ್ಧತಿ ಸೈಂಟಿಫಿಕ್ ಆಗಿ ಅಭಿವೃದ್ಧಿ ಆಗಿಲ್ಲ. ಆದ್ದರಿಂದ ಸೂಕ್ತವಾದ ರಿಸರ್ಚ್ ಮಾಡಿ ನಮಗೆ ಬೇಕಾದ ಔಷಧಿಗಳನ್ನೂ ನಾವೇ ತಯಾರುಮಾಡೋಣ. ರಿಸರ್ಚ್ ವರ್ಕ್ ಮಾಡದೇ ಎಲ್ಲಿಯವರೆಗೆ ಪರದೇಶಗಳ ಔಷಧಿಗಳ ಮೇಲೆ ನಂಬಿಕೊಂಡಿರುತ್ತೇವೆಯೋ ಅಲ್ಲಿಯವರೆಗೂ ಹೆಚ್ಚು ಬೆಲೆಯಾಗತಕ್ಕ ಔಷಧಿಗಳನ್ನು ಕೊಂಡುಕೊಳ್ಳಬೇಕಾಗುತ್ತದೆ. ತಾವೇನೋ ಲಕ್ಷಾಂತರ ರೂಪಾಯಿ ಖರ್ಚುಮಾಡುತ್ತೀರಿ. ಆದರೆ ಅಲೋಪೇತಿಕ್ ಔಷಧಿಗಳು ನಮ್ಮ ಯೋಗ್ಯತೆಗೆ ದೊರೆಯುತ್ತವೆಯೇ ಎಂಬುದನ್ನು ನೋಡಬೇಕು. ಈಗ ಪೆನ್ಸಿಲೀನ್ ಇದೆ. ಯಾವ ಖಾಯಿಲೆ ಆಗಲೀ ಅದೇ ಔಷಧಿ ಉಪಯೋಗಿಸುತ್ತಾರೆ. ಅದಕ್ಕೆ ಮೊದಲಿನಿಂದ ಕೊನೆಯವರೆಗೂ ದುಡ್ಡು ಎಷ್ಟು ಖರ್ಚಾಗುತ್ತದೆ ಎಂಬುದನ್ನು ಯೋಚನೆ ಮಾಡಿದ್ದಾರೆಯೇ? ಅಂಥ ಔಷಧಿಗಳನ್ನು ಕೊಂಡುಕೊಳ್ಳುವುದಕ್ಕೆ ಬಡವರಿಂದ ಸುಲಭ ಸಾಧ್ಯವೇ? ದೊಡ್ಡ ದೊಡ್ಡ ಇಂಜೆಕ್ಷನ್‌ಗಳನ್ನು ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ಅವರು ದುಡ್ಡು ಎಲ್ಲಿಂದ ತರಬೇಕು? ಆಸ್ಪತ್ರೆಗಳಲ್ಲಿ ಔಷಧಿ ಇಲ್ಲ ಎಂಬ ದೂರು ಇದ್ದೇ ಇದೆ. ಆಸ್ಪತ್ರೆಗಳಲ್ಲಿ ಕೇಳಿದರೆ ಔಷಧಿ ಸಪ್ಲೈ ಮಾಡಿಲ್ಲವೆಂದು ಹೇಳುತ್ತಾರೆ. ಡಾಕ್ಟರುಗಳನ್ನು ಕೇಳಿದರೆ ವಿದೇಶೀಯ ಔಷಧಿ, ಇನ್ನು ಬಂದಿಲ್ಲ ಎಂದು ಹೇಳುತ್ತಾರೆ. ಯಾವ ಖಾಯಿಲೆ ಇದೆ, ಏನು ಔಷಧಿ ಕೊಡಬೇಕು ಎಂಬುದನ್ನು ನಮ್ಮ ಪೂರ್ವೀಕರು, ಮುದುಕಿಯರು ಚೆನ್ನಾಗಿ ಕಂಡುಹಿಡಿಯುತ್ತಾರೆ. ಹಿಂದೆ ನಾನು ಒಂದು ಸಣ್ಣ ವಿಚಾರದಲ್ಲಿ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರನ್ನು ಕನ್ಸಲ್ಟ್ ಮಾಡಿದೆ. ಯಾವಗುಣವೂ ಆಗಲಿಲ್ಲ. ಅವನ್ನೇ ಒಬ್ಬ ಮುದುಕಿ ಯಾವುದೋ ಕೆಲವು ಸೊಪ್ಪುಗಳಿಂದ ಔಷಧಿ ಮಾಡಿಕೊಟ್ಟು ವಾಸಿಮಾಡಿತು. ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರನ್ನು ಇದು ಏನು ಎಂದು ಕೇಳಿದ್ದಕ್ಕೆ ಏನೂ ಹೇಳಲಾರದೇ ಹೋದರು. ಆ ಔಷಧಿಗಳಿಗೆ ಇವತ್ತು ಏನಿದ್ದರೂ ಎರಡುಕಾಸು ಖರ್ಚಾಗಿರಬಹುದು, ಅಷ್ಟೆ. ಅದರ ಮಹತ್ವ ಅಷ್ಟರಮಟ್ಟಿಗೆ ಇದೆ. ನಮ್ಮಲ್ಲೇ ಬೇಕಾದಷ್ಟು ಅನುಕೂಲಗಳನ್ನಿಟ್ಟುಕೊಂಡು ಚಾತಕ ಪಕ್ಷಿಗಳ ಹಾಗೆ ಪರದೇಶದ ಔಷಧಿಗಳಿಗಾಗಿ ಕಾದುಕೊಂಡಿರಬೇಕಾಗಿದೆ. ಇವತ್ತು ನಾವು ಇಂಗ್ಲೆಂಡಿನಿಂದ ಔಷಧಿಗಳನ್ನು ತರಿಸಬೇಕು. ತರಿಸಿದರೂ ಕೂಡ ನಮ್ಮ ಜನಗಳಿಗೆ ಆ ಔಷಧಿಗಳನ್ನು ಕೊಂಡು ಕೊಳ್ಳುವ ಯೋಗ್ಯತೆ ಇದೆಯೇ ಎಂಬುದನ್ನು ಯೋಚನೆ ಮಾಡಬೇಕು. ಆಯುರ್ವೇದದ ಇನ್ಸ್ಟಿಟ್ಯೂಷನ್‌ಗೆ ತಳಹದಿ ಆಗಲೇ ಆಗಿದೆ. ಅದನ್ನು ಅಭಿವೃದ್ಧಿ ಪಡಿಸಬೇಕು. ಒಂದು ಸೆಂಟ್ರಲ್ ರಿಸರ್ಚ್ ಇನ್ಸ್ಟಿಟ್ಯೂಷನ್ ಇಟ್ಟುಕೊಂಡು ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲೂ ಒಂದೊಂದು ಉಪಶಾಖೆಯನ್ನು ಪ್ರಾರಂಭಮಾಡಿ, ಅನೇಕ ಜನ ಡಾಕ್ಟರುಗಳನ್ನು ಬರಮಾಡಿಕೊಳ್ಳಲು ಅವರಿಗೆ ಸರಿಯಾದ ಗ್ರೇಡುಗಳನ್ನೂ ಕೊಡಿ, ಮತ್ತು ಯುನಾನಿ ಆಯುರ್ವೇದ ಡಾಕ್ಟರುಗಳನ್ನು ಗ್ರ್ಯಾಜುಯೇಟುಗಳೆಂದು ಮಾಡಿ, ಅವರಿಗೆ ಡಿಗ್ರಿ ಕೊಡಿ. ಆಗ ಇದಕ್ಕೆ ತಕ್ಕ ಉತ್ತೇಜನ ಕೊಟ್ಟ ಹಾಗಾಗುತ್ತದೆ. ಹೀಗೆ ನಮ್ಮ ದೇಶದ ಜನಗಳಿಗೆ ಸುಲಭಬೆಲೆಯಲ್ಲಿ ಆಯುರ್ವೇದದ ಔಷಧಿಗಳನ್ನು ಕೊಟ್ಟು ಖಾಯಿಲೆಗಳನ್ನು ಗುಣಪಡಿಸಬಹುದು. ಅಲೋಪತಿಕ್ ಔಷಧಿಗಳಿಗಿಂತಲೂ ಆಯುರ್ವೇದ ಮತ್ತು ಯುನಾನಿ ಔಷಧಿಗಳು ತೆಗೆದುಕೊಳ್ಳುವುದಕ್ಕೂ ಚೆನ್ನಾಗಿರುತ್ತದೆ. ಇದಕ್ಕೆ ಉತ್ತೇಜನ ಕೊಡಬೇಕು. ಕಾರ್ಯತಃ ನೀವು ಎಷ್ಟರಮಟ್ಟಿಗೆ ಮಾಡುತ್ತೀರೋ ನೋಡೋಣ. ಯಾವಾಗಲೂ ನಾನು ಜರೀಬು ತೆಗೆದುಕೊಳ್ಳುವವನು, ಉಪಚಾರದ ಮಾತಿನಿಂದ ತೃಪ್ತನಾಗುವವನಲ್ಲ.

ಶ್ರೀ ಟಿ. ಸಿದ್ಧಲಿಂಗಯ್ಯನವರು.—ಅದು ಓವರ್‌ಸೀಯರ್ ಮಾಡುವ ಕೆಲಸ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಓವರ್‌ಸಿಯರ್ ಕೆಲಸವಾದರೂ ಸರಿ. ಅವರೇನೂ ಕೆಲಸದಲ್ಲಿ ಕಡಿಮೆಯಿಲ್ಲ. ಆದ್ದರಿಂದ ಈ ವಿಷಯದಲ್ಲಿ ಈಗಿನ ಹೊಸ ಆರೋಗ್ಯ ಮಂತ್ರಿಗಳು ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಕಾರ್ಯಗತಮಾಡುತ್ತಾರೆಂದು ನನ್ನ ಆಶಯ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈ ನಿರ್ಣಯವನ್ನು ಅನುಮೋದಿಸುತ್ತೇನೆ. ನಾವು ಈ ವಿಚಾರವನ್ನು ಮುಖ್ಯವಾಗಿ ಆರ್ಥಿಕ ದೃಷ್ಟಿಯಿಂದ ನೋಡಬೇಕೆಂದು ಹೇಳಿ, ಈ ಸಭೆಯ ಮುಂದೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಈಗ ಈ ಬಾಬಿಗಾಗಿ 72 ಲಕ್ಷದ 89 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಅದು ನಮ್ಮ ದೇಶದಲ್ಲಿರತಕ್ಕ ಪ್ರತಿಯೊಂದು ತಾಲ್ಲೂಕಿಗೂ ಒಂದಲ್ಲ ಒಂದು ರೂಪದಲ್ಲಿ ಖರ್ಚುಮಾಡಿದ ಹಾಗಾಯಿತು. ಆ ರೀತಿ ಖರ್ಚುಮಾಡಿದ್ದರ ಪ್ರಯೋಜನ ಎಲ್ಲರಿಗೂ ಆಗುತ್ತಾ ಇದೆಯೇ ಎಂದರೆ ಶೇಕಡ 90 ಜನರಿಗೆ ಆಗದೇ ಶೇಕಡ 10 ರಷ್ಟು ಜನರಿಗೆ ಮಾತ್ರ ಆಗುತ್ತಾ ಇದೆ. ನಮ್ಮ ದೇಶದಲ್ಲಿರತಕ್ಕ ಸಾಮಾನ್ಯ ಪ್ರಜೆಗೆ ಆಸ್ಪತ್ರೆಗಳಿಂದ ವೈದ್ಯಸಹಾಯ ತೃಪ್ತಿಕರವಾಗಿ ದೊರೆಯುತ್ತಿಲ್ಲ.

ಹೀಗೆ ಆಗುತ್ತ ಇನ್ನು ಮುಂದಕ್ಕೂ ಹೋದರೆ ಆ ಮೂಲೆಯಲ್ಲಿರುವ ಮನುಷ್ಯನಿಗೆ ನೂರಲ್ಲ, ಇನ್ನೂರಲ್ಲ, ಐದುನೂರು ವರ್ಷಗಳು ಕಳೆದರೂ ಆತನಿಗೆ ವೈದ್ಯ

ಸಹಾಯ ಖಂಡಿತ ದೊರೆಯುವುದಿಲ್ಲ. ಆದುದರಿಂದ ಅದಷ್ಟು ಮಟ್ಟಿಗೂ ಇನ್ನೂ ನೂರಾರು ಆಸ್ಪತ್ರೆಗಳನ್ನು ಹೆಚ್ಚು ಮಾಡಿ ದೇಶದ ಪ್ರತಿಯೊಬ್ಬ ಪ್ರಜೆಗೂ ಈ ವೈದ್ಯ ಸಹಾಯ ದೊರಕುವಂತೆ ಮಾಡಬೇಕಾಗಿದ್ದರೆ, ನೀವು ಈಗ ಖರ್ಚುಮಾಡುವುದಕ್ಕಿಂತ 5 ರಷ್ಟು ಹೆಚ್ಚು ಖರ್ಚು ಮಾಡಬೇಕು, ಇದು ನಿಮಗೆ ಖಂಡಿತ ಸಾಧ್ಯವಿಲ್ಲ. ಆದರೆ ಸಾಧ್ಯವಿಲ್ಲವೆಂದು ಪ್ರಜೆಗಳಿಗೆ ಅಗತ್ಯವಾದ ವೈದ್ಯಸಹಾಯವನ್ನು ನೀವು ಹೇಗಾದರೂ ಮಾಡಿ ದೊರಕಿಸಲೇಬೇಕಾಗಿದೆ. ಇದು ನಿಮ್ಮ ಕರ್ತವ್ಯ. ಇದೆಲ್ಲವೂ ನಿಮಗೆ ಅನುಕೂಲವಾಗಿ ಸಾಧ್ಯವಾಗ ಬೇಕಾಗಿದ್ದರೆ ನಿಮಗಿರತಕ್ಕದ್ದು ಒಂದೇ ಮಾರ್ಗ. ಅದು ಯಾವುದೆಂದರೆ ಈಗ ನೀವು ಖರ್ಚುಮಾಡುವ ಹಣವು ಇಂಗ್ಲೀಷ್ ಔಷಧಿಗಳಿಗೆ, ವಿಪರೀತ ಹೆಚ್ಚಾಗಿರುತ್ತೆ. ಅಷ್ಟಾದರೂ ನಿಮಗೆ ಸಾಕಷ್ಟು ಸಹಾಯ ದೊರೆಯುತ್ತಿಲ್ಲವಾದ ಕಾರಣ, ಖರ್ಚುಕಡಿಮೆ ಮತ್ತು ಗುಣದಲ್ಲಿ ಅಧಿಕವಾಗಿರುವ ನಮ್ಮ ಆಯುರ್ವೇದ ವೈದ್ಯಕ್ಕೆ ನೀವು ಸ್ವಲ್ಪ ಹಣವನ್ನು ಖರ್ಚುಮಾಡಿದರೂ ಸಾಕು. ಅದರಿಂದ ನೀವು ಹೆಚ್ಚು ಅನುಕೂಲಗಳನ್ನು ಜನರಿಗೆ ಒದಗಿಸಬಹುದು. ಆದರೆ ನೀವು ಈ ಆಯುರ್ವೇದ ವೈದ್ಯದಲ್ಲಿ ನಿಮ್ಮ ನಂಬಿಕೆಯನ್ನು ಕಳೆದು ಕೊಂಡಿದ್ದೀರಿ. ನಿಜವಾದ ಸಂಗತಿ ಎಂದರೆ ನೀವು ಆಸ್ಪತ್ರೆಗಳಿಗೆ ಹೋಗಿ ಪಡೆಯುವ ಉಪಚಾರದ ಹತ್ತರಷ್ಟು ಉಪಚಾರವನ್ನು ಈ ನೇಟಿವ್ ವೈದ್ಯರಲ್ಲಿಯೇ ಕಮ್ಮಿ ಖರ್ಚಿನಲ್ಲಿ ಪಡೆಯಬಹುದು. ಆದರೆ ಈ ಆಯುರ್ವೇದ ವೈದ್ಯದಲ್ಲಿ ಕೂಡ ಅರಿತು, ನುರಿತ, ಸಂಸ್ಕೃತಿ ಪಡೆದ ತಿಳಿವಳಿಕಸ್ತರೂ, ಮತ್ತು ಅನುಭವಶಾಲಿಗಳೂ ಅಷ್ಟು ಹೆಚ್ಚಾಗಿಲ್ಲ. ಇರತಕ್ಕದ್ದರಲ್ಲಿ ವಿಶೇಷವಾಗಿ ಹಿಂದಿನಿಂದ, ಅಪ್ಪನಕಾಲದಿಂದ ಬಂದಿದ್ದು ಅದನ್ನು ನಾವು ಬಿಡಬಾರದು ಎಂದು ಅನೇಕರು ನಡೆಸಿಕೊಂಡು ಬರುತ್ತಿದ್ದಾರೆ. ಇವರಲ್ಲಿ ಅನೇಕರಿಗೆ ಸರಿಯಾದ ಜ್ಞಾನವಿರುವುದಿಲ್ಲ. ಕೆಲವು ಕಡೆ ಹಳ್ಳಿಯ ಜನರು ಇಂಥವರ ಕಡೆಯಿಂದ ಔಷಧಿ ತೆಗೆದುಕೊಂಡು ಅನೇಕ ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆ. ಆದರೆ ಇತ್ತೀಚೆಗೆ ನಮ್ಮ ಮೈಸೂರಿನಲ್ಲಿರುವ ಆಯುರ್ವೇದ ಕಾಲೇಜಿನಲ್ಲಿ ವ್ಯಾಸಂಗ ಮಾಡಿದಂಥ ವೈದ್ಯರುಗಳು ನಮಗೆ ಬೇಕಾದಹಾಗೆ ಸಿಕ್ಕುತ್ತಿದ್ದಾರೆ. ಇಲ್ಲಿಯತನಕ ಇವರಿಗೆ ಸಂಬಳ ಸಾರಿಗೆ ಸರಿಯಾಗಿಲ್ಲದಿದ್ದ ಕಾರಣ, ಇವರು ಯಾರೂ ಕೆಲಸಕ್ಕೆ ಬರುತ್ತಿರಲಿಲ್ಲ. ಈಗ ಅವರಿಗೆ 50 ರಿಂದ ಹಿಡಿದು 100 ರೂಪಾಯಿಗಳ ಗ್ರೇಡಿನವರಿಗೆ ಸಂಬಳ ಗೊತ್ತುಮಾಡಿರುವುದರಿಂದ, ಅಂದರೆ ಸರ್ಕಾರದವರು ಹೀಗೆ ಒಂದು ಪ್ರೋತ್ಸಾಹ ಕೊಟ್ಟಿದ್ದರಿಂದ, ಈಗ ಅನೇಕ ವೈದ್ಯರು ಕೆಲಸಕ್ಕೆ ಬರುತ್ತಿದ್ದಾರೆ. ಅನೇಕರು ಕೆಲಸಕ್ಕೆ ಅರ್ಜಿಗಳನ್ನೂ ಹಾಕಿಕೊಳ್ಳುತ್ತಿದ್ದಾರೆ. ಈ ವಿಷಯದಲ್ಲಿ ಹಿಂದಿನ ಮಂತ್ರಿಗಳಾಗಿದ್ದ ಜನಾಬ್ ಮಹಮ್ಮದ್‌ಷರೀಫ್‌ರವರು ಈ ಬಗ್ಗೆ ಬಹಳ ಸಹಾಯ ಮಾಡಿದ್ದಾರೆ ಮತ್ತು ಶ್ರದ್ಧೆಯಿಂದ ಕೆಲಸ ಮಾಡಿ ಕೊಟ್ಟರು. ಅದಕ್ಕೆ ಹಿಂದೆ ಈ ಬಾಬಿಗೆ ಸರ್ಕಾರದವರು ಯಾವ ಉತ್ತೇಜನವನ್ನೂ ಕೊಟ್ಟಿರಲಿಲ್ಲ. ಅವರಿಗೆ ಸರಿಯಾದ ಸಂಬಳ, ಗ್ರೇಡು ವಗೈರೆಗಳಾವುವೂ ಇರಲಿಲ್ಲ. ಈಗೇನೋ ಕೊಂಚ ಅನುಕೂಲವಾಗಿದೆ. ಆದರೆ ತಾವೀಗ ಈ ಬಾಬಿಗೆ 2 ಲಕ್ಷ 22ಸಾವಿರರೂಪಾಯಿಗಳನ್ನೊದಗಿಸಿದ್ದೀರಿ. ಈ ಹಣದಿಂದ ದೇಶಕ್ಕೆಲ್ಲ ವೈದ್ಯಸಹಾಯ ನೀಡಲು ಸಾಧ್ಯವಿದೆಯೇ ! ನಮಗೆ ಇನ್ನೂ ಎಷ್ಟೋಜನ ಡಾಕ್ಟರುಗಳೇ ಒದಗುತ್ತಿಲ್ಲ. ಆದರೆ ಶ್ರೀಮಾನ್ ಎಲ್. ಎಸ್. ವೆಂಕಾಜಿರಾಯರಂಥ ಶ್ರೀಮಂತರು ಲಕ್ಷಾಂತರ ರೂಪಾಯಿಗಳದಾನಮಾಡಿ ಒಂದು ದೊಡ್ಡ ಆಸ್ಪತ್ರೆಯನ್ನೇ ಕಟ್ಟಿಸಿದ್ದಾರೆ. ಆದರೆ ಅಲ್ಲಿ ಸರಿಯಾದ ಸಿಬ್ಬಂದಿಯಿಲ್ಲ, ಅದರ ಮೇಲೆ ತಕ್ಕ ನಿಗಾವಣೆ ಇಲ್ಲ.

ಈ ಆಯುರ್ವೇದ ಬಾಬಿನಲ್ಲಿ ಇತಿಂಥಾದ್ದಕ್ಕೆ ಇಂತಿಂಥಾದ್ದೇಹಸುರೆಲೆ ಎಂಬ ನಿಘಂಟಿದೆ. ಇಂಥಾ ಘಾಯಕ್ಕೆ ಇಂಥಾಹಸುರೆಲೆಯನ್ನೇ ಹಾಕಬೇಕು ಎಂಬ ನಿಯಮವಿದೆ. ಇದನ್ನೆಲ್ಲ ಸಂಗ್ರಹಮಾಡಿ, ಕಂಡುಹಿಡಿಯಲು ತಾವು ಪ್ರಯತ್ನ ಪಟ್ಟರೆ ಕಮ್ಮಿ ಖರ್ಚಿನಿಂದ ಹೆಚ್ಚು ಪ್ರಯೋಜನ ಪಡೆಯಬಹುದು. ತಾವುಹಾಗೆ ಮಾಡದೆ ಈ ಇಂಗ್ಲೀಷ್ ಔಷಧಿಯಲ್ಲೇ ನಂಬಿಕೆಯನ್ನಿಟ್ಟುಕೊಂಡು ಹೋಗುತ್ತಿದ್ದರೆ ನಮ್ಮ ವೈದ್ಯವೃತ್ತಿ ಜಾಗ್ರತೆ ನಶಿಸಿ ಹೋಗುತ್ತೆ. ಒಂದೆರಡು ಆಣೆಗಳ ಖರ್ಚಿನಲ್ಲಿ ವಾಸಿಯಾಗತಕ್ಕ ಚಿಕಿತ್ಸೆಗಳಿಗಾಗಿ ಸಾವಿರಾರು ರೂಪಾಯಿಗಳು ಖರ್ಚುಮಾಡಿ ಆಸ್ಪತ್ರೆ ಕ[illegible]ಸಲಾಗಿದೆ. ಅಷ್ಟಾದರೂ ಸಾಕಷ್ಟು ಔಷಧಿಗಳು ದೊರೆಯುತ್ತಿಲ್ಲ. ಅಷ್ಟೇ ಅಲ್ಲದೆ ಅಲ್ಲಿಗೆ ಬೇಕಾಗುವ ಬೆಡ್ಸ್, ಮಂಚ, ಶಸ್ತ್ರಸಾಮಗ್ರಿಗಳು ಇತ್ಯಾದಿಗಳನ್ನು ಹೊಂದಿಸಿಕೊಳ್ಳುವುದಕ್ಕೇ ಸಾಧ್ಯವಿಲ್ಲದಿರುವಾಗ ಇನ್ನು ಬಾಕಿ ವಿಷಯಗಳ ಸುದ್ದಿಯೇಕೆ ? ಇದಕ್ಕಾಗಿ ಈಗ ಕೋಟ್ಯಾಂತರ ರೂಪಾಯಿಗಳು ನಮ್ಮ ಕೈಬಿಟ್ಟು ಪರದೇಶಕ್ಕೆ ಹೋಗುತ್ತಿದೆ. ಇದನ್ನು ನೀವು ಮೊದಲು ತಪ್ಪಿಸಬೇಕು. ಜನರಲ್ಲಿ ತಿಳಿವಳಿಕೆ, ಜ್ಞಾನ ಹೆಚ್ಚಿದಂತೆಲ್ಲ ಪಾಶ್ಚಾತ್ಯರ ವೈದ್ಯಕ್ಕಾಗಿ ಹಣ ಪೋಲಾಗುತ್ತಿರುವುದನ್ನು ತಡೆಗಟ್ಟಬೇಕು. ಆ ಇಂಗ್ಲೀಷ್ ಔಷಧಿಗಳಲ್ಲಾದರೋ ಹತ್ತಕ್ಕೊಂದು ಗುಣವಾಗಬಹುದು. ಅದಕ್ಕಾಗಿ ಇಷ್ಟೊಂದು ಖರ್ಚು ಮಾಡಬೇಕೆ ! ಹೀಗೆ ತಾವು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿಸಿರುವ ಆಸ್ಪತ್ರೆಗಳಲ್ಲಿಯೂ ಕೂಡ ಏನಾದರೂ ದುಡ್ಡುಕೊಟ್ಟರೆ ಕೊಂಚ ಔಷಧಿಸಿಕ್ಕಬಹುದೇ ಹೊರತು, ಇಲ್ಲವಾದರೆ ಬರಿ ನೀರೆ ದೊರೆಯುವುದು. ಇಷ್ಟೆಲ್ಲಾ ಇದ್ದರೂ ದೇಶದ ಜನಗಳಿಗೆ ಅಂದರೆ ಮೂಲೆಗಳಲ್ಲಿರತಕ್ಕವರಿಗೆ ಇದರಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಈಬಾಬು ಅಷ್ಟೊಂದು ತಮಗೆ ಅಗತ್ಯವಾಗಿರಲೇಬೇಕೆಂಬ ಆವಶ್ಯಕತೆ ಕಂಡು ಬಂದಿದ್ದರೆ, ಇಂಥಾ ದೊಡ್ಡ ದೊಡ್ಡ ಒಂದೆರಡು ಆಸ್ಪತ್ರೆಗಳನ್ನುಳಿಸಿಕೊಂಡು ಉಳಿದ ಎಲ್ಲಾ ತಾಲ್ಲೂಕು ಕಸಬೆಗಳಲ್ಲಿರುವ ಪ್ರತಿಯೊಂದು ಆಸ್ಪತ್ರೆಯನ್ನೂ ಆಯುರ್ವೇದದ ಆಸ್ಪತ್ರೆಯನ್ನಾಗಿ ಮಾರ್ಪಡಿಸಿ, ಅಲ್ಲೆಲ್ಲ ಸರಿಯಾಗಿ ಕೆಲಸಮಾಡಲು ವೈದ್ಯರುಗಳನ್ನು ಸೇರಿಸಿ, ಅದಕ್ಕೆ ತಕ್ಕ ಒಂದು ಸೂಪರ್‌ವಿಷನ್ ವ್ಯವಸ್ಥೆಯನ್ನು ಏರ್ಪಡಿಸಿ, ಆ ರೀತಿ ತಾವು ಮಾಡುವುದಾದರೆ ಅದರಿಂದ ಹೆಚ್ಚಿನ ಜನರಿಗೆ ಸೌಕರ್ಯಉಂಟಾಗಲು ಅವಕಾಶ ದೊರೆಯುತ್ತದೆ. ಈರೀತಿ ತಾವು ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು (ಹಾಸನ ಜಿಲ್ಲೆ).—ಸ್ವಾಮಿ, ಈಗ ಹಾಲ ನಮ್ಮ ದೇಶದಲ್ಲಿ ಆಯುರ್ವೇದ ಮತ್ತು ಯುನಾನಿ—ಈ ಎರಡಕ್ಕೂ ಯಾವ ರೀತಿಯಲ್ಲೂ ಪ್ರೋತ್ಸಾಹ ದೊರೆಯದಿರುವುದು ಬಹಳ ಶೋಚನೀಯ ಮತ್ತು ಇದನ್ನು ತಿಳಿಸಲು ನಾನು ಪೂರಾ ವಿಷಾದಪಡುತ್ತೇನೆ ಮತ್ತು ವ್ಯಥೆಯೂ ಉಂಟಾಗುತ್ತದೆ. ಶ್ರೀಮಾನ್ ಎಚ್. ಬಿ. ಗುಂಡಪ್ಪ ಗೌಡರು ಈ ಸಂಬಂಧವಾಗಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅಲ್ಲದೆ ಆವರು ಮಂತ್ರಿಗಳಾಗಿದ್ದಾಗ ತಮ್ಮ ಕೈಲಾದ ಎಲ್ಲಾ ಸಹಾಯಗಳನ್ನೂ ಮಾಡಿದ್ದಾರೆ. ಅವರಿಗೆ ಈ ಧನ್ವಂತರಿ ಮೂಲಿಕೆಗಳಲ್ಲಿ ಬಹಳ ನಂಬಿಕೆಯಿದೆ. ನಮ್ಮ ದೇಶದ ಜನರಿಗೆ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಈ ನಮ್ಮ ವೈದ್ಯ ಬಾಬುಗಳು ಎಷ್ಟು ಸುಲಭ

ವಾದವುಗಳು ಮತ್ತು ಫಲದಾಯಕಗಳಾಗಿರುತ್ತವೆಂಬುದನ್ನು ಚೆನ್ನಾಗಿ ಮನಗಂಡಿರುವಂಥ ಶ್ರೀಮಾನ್ ಎಚ್. ಸಿ. ದಾಸಪ್ಪನವರೂ ಈ ದಿವಸ ಈ ಮಂತ್ರಿಮಂಡಲದಲ್ಲಿದ್ದಾರೆ. ಅದೇ ಬಾಬಿನ ಆಡಳಿತ ವಹಿಸಿಕೊಂಡು ಈಗ ಮಂತ್ರಿಮಂಡಲದಲ್ಲಿರುವ ಶ್ರೀ ಟಿ. ಸಿದ್ದಲಿಂಗಯ್ಯನವರು ಬಾಬಾರವರ ಮುಖ್ಯ ಶಿಷ್ಯರಾಗಿದ್ದಾರೆ. ಮಾನ್ಯ ಮಂತ್ರಿಗಳಿಗೆ ಕಾಯಕಲ್ಪದ ಪೂರ್ಣ ಅನುಭವವಿದೆ. ಇವರು ಬಹುಶಃ ತಾಪಸೀ ಬಾಬರವರ ಹೆಸರನ್ನು ದಿನಕ್ಕೆ ಎರಡು ಸಾರಿಯಾದರೂ ತಪ್ಪದೆ ಜ್ಞಾಪಿಸಿಕೊಂಡು ಈಗಲೂ ತಪ್ಪದಂತೆ ವಾರಕ್ಕೆರಡಾವರ್ತಿ ಅವರ ಸಂದರ್ಶನ ಮಾಡುತ್ತಲೇ ಇದ್ದಾರೆ. ಇಂಥಾ ಮಂತ್ರಿಗಳೇ ಇಲ್ಲಿರುವಾಗ ಆಯುರ್ವೇದಕ್ಕೆ ಹೆಚ್ಚಿನ ಪ್ರೋತ್ಸಾಹ ಸಿಕ್ಕುತ್ತದೆಂದು ಆಶಿಸೋಣ.

ಈ ಆಲೋಪಥಿಕ್ ಔಷಧಿಗಳ ಚಿಕಿತ್ಸೆ ಎಂತಹುದು! ನಮಗೆ ತೊಂದರೆ ಬಂದಾಗ ತಾತ್ಕಾಲಿಕ ಶಮನಕ್ಕೆ ಇದು ಔಷಧಿಯೇ ಹೊರತು ಇದರಿಂದ ಸಂಪೂರ್ಣ ಗುಣವಾಗುವುದಿಲ್ಲ. ಇದನ್ನು ಸೇವನೆಮಾಡುವುದು ಅಷ್ಟು ಲಾಭದಾಯಕವಲ್ಲ. ಈ ವಿಷಯಗಳನ್ನೆಲ್ಲಾ ಶ್ರೀಮಾನ್ ಗುಂಡಪ್ಪಗೌಡರು ಬಹಳ ಚೆನ್ನಾಗಿ ತಿಳಿಸಿದ್ದಾರೆ. ನಮಗೆ ಮೊದಲಿಂದಲೂ ಈ ಪದ್ಧತಿ ತಪ್ಪಿಹೋಗಿದ್ದರೂ, ಅದರ ಮೇಲಿನ ವಿಶ್ವಾಸ ಮಾತ್ರ ಕಡಿಮೆಯಾಗಿಲ್ಲ. ಆಯುರ್ವೇದದ ಪದ್ಧತಿಗೆ ಸರಿಯಾಗಿ ನಾವು ಆ ಪದ್ಧತಿಯನ್ನು ಅನುಸರಿಸುತ್ತಿಲ್ಲ. ಇದಕ್ಕಾಗಿ ಒಬ್ಬ ಡೈರೆಕ್ಟರನ್ನು ಮತ್ತು ಒಬ್ಬ ಅಸಿಸ್ಟೆಂಟ್ ಡೈರೆಕ್ಟರನ್ನು ನೇಮಕಮಾಡಲು ಅವಕಾಶವಿದೆ. ಇದರ ಬಗ್ಗೆ ಸರ್ಕಾರಿ ಮಂಜೂರಾತಿ ದೊರೆತಿದ್ದರೂ, ಅದನ್ನು ಕಾರ್ಯಗತ ಮಾಡದೆ, ಅದು ಇನ್ನೂ ಅನಾಯಕಸ್ಥಿತಿಯಲ್ಲಿದೆಯೆಂದು ಹೇಳಬಹುದು. ಹೀಗೆ ಸರ್ಕಾರಕ್ಕೆ ಆಯುರ್ವೇದ ಔಷಧಿಗಳ ಬಗ್ಗೆ ಇರುವ ತಾತ್ಸಾರದಿಂದ ಪಾಶ್ಚಾತ್ಯ ಔಷಧಿಗಳನ್ನು ಕೊಂಡುಕೊಳ್ಳಲು ವಿಪರೀತ ಹಣ ವ್ಯಯವಾಗುತ್ತಿದೆ. ಇದಕ್ಕಾಗಿ ಈ ಆಯುರ್ವೇದ ಪದ್ಧತಿಯನ್ನೇ ಉತ್ತಮಪಡಿಸಲು ಒಂದು ಸಮಿತಿಯನ್ನು ರಚಿಸಲಾಗಿದೆ. ಅದರಲ್ಲಿ ಅಲೋಪತಿಕ್, ಆಯುರ್ವೇದಿಕ್, ಯುನಾನಿ, ಇತ್ಯಾದಿ ಎಲ್ಲಾ ಸೇರಿಕೊಂಡು ಒಂದು ಕಲಸುಮೇಲೋಗರದಂತಿದೆ. ಅದು ವರ್ಷಕ್ಕೊಂದು ಸಾರಿಯಾದರೂ ಸೇರುತ್ತದೆಯೋ ಇಲ್ಲವೋ, ಹೇಳಲು ಅಸಾಧ್ಯ. ಇದರಿಂದ ನಮ್ಮ ಸರ್ಕಾರಕ್ಕೆ ಇದರ ಮೇಲೆ ಎಷ್ಟು ಶ್ರದ್ಧೆ ಇದೆಯೆಂದು ಊಹಿಸಬಹುದು. ಈ ಬಗ್ಗೆ ಹೊಸ ಸಂಶೋಧನೆ ಮಾಡುವುದಕ್ಕೆ ಕೇಂದ್ರ ಸರ್ಕಾರದವರೂ ಕೂಡ ಈಗ ಮನಸ್ಸು ಮಾಡುತ್ತಿದ್ದಾರೆ. ನಾವೂ ಸಹ ಈ ಪದ್ಧತಿಯಲ್ಲಿ ನಿಪುಣರಾಗಿರತಕ್ಕವರ ಒಂದು ಸಮಿತಿಯನ್ನು ಏರ್ಪಡಿಸಬೇಕು. ಈಗ ಈ ಸಮಿತಿಯನ್ನು ಹೊಸದಾಗಿ ಮಾರ್ಪಡಿಸಿ ಅಸಿಸ್ಟೆಂಟ್ ಡೈರೆಕ್ಟರ್ ಮತ್ತು ಡೈರೆಕ್ಟರ್‌ಗಳನ್ನು ಮಂಜೂರುಮಾಡಿ ಸಮರ್ಪಕವಾದ ನೀತಿಯನ್ನು ಅನುಸರಿಸಬೇಕು. ಈಗಾಗಲೇ ಮಾನ್ಯ ಸ್ನೇಹಿತರುಗಳು ಹೇರಳವಾಗಿ ಮಾತನಾಡಿರುವುದರಿಂದ ಇನ್ನೂ ಹೆಚ್ಚಿಗೆ ಹೇಳಬೇಕಾದುದೇನೂ ಇರುವುದಿಲ್ಲ. ಇಷ್ಟು ಹೇಳಿ ಈ ಕತ್ತರಿಪ್ರಯೋಗವನ್ನು ಸಮರ್ಥಿಸುತ್ತೇನೆ.

Sri M. V. KRISHNAPPA.—I move for closure, Sir.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಆಯುರ್ವೇದವನ್ನು ಪುನರುಜ್ಜೀವನ ಮಾಡಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಈಗ ತಾವು ಕೊಡುತ್ತಿರುವ ಪ್ರೋತ್ಸಾಹ ಕೇವಲ ಕಡಿಮೆ. ಅವರ ಸಂಬಳ ಸಾರಿಗೆಗಳನ್ನು 50–60 ರೂಪಾಯಿಗಳಿಗೆ ಜಾಸ್ತಿ ಮಾಡಿದ್ದೀರಿ. ಇದೇನೂ ಹೆಚ್ಚಲ್ಲ. ಅಲೋಪತಿಯವರನ್ನು ಯಾವ ದರ್ಜೆಯಲ್ಲಿಟ್ಟಿದ್ದೀರೋ ಅದೇ ದರ್ಜೆಗೆ ಈ ಆಯುರ್ವೇದ ಯುನಾನಿಯವರನ್ನೂ ತರಬೇಕು. ಆ ಮೇಲೆ ಕಟ್ಟಡಗಳಿಗಾಗಿಯೂ ಹೆಚ್ಚಿಗೆ ಹಣವನ್ನೊದಗಿಸುವ ಏರ್ಪಾಡು ಮಾಡಬೇಕು. ಔಷಧಿಗಳನ್ನೂ ಸಹ ಬೇರೆ ಆಸ್ಪತ್ರೆಗಳಿಗೆ ಯಾವರೀತಿ ಸರಬರಾಯಿ ಮಾಡುತ್ತೀರೋ ಅದೇರೀತಿ ಈ ಆಯುರ್ವೇದ ಆಸ್ಪತ್ರೆಗಳಿಗೂ ಸರಬರಾಯಿ ವ್ಯವಸ್ಥೆ ಮಾಡಬೇಕು. ಕೇವಲ 8–10 ರೂಪಾಯಿಗಳ ಸಹಾಯದಿಂದ ಪ್ರಯೋಜನವಿಲ್ಲ. ಔಷಧಿಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನಿಂದಲೇ ಸರಬರಾಯಿ ಮಾಡುವಂತೆ ಮಾಡಬೇಕು. ಅಲ್ಲಿನ ಜವಾನರ ವಿಷಯದಲ್ಲೂ ಕೂಡ, ಒಬ್ಬೊಬ್ಬರಿಗೆ ಎಂಟು ರೂಪಾಯಿಗಳನ್ನು ಕೊಡುವ ಬದಲು ಡಿಸ್ಟ್ರಿಕ್ಟ್ ಬೋರ್ಡಿನಿಂದಲೇ ಜವಾನ, ಮಿಡ್‌ವೈಫ್, ಕಾಂಪೌಂಡರುಗಳನ್ನು ಒದಗಿಸುವ ಏರ್ಪಾಡು ಮಾಡಬೇಕಲ್ಲದೆ, ಆಯುರ್ವೇದ ಶಿಕ್ಷಣ ಪದ್ಧತಿಯನ್ನೂ ಉತ್ತಮಪಡಿಸಬೇಕೆಂದು ನನ್ನ ಸಲಹೆ, ಇಷ್ಟೆಲ್ಲಾ ಮಾಡಿದರೆ ಅನುಕೂಲವಾಗುತ್ತದೆಂದು ಅಭಿಪ್ರಾಯಪಡುತ್ತೇನೆ.

Srimathi RATNAMMA ISAAC (Kolar District—General)—Sir, I was a lecturer in Materia Medica in the Medicat School dealing with the allopathic system of medicines. We should understand that most of the medicines that have been used in the allopathic system of medicine are the same as th se used in the ayurvedic system also. For instance, ginger, garlic as asafœtida turmeric mint, peppers all these are garden vegetables and are used in both systems. It is from the fruits, leaves, the roots and the barks of these that allopathic system of medicines are made, perhaps in a finer form. My contention is that if we can combine these three systems of medicine, the allopathic, the ayurvedic and the unani, it would be very effective. Most of the Hon'ble Members who they fall sick and want treatment, they do not stick to the ayurvedic or the unani system of medicines only. I see them also as patients in the Victoria Hospital or in other big hospitals, When it is a question of life and death, it is no use saying that this system of medicine is or that system of medicine. If we can combine all these three systems of medicine, I think it will be very advantageous,

Some of our L.M.Ps. who are now called second grade assistant surgeons, had been to Calcutta to take a course in ayurvedic and unani system of medicine. They have come back. When

they started practice I wanted to find out to which system of medicine they would stick to and by which method of treatment they were going to treat their patients. I find that every one of them is sticking to the ayurvedic and the unani systems of medicines. But those doctors always carry the hypodermic syringe also in their hands and give injections. I do not blame them, but I rather admire them, because they have found out that a combination of both is the best treatment to help the people. If our Government will only send some of our L.M.P lady doctors to have a knowledge of the ayurvedic and unani systems of medicine and make them use the ayurvedic and unani medicines also, a great amount of benefit will be done.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರತಕ್ಕ ಎಲ್ಲಾ ಅಭಿಪ್ರಾಯಗಳನ್ನೂ ಸರ್ಕಾರದವರು ಯಾವ ವಿಧವಾದ ಬೇಧವನ್ನೂ ಇಡದೆ ಒಪ್ಪಿಕೊಳ್ಳುತ್ತಾರೆಂದು ನಾನು ಸರ್ಕಾರದ ಪರವಾಗಿ ಹೇಳಬಯಸುತ್ತೇನೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇತ್ತೀಚೆಗೆ ಇದಕ್ಕೆ allotment ಏಕೆ ಜಾಸ್ತಿ ಮಾಡಿಲ್ಲ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಡ್ಜೆಟ್ಟಿನ II ಭಾಗವನ್ನು ನೋಡುವುದಾದರೆ, 69,000 ರೂಪಾಯಿಗಳನ್ನು ಹೆಚ್ಚಿಗೆ ಬೇರೆ ಕೊಡಲಾಗಿದೆ. ಹಾಲಿ main headನಲ್ಲಿ 2,27,000 ರೂಪಾಯಿಗಳನ್ನು ಕೊಟ್ಟಿದೆ. ಅಂದರೆ ಶೇಕಡಾ 25ರಷ್ಟು ಉತ್ತಮಗೊಂಡಹಾಗೆ ಆಯಿತು. ಹೀಗಿರುವಾಗ ಈ main headನಲ್ಲೇ ಇನ್ನೂ 100 ರೂಪಾಯಿಗಳನ್ನು ಕಡಿಮೆ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಒಟ್ಟಿನಲ್ಲಿ ಇದರಲ್ಲೇನೂ ಭಿನ್ನಾಭಿಪ್ರಾಯವಿಲ್ಲ. ನಮ್ಮ ನಾಗರೀಕತೆ, ನಮ್ಮ ದೇಶದ ಸಂಸ್ಕೃತಿಯ ದೃಷ್ಟಿಯಿಂದ ಮತ್ತು ರಾಜಕೀಯ ದೃಷ್ಟಿಯಿಂದ ಸ್ವಾತಂತ್ರ್ಯವನ್ನು ಪಡೆಯಬೇಕಾದ್ದು ಧರ್ಮ ಮತ್ತು ನ್ಯಾಯ ಎಂದು ಯಾವರೀತಿ ಹೇಳುತ್ತಿದ್ದಾರೆಯೋ ಅದೇರೀತಿ ಇದನ್ನು ಕಾರ್ಯಗತ ಮಾಡುವುದಕ್ಕೂ ಎಲ್ಲರೂ ಶ್ರಮಿಸೋಣವೆಂದು ನಾನು ಪ್ರಾರ್ಥಿಸುತ್ತೇನೆ.

ಈ ವಿಷಯದಲ್ಲಿ ನಾನು ಹೆಚ್ಚಿಗೆ ಚರ್ಚಿಸಬೇಕಾಗಿಲ್ಲ. ಎಲ್ಲರೂ ಒಪ್ಪಿರುವ ಅಭಿಪ್ರಾಯದ ಮೇಲೆ ತರ್ಕಿಸುವುದು ಅನಾವಶ್ಯಕ. ನಮ್ಮ ಮಿತ್ರರು ಒಂದು ಸೆಂಟ್ರಲ್ ಬೋರ್ಡನ್ನು ಏರ್ಪಡಿಸಬೇಕೆಂದೂ, ರಿಸರ್ಚ್ ನಡೆಸಬೇಕೆಂದೂ ಹೇಳಿದ್ದಾರೆ. ಇಂಡಿಯಾ ಸರ್ಕಾರದವರೇ ಈಗಾಗಲೇ ಒಂದು ಸೆಂಟ್ರಲ್ ಬೋರ್ಡನ್ನು ಮಾಡಿದ್ದಾರೆ. ಅದರ ವರದಿಯನ್ನು ನಿರೀಕ್ಷಿಸುತ್ತಿದ್ದೇವೆ. ಅದು ಬಂದ ಮೇಲೆ ನಾವೂ ಅದನ್ನೇ ಅನುಮೋದಿಸುತ್ತೇವೆ. ಅವರು ಮಾಡಿರತಕ್ಕ ಅನೇಕ ಕೇಸುಗಳೂ ಮೈಸೂರು ದೇಶದಲ್ಲೂ ಆಚರಣೆಗೆ ಬರುತ್ತವೆ. ಶ್ರೀಮಾನ್ ಗುಂಡಪ್ಪಗೌಡರು ಬಹಳ ಶ್ರದ್ಧೆಯಿಂದ ಇದರ ಕೆಲಸವನ್ನು ಪ್ರಾರಂಭಮಾಡಿದರು. ಅದೇರೀತಿಯಲ್ಲಿ ಅದನ್ನು ಮುಂದುವರಿಸಿಕೊಂಡು ಬರುವುದಕ್ಕೆ ಪ್ರತಿಯೊಬ್ಬರೂ ಬೆಂಬಲ ಕೊಟ್ಟಿದ್ದಾರೆ. ಈ ಖೋತಾ ಸೂಚನೆಯನ್ನು ತಂದಿರುವ ಜನಾಬ್ ಅಬ್ದುಲ್ ರಹಮಾನರವರು ಈ ವಿಚಾರದಲ್ಲಿ ಬಹಳ ಆಸಕ್ತಿ ವಹಿಸಿದ್ದಾರೆ, ಮತ್ತು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆರ್ಥಿಕ ದೃಷ್ಟಿಯಿಂದ ಇದು ಬಹಳ ಅವಶ್ಯಕವಾಗಿದೆ. ಆದಷ್ಟು ಬೇಗನೆ ಮಾಡುವುದಕ್ಕೆ ಸರ್ಕಾರದವರು ಕಂಕಣ ಕಟ್ಟಿ ನಿಲ್ಲುತ್ತೇವೆಂಬ ಭರವಸೆಯನ್ನು ನಾನು ಹೇಳಬಲ್ಲೆ. ಬಡ್ಜೆಟ್ಟಿನ IIನೆಯ ಭಾಗದಲ್ಲಿ 68,900 ರೂಪಾಯಿಗಳನ್ನು ಕೊಟ್ಟಿದ್ದರೂ ಅದು ಸಾಲದು, ಇದಕ್ಕೆ ಹಾಕಿಕೊಂಡಿರುವ ಯೋಜನೆ ಸರಿಯಾಗಿಲ್ಲವೆಂದು ನಮ್ಮ ಮೇಲೆ ಆಕ್ಷೇಪಣೆ ಮಾಡಿದರು. ನಾವು ಸದ್ಯಕ್ಕೆ ಸೆಂಟ್ರಲ್ ಬೋರ್ಡಿನವರ ವರದಿ ಬರುವುದನ್ನೇ ಕಾಯುತ್ತಿದ್ದೇವೆ. ಅದು ಬಂದ ತಕ್ಷಣ ಆದಷ್ಟು ಬೇಗನೆ ಇದನ್ನು ಸಫಲಗೊಳಿಸುವುದಕ್ಕೆ ಹೊರಟು ಈ ಆಯುರ್ವೇದ, ಯುನಾನಿ ವೈದ್ಯ ಬಾಬುಗಳಿಗೆ ಬೆಂಬಲ ಕೊಡಲು ಪ್ರಯತ್ನ ಮಾಡುತ್ತೇವೆ. ಆದ್ದರಿಂದ ಈ ನಿರ್ಣಯದ ಸೂಚಕರು ಈ ನೂರು ರೂಪಾಯಿಗಳನ್ನು ಕೂಡ ಕಡಿಮೆಮಾಡದೆ ತಮ್ಮ ಖೋತಾ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Janab SYED ABDUR RAHMAN.—In view of the assurance given by the Hon'ble Minister for Education, I beg to withdraw the cut motion.

The cut motion was, by leave of the Assembly, withdrawn.

Construction of Hospital Buildings in Chitaldrug District.

Sri A. BHEEMAPPA NAIK (Chitaldrug District-General).—Sir, I beg to move :—

"That the demand under the head '21, Medical' for Rs 72,39,000 be reduced by Re. 1. (to raise a debate on the policy of the Government on their failure to include all funds for the construction of several hospital buildings in Chitaldrug District."

ಈ ಸೂಚನೆಯ ವಿಚಾರದಲ್ಲಿ ನಾಲ್ಕು ಮಾತುಗಳನ್ನಾಡಬಯಸುತ್ತೇನೆ. ಚಿತ್ರದುರ್ಗ ಜಿಲ್ಲೆಯ ಆಸ್ಪತ್ರೆ ಕಟ್ಟಡಗಳ ವಿಚಾರದಲ್ಲೇಕೆ ನಾನು ಕೇಳಿದೆನೆಂದರೆ, ಆ ಜಿಲ್ಲೆಯಲ್ಲೇ ಅನೇಕ ಆಸ್ಪತ್ರೆ ಕಟ್ಟಡಗಳಿಗಾಗಿ ಸಾರ್ವಜನಿಕರು ಲಕ್ಷಗಟ್ಟಲೆ ಧರ್ಮದ್ರವ್ಯವನ್ನು ಕೊಟ್ಟಿದ್ದಾರೆಂದು ಹೇಳುತ್ತೇನೆ. ಚಿಗಟೇರಿ ಮುರಗಪ್ಪಯೆಂಬುವರು ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಒಂದು ಆಸ್ಪತ್ರೆಯನ್ನು ಕಟ್ಟಿಸಿಕೊಡಬೇಕೆಂದಿದ್ದಾರೆ. ಹಾಗೆಯೇ ಹರಿಹರದಲ್ಲಿ ಒಬ್ಬರು ಒಂದು combined ಆಸ್ಪತ್ರೆಗೆ ಹಣ ಕೊಟ್ಟಿದ್ದಾರೆ. ಚಿತ್ರದುರ್ಗದಲ್ಲಿ ಆಸ್ಪತ್ರೆ ಫಂಡ್ ಕಮಿಟಿ ಎಂದು ಏರ್ಪಾಡಾಗಿ ಒಂದು ಲಕ್ಷ ರೂಪಾಯಿಗಳನ್ನು ಚಂದಾ ಎತ್ತಿ ಕೊಟ್ಟಿದ್ದರೂ ಇದುವರೆಗೂ ಯಾವ ಕೆಲಸವೂ ಆಗಿಲ್ಲ. ಚಳ್ಳಕೆರೆ ತಾಲ್ಲೂಕಿನ ಸಾರ್ವಜನಿಕರು ಸೇರಿ 25,000 ರೂಪಾಯಿಗಳಷ್ಟು ಧರ್ಮದ್ರವ್ಯ ವಸೂಲಮಾಡಿ ಕೊಟ್ಟಿದ್ದಾರೆ. ಹಿರಿಯೂರಿನಲ್ಲಿ ಕೊಯಮತ್ತೂರಿನ ಸ್ನೇಹಿತರೆಂಬುವರು

ಹೊರ ಪ್ರಾಂತ್ಯದಿಂದ ನಮ್ಮ ಸಂಸ್ಥಾನಕ್ಕೆ ಬಂದು, ಹಿರಿಯೂರಿನಲ್ಲಿ ಒಂದು ಆಸ್ಪತ್ರೆ ಕಟ್ಟಿಸುವುದಾದರೆ 25,000 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರು. ಮೊಳಕಾಲ್ಮುರುವಿನಲ್ಲೂ 25,000 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ ಆಸ್ಪತ್ರೆ ಕಟ್ಟಿ ಎಂದು ಹೇಳಿದ್ದಾರೆ. ಈ ರೀತಿಯಾಗೆಲ್ಲಾ ಅನೇಕ ಫಂಡುಗಳನ್ನು ತಮ್ಮಲ್ಲಿ ಡಿಪಾಜಿಟ್‌ಮಾಡಿದ್ದಾರೆ. ಆ ಡಿಪಾಜಿಟ್‌ಗಳನ್ನಿಟ್ಟ ಮೇಲೆಯೂ ಸರ್ಕಾರದವರು ಪ್ರಾರಂಭಮಾಡದೆ ಇದ್ದರೆ ಜನರಲ್ಲಿರುವ ಧರ್ಮಬುದ್ಧಿಗೇ ಕ್ರಮೇಣ ಲೋಪ ಬರುತ್ತದೆ. ಸಾಮಾನ್ಯವಾಗಿ ಹಣವನ್ನು ಕೊಡುವಾಗ ಕೊಡಬೇಕೇ, ಬೇಡವೇ ಎಂದು ಯೋಚನೆ ಮಾಡುತ್ತಿರುತ್ತಾರೆ. ಕೊಟ್ಟಮೇಲೆ ಕಟ್ಟಡವನ್ನಾದರೂ ಕಟ್ಟಿದ್ದನ್ನು ನೋಡಿಸಾಯೋಣ ಎಂದು ಹೇಳುತ್ತಿರುತ್ತಾರೆ. ಮುದುಕರಾದ ಮೇಲೆಯೇ ಇಂಥಾ ಧರ್ಮಭಾವನೆ ಬರುತ್ತದೆ. ಸಾಮಾನ್ಯವಾಗಿ ಮುದುಕರಾದಮೇಲೆ ತಾವು ಕೊಟ್ಟ ಹಣದಿಂದ ಕಟ್ಟಿದ ಆಸ್ಪತ್ರೆಯನ್ನು ನೋಡಿ ಸಾಯಬೇಕೆಂದಿರುತ್ತಾರೆ. ಅದನ್ನು ನೋಡದೆ ಅದೇ ಆಸೆಯಿಂದ ಸತ್ತರೆ ಮತ್ತೆ ಪುನರ್ಜನ್ಮವೆತ್ತಬೇಕಾಗುತ್ತದೆಂಬ ಭಾವನೆಯಿಂದ ಅವರು ಕೂಡಿರುತ್ತಾರೆ. ಆದ್ದರಿಂದ ಸರ್ಕಾರದವರು ಈ ಫಂಡುಗಳ ಜೊತೆಗೆ ಏರ್ಪಡಿಸಿರುವ ನಿಧಿಗಳಿಗೆ ಹೆಚ್ಚಿಗೆ ಹಣವನ್ನು ಒದಗಿಸಿ ಚಿತ್ರದುರ್ಗ ಜಿಲ್ಲೆಯಲ್ಲಿ ಈ ಕೆಲಸವನ್ನು ಪ್ರಾರಂಬಮಾಡಿ ಸದ್ಯಕ್ಕೆ ಸಾರ್ವಜನಿಕರ ಹಣದಿಂದಲೇ ಪ್ರಾರಂಭಮಾಡಿ, ಸರ್ಕಾರದವರು ಮುಂದೆ ಕೊಟ್ಟರೂ ಚಿಂತೆಯಿಲ್ಲವೆಂದು ಹೇಳುತ್ತೇನೆ.

Mr. SPEAKER.—It is One of the Clock now. The Demands will be put.

The question is :

"That a sum not exceeding Rs 72,89,000 be granted to the Government to defray the charges which will come in course of payment during the year ending 31st day of March 1951, in respect of 'Medical' ".

The motion was adopted.

Demand No. 16—22. Public Health.

Sri T. SIDDALINGIAH (Minister for Education and Public Health).—Sir, on the recommendation of His Highness the Maharaja, I beg to move:

"That a sum not exceeding Rs. 27,49,000 be granted to the Government to defray the charges which will come in course of payment during the year ending 31st day of March 1951, in respect of 'Public Health' ".

(None of the cut motions under the above head was moved.)

Mr. SPEAKER.—The question is :

"That a sum not exceeding Rs. 27,49,000 be granted to the Government to defray the charges which will come in course of payment during the year ending 31st day of March 1951, in respect of 'Public Health' ".

The motion was adopted.

Demand No. 17—23. Irrigation Works.

Sri T. MARIAPPA (Home Minister).—Sir, on the recommendation of His Highness the Maharaja, I beg to move :

"That a sum not exceeding Rs. 14,95,000 be granted to the Government to defray the charges which will come in course of payment during the year ending 31st day of March 1951 in respect of 'Irrigation Works' ".

(None of the cut motions was moved under the above head).

Mr. SPEAKER.—The question is :

"That a sum not exceeding Rs. 14,95,000 be granted to the Government to defray the charges which will come in course of payment during the year ending 31st day of March, 1951, in respect of 'Irrigation Works' ".

The motion was adopted.

Demand No. 18—24. Civil Works.

Sri T. MARIAPPA (ome Minister).—Sir, on the recommendation of His Highness the Maharaja, I beg to move :

"That a sum not exceeding Rs. 45,21,000 be granted to the Government to defray the charges which will come in course of payment during the year ending 31st day of March 1951, in respect of 'Civil Works' ".

(None of the cut motions under the above head was moved.)

Mr. SPEAKER.—The question is :

"That a sum not exceeding Rs. 45,21,000 be granted to the Government to defray the charges which will come in course of payment during the year ending 31st day of March 1951, in respect of 'Civil Works' ".

The motion was adopted.

Demand No. 19—24-A. Communications.

Sri T. MARIAPPA (Home Minister).—Sir, on the recommendation of His Highness the Maharaja. I beg to move:

"That a sum not exceeding Rs. 50,57,000 be granted to the Government to defray the charge which will come in course of payment during the year ending 31st day of March 1951, in respect of 'Communications' ".

(None of the cut motions under the above head was moved.)

Mr. SPEAKER.—The question is :

"That a sum not exceeding Rs. 50,57,000 be granted to the Government to defray the charges which will come in course of payment during the year ending 31st day of March 1951, in respect of 'Communications' ".

The motion was adopted.

Demand No. 19-A—24-B. Flying School.

Sri T. MARIAPPA (Home Minister).—Sir, on the recommendation of His Highness the Maharaja, I beg to move :

"That a sum not exceeding Rs. 3,46,000 be granted to the Government to defray the charges which will come in course of payment during the year ending 31st day of March 1951 in respect of 'Aviation' ".

(None of the cut motions under the above head was moved.)

Mr. SPEAKER.—The question is :

"That a sum not exceeding Rs. 3,46,000 be granted to the Government to defray the charges which will come in course of payment during the year ending 31st day of March 1951, in respect of 'Economic Conference'."

The motion was adopted.

Demand No. 19-B—25. Economic Conference.

Sri K. CHENGALARAYA REDDY (Chief Minister).—Sir, on the recommendation of His Highness the Maharaja, I beg to move :

"That a sum not exceeding Rs. 58,000 be granted to the Government to defray the charges which will come in course of payment during the year ending 31st day of March 1951, in respect of 'Economic Conference' ".

(None of the cut motions under the above head was moved.)

Mr. SPEAKER.—The question is :

"That a sum not exceeding Rs. 58,000 be granted to the Government to defray the charges which will come in course of payment during the year ending 31st day of March 1951, in respect of 'Economic Conference' ".

The motion was adopted.

Mr. SPEAKER.—The House will now adjourn. To-morrow all the remaining demands will be taken up.

The Assembly adjourned at Seven Minutes past One of the Clock to meet again at Thirty Minutes past Eight of the Clock, (morning) on Thursday, 30*th March* 1950.

WD 1429—GPB—400—28-4-50